# ಪ್ರಸಾದ
ಮಾಸಿಕ

ಸಂಪುಟ 39 ಸಂಚಿಕೆ 1 ಜನವರಿ 2024



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಅಯೋಧ್ಯೆಯಲ್ಲಿ ನಡೆದ ಶ್ರೀರಾಮ ಮಂದಿರ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಹಾಗೂ ಆದಿಚುಂಚನಗಿರಿ ಜಗದ್ಗುರುಗಳವರು, ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು, ಶ್ರೀ ವಚನಾನಂದ ಸ್ವಾಮಿಗಳು, ಶ್ರೀ ಶಾಂತವೀರ ಸ್ವಾಮಿಗಳು, ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮಿಗಳು, ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳಿದ್ದಾರೆ (22 ಜನವರಿ 2024)

# ಪ್ರಸಾದ

**ಸಂಪುಟ 39 : ಸಂಚಿಕೆ 1** **ಜನವರಿ 2024**

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**


**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರಮಠ

ಶ್ರೀ ಎಸ್.ಪಿ. ಮಂಜುನಾಥ್

ಡಾ. ಎನ್.ಎಸ್. ತಾರಾನಾಥ

ಡಾ. ಬಿ.ವಿ. ವಸಂತಕುಮಾರ್

ಡಾ. ವೈ.ಸಿ. ಭಾನುಮತಿ

ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)

ಶ್ರೀ ಆರ್.ಎಸ್. ಪೂರ್ಣಾನಂದ

ಶ್ರೀ ಕುಮಾರಸ್ವಾಮಿ ವಿರಕ್ತಮಠ


ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

ಮುಖಪುಟ ಚಿತ್ರ

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1064ನೆಯ ಜಯಂತಿ ಮಹೋತ್ಸವದ ಮೆರವಣಿಗೆಗೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು. ಕುಂದೂರು ಮಠದ ಶ್ರೀಗಳು, ಶ್ರೀ ಜಾವಗಲ್ ಶ್ರೀನಾಥ್, ಹೊಸಮಠ, ಮುಂಡರಗಿ, ದೇವನೂರು, ಗಾವಡಗೆರೆ ಮೊದಲಾದ ಮಠಗಳ ಶ್ರೀಗಳು ಹಾಗೂ ಇತರರಿದ್ದಾರೆ (10 ಜನವರಿ 2024)


**ದಶ ವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

# ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ವಿರಾಗ 9
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ಸೈಕಲ್ ಬಾಡಿಗೆ! 13
ಡಾ. ಎಂ.ಎನ್. ನಂದೀಶ್ ಹಂಚೆ

ಶಬರಶಂಕರ ವಿಲಾಸ–ಟೀಕು 16
ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ಹಿರಿಯೂರು ತಾಲ್ಲೂಕಿನ ಧಾರ್ಮಿಕ ಕ್ಷೇತ್ರಗಳ ದರ್ಶನ 23
ಡಾ. ಎಸ್.ಜಿ. ರಾಮದಾಸ ರೆಡ್ಡಿ
(ಧಾರ್ಮಿಕ ಕ್ಷೇತ್ರಗಳ ದರ್ಶನಮಾಲಿಕೆ)

ಸರ್ವಜ್ಞ ವಚನ ವ್ಯಾಖ್ಯಾನ 28
ಪ್ರೊ. ಮೊರಬದ ಮಲ್ಲಿಕಾರ್ಜುನ

ವಚನಸಾಹಿತ್ಯದ ಪ್ರಭಾವದಲ್ಲಿ ಕಂಬಾರರ ‘ಶಿವರಾತ್ರಿ’ ನಾಟಕ 34
ಕೆ.ಬಿ. ಹೇಮಲತ

ವಿದ್ಯೆ–ಅವಿದ್ಯೆ : ಸಿದ್ಧರಾಮನ ವಚನಾನುಸಂಧಾನ 40
ಡಾ. ಎನ್.ಎಂ. ಗಿರಿಜಾಪತಿ

ಶಿವಶರಣ ಮಡಿವಾಳ ಮಾಚಯ್ಯನವರ ಕೊಡುಗೆಗಳು 45
ಡಾ. ಎ.ವಿ. ನರಸಿಂಹಮೂರ್ತಿ

ಭೈರವೇಶ್ವರಕಾವ್ಯದ 'ಕಥಾಮಣಿಸೂತ್ರರತ್ನಾಕರ'
ಅಂತ್ಯದಲ್ಲಿ ವೀರಶೈವ ಧರ್ಮದ ಧರ್ಮಗ್ರಂಥಗಳ ವಿವರ 47
ಡಾ. ಬಿ. ನಂಜುಂಡಸ್ವಾಮಿ

ಗ್ರಂಥ ಪರಾಮರ್ಶೆ 50

ವಾರ್ತಾವಿಹಾರ 51
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 63

ಮೂರೈದು ತನುವಿಡಿದ
ನರಗುರಿಗಳೆಲ್ಲಾ ಭಕ್ತರಪ್ಪರೇ? ಅಲ್ಲಲ್ಲ!

ನಮ್ಮ ಶಿವಭಕ್ತರ್ಗೆ
ಸದ್ಗೋಷ್ಠಿ-ಸದಾಚಾರಂಗಳೇ ಪಾದಂಗಳು,
ಗುರುವೇ ಸ್ಥೂಲತನು, ಲಿಂಗವೇ ಸೂಕ್ಷ್ಮತನು,
ಜಂಗಮವೇ ಕಾರಣತನು, ಸಮ್ಯಕ್‌ಜ್ಞಾನವೇ ಪ್ರಾಣ,
ತೀರ್ಥ-ಪ್ರಸಾದಂಗಳೇ ನೇತ್ರಂಗಳು!

ಇಂತಪ್ಪ ತನುವಿಡಿದು–
ತಾವು ತಮ್ಮ ಊರಿಗೆ ಹೋಗುವಂತೆ
ಮುಕ್ತಿಪುರಕ್ಕೆ ಹೋಗಿ
ನೊಸಲ ಕಣ್ಣು, ಪಂಚ ಮುಖ ದಶ ಭುಜದ
ಉಮಾವಲ್ಲಭನಾದ ಪರಶಿವನ ಓಲಗದಲ್ಲಿ
ಗಣಂಗಳ ಮಧ್ಯದಲ್ಲಿ–
ಓಲಾಡುತಿಪ್ಪರಯ್ಯ ನಮ್ಮವರು!

ಇಂತಪ್ಪ ತನುವಿಡಿಯದ ಅಜ್ಞಾನಿಗಳು
ಕಿರುಬಟ್ಟೆಯಲ್ಲಿ ಹರಿದು ಕಂಗೆಟ್ಟು
ಕಾಡ ಹೊಕ್ಕು ಕಣ್ಣು ಕಾಣದೆ ಬಳಲುತ್ತಿಪ್ಪರು –
ಇದೇನಯ್ಯ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ ?!

– ಘನಲಿಂಗಿದೇವರು

# ಗುರುವಾಣಿ

> ಲೋಕದೊಳಗೆ ಇಪ್ಪರು, ಲೋಕದೊಳಗೆ ಸುಳಿವರು, ಲೋಕದ ಹಂಗಿಗರು!
> ಲಿಂಗಶುದ್ಧಿಯ ತಾವೆತ್ತ ಬಲ್ಲರು? ಪ್ರಸಾದ ನಿಷ್ಠೆಯ ತಾವೆತ್ತ ಬಲ್ಲರು?
> ಬರಿದೆ ಹೋರುವ ಭ್ರಮಿತರು
> ಇವರ ತ್ರಿವಿಧಕ್ಕೆ ವಿರಹಿತರೆಂಬೆ ಕೂಡಲಚನ್ನಸಂಗಮದೇವಾ

ಲೋಕದ ಸುಳಿಗೆ ಸಿಲುಕಿದ ಮರ್ತ್ಯದ ಭ್ರಮಿತ ಬದುಕು ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಕ್ಕೆ; ಶುದ್ಧ, ಸಿದ್ಧ, ಪ್ರಸಿದ್ಧರು ಎಂಬ ತ್ರಿವಿಧ ಪ್ರಸಾದಕ್ಕೆ ಹೊರತಾದುದು. ಲೌಕಿಕ ಸುಖಕ್ಕೆ ಆಸೆಪಡುವವರು ಸದಾ ಅದರಲ್ಲಿಯೇ ಮುಳುಗಿರಲು ಅಪೇಕ್ಷಿಸುತ್ತಾರೆ. ವಚನದ ಮೊದಲ ಸಾಲಿನಲ್ಲಿ ಬರುವ 'ಇಪ್ಪರು', 'ಸುಳಿವರು', 'ಹಂಗಿಗರು' ಎಂಬ ಪದಗಳನ್ನು ವಿಶೇಷವಾಗಿ ಗಮನಿಸಬೇಕು. ಜೀವಿಯು ಲೋಕದೊಡನೆ ಹೊಂದಿರುವ ಗಾಢಸಂಬಂಧವನ್ನು ಇವು ವಿಶದೀಕರಿಸುತ್ತವೆ. ಲೋಕದಲ್ಲಿ ಇರಬಯಸುವವರು ಇಲ್ಲಿನ ಸುಖ, ದುಃಖ, ಲಾಲಸೆಗಳ ನಡುವೆಯೇ ಸುಳಿದಾಡುತ್ತಾರೆ. ಜೀವಿಯ ಎಲ್ಲ ಇಂದ್ರಿಯಗಳೂ ತಮ್ಮ ಇಡೀ ಕ್ರಿಯಾಶಕ್ತಿಯನ್ನು ಲೌಕಿಕ ಸಂಗತಿಗಳತ್ತ ಸೆಳೆಯುವುದರಲ್ಲೇ ಸಂಭ್ರಮಿಸುತ್ತವೆ. ಇಂದ್ರಿಯಗಳು ನೀಡುವ ಭ್ರಮಾಜ್ಞಾನವನ್ನು ಅವಲಂಬಿಸಿದ ಜೀವಿ, ಅವುಗಳ ಹಂಗಿಗೆ ಒಳಗಾಗುತ್ತಾನೆ. 'ಹಂಗು' ಎಂದರೆ ಉಪಕಾರದ ಬಲೆಯಲ್ಲಿ ಬೀಳುವುದು. ಆತ್ಮಪ್ರತ್ಯಯವಿರಹಿತನಾಗುವ ಪ್ರಕ್ರಿಯೆ ಅದು. ಆತ್ಮಪ್ರತ್ಯಯವೇ ಇಲ್ಲದವನಿಗೆ, ಆತ್ಮದ ಅರಿವೆತ್ತಣದು! ಆತ್ಮದ ಅರಿವಿಲ್ಲದವನಿಗೆ, ಲಿಂಗಾಂಗಸಂಬಂಧದ ಪ್ರಜ್ಞೆ ಇರುವುದಿಲ್ಲ. ಅಂದಮೇಲೆ ಲಿಂಗಶುದ್ಧಿವಿಚಾರದಿಂದ ಆತ ದೂರ; ಲಿಂಗಶುದ್ಧಿ ಮತ್ತು ಪ್ರಸಾದನಿಷ್ಠೆಯಿಂದಲೂ ದೂರ. ಸುಮ್ಮಸುಮ್ಮನೆ ಲೋಕದಾಟದಲ್ಲಿ ಹೀಗೆ ಹೋರಾಡುವುದರಲ್ಲಿಯೇ ಜೀವಿ ನಿರತನಾಗಿರುತ್ತಾನೆ; ಅದಕ್ಕೆ ಯಾವ ಅರ್ಥವೂ ಇಲ್ಲ.

ಲೋಕಾಯತರು ಈ ಲೋಕವನ್ನು ನೋಡುವ ದೃಷ್ಟಿಕೋನಕ್ಕೂ, ಆಸ್ತಿಕರ ದೃಷ್ಟಿಕೋನಕ್ಕೂ ತುಂಬ ಅಂತರವಿರುತ್ತದೆ. ಲೋಕಾಯತರು ಭೂಮಿಯನ್ನು ಕೇವಲ ಒಂದು ಭೌತವಸ್ತುವಿನಂತೆ ಭಾವಿಸುತ್ತಾರೆ. ಅವುಗಳ ಕಾರ್ಯಕಾರಣ ಸಂಬಂಧ

ದೃಗ್ಗೋಚರವಾದುದು. ಆದರೆ ಆಸ್ತಿಕನೊಬ್ಬ ಲೋಕವನ್ನು ಹೃದಯದ ಮೂಲಕ ಪರಿಗ್ರಹಿಸುವುದರಿಂದ ಸಹಜವಾಗಿಯೇ ಆತನ ನೋಟ ಭಿನ್ನವಾಗಿರುತ್ತದೆ. ಅದಕ್ಕೊಂದು ಉದಾಹರಣೆ ಎಂದರೆ ಶ್ರೀರಾಮ. ರಾಮ ಏಕಕಾಲಕ್ಕೆ ಅನೇಕವನ್ನು ಪ್ರತಿನಿಧಿಸುವಂತಹವನು. ಅವನೊಬ್ಬ ಸಕಲಗುಣ ಪರಿಪೂರ್ಣ, ಆದರ್ಶಪುರುಷ. ಒಳ್ಳೆಯ ಪುತ್ರ, ಒಳ್ಳೆಯ ಪ್ರಭು, ಒಳ್ಳೆಯ ಗೃಹಸ್ಥ; ದಾರ್ಶನಿಕತೆಯೇ ಮೂರ್ತಿವೆತ್ತ ಮಹಾನಾಯಕ. ಹೀಗೆ ಜನರು ಅವನನ್ನು ವಿಧವಿಧವಾಗಿ ಗುರುತಿಸಿ ಗೌರವಿಸುತ್ತಾರೆ. ಲೋಕದ ಕಣ್ಣಿಗೆ ಕಾಣುವ ಈ ರಾಮನ ಚಿತ್ರವನ್ನು ಯಾರು ಬೇಕಾದರೂ ಪರಿಭಾವಿಸಬಹುದು.

ಲೌಕಿಕ ಸಂಬಂಧಗಳು ಜೀವಿಯನ್ನು ಮತ್ತೆ ಮತ್ತೆ ಭವಬಂಧನಕ್ಕೆ ಎಳೆಯುತ್ತವೆ. ಅದರಲ್ಲೇ ಸಂಭ್ರಮಿಸುತ್ತವೆ, ವಿರಮಿಸುತ್ತವೆ. ಈ ಸಂಬಂಧಗಳ ಸರಮಾಲೆಗೆ ಕೊನೆ ಎಂಬುದಿಲ್ಲ. ಏಕೆಂದರೆ ಇದರ ಮೊದಲನ್ನು ಅರಿತವರು ಯಾರೂ ಇಲ್ಲ. ಲೋಕ ಆರಂಭವಾದಾಗಿನಿಂದ ಮನುಷ್ಯ ಆದರ್ಶದ ಕಡೆಗೆ ನಡೆಯುತ್ತಲೇ ಇದ್ದರೂ, ಅದು ಸಾಧ್ಯವಾಗುತ್ತಿಲ್ಲ. ಏಕೆಂದರೆ ಲೋಕದ ಸುಳಿ ಸರಳರೇಖಾಕೃತಿಯಲ್ಲಿ ಇರುವುದಿಲ್ಲ; ಚಕ್ರಗತಿಯಲ್ಲಿರುತ್ತದೆ. ಅದರ ಆರಂಭ ಮತ್ತು ಅಂತ್ಯ ಯಾರಿಗೂ ತಿಳಿಯುವುದಿಲ್ಲ. ಇವು ಸರಳರೇಖಾಕೃತಿಯ ಸಂಬಂಧಗಳಾಗಿ ಇರುವುದಿಲ್ಲ. ಆದುದರಿಂದಲೇ ರಾಮ, ರಾವಣ ಎಂಬ ಪ್ರತಿಸ್ಪರ್ಧಿಗಳ ಪ್ರಮೇಯದಲ್ಲಿ ನಾವು ಪಾತ್ರಗಳನ್ನು, ಜೀವನವನ್ನು ಗ್ರಹಿಸುತ್ತೇವೆ. ಇಂಥ ಭ್ರಮೆಯಿಂದ ಹೊರತಾದವರು ಮಾತ್ರ ಈ ಮಿಥ್ಯಾಜಗತ್ತನ್ನು ಅರ್ಥಮಾಡಿಕೊಳ್ಳಬಲ್ಲರು. ಆಗ ಅವರಿಗೆ ಕುವೆಂಪು ಅವರು “ಆ ರಾಮಂ ಆ ರಾವಣಂ ದಿಟಂ” ಎಂಬ ಮಾತು ಅರಿವಿಗೆ ಬರುತ್ತದೆ. ರಾಮರಾವಣರು ಭೌತಿಕವಾಗಿ ಒಂದೇ ರೀತಿಯ ಅಂಶಗಳನ್ನು ಹೊಂದಿರುವಂತೆ ತೋರಿದರೂ ಅವರವರ ಕ್ರಿಯೆಗಳ ಭಿನ್ನತೆಯ ಆಧಾರದ ಮೇಲೆ ಆ ಪಾತ್ರಗಳ ಊರ್ಧ್ವಮುಖ ಅಥವಾ ಅಧೋಮುಖ ಚಲನೆ ಕಂಡುಬರುತ್ತದೆ. ಲೋಕಸುಖಕ್ಕೆ ಆಶಿಸಿ ರಾವಣ ಸೀತೆಯನ್ನು ಅಪಹರಿಸಿದ್ದು ಒಂದು ಕಡೆ; ಕೊಟ್ಟ ಮಾತಿಗಾಗಿ ಸಕಲ ಸಂಪತ್ತನ್ನೂ ತಿರಸ್ಕರಿಸಿದ ರಾಮ ಮತ್ತೊಂದು ಕಡೆ, ಎಲ್ಲ ಸಂಪತ್ತನ್ನೂ ತಿರಸ್ಕರಿಸಿದ ರಾಮ ಲೋಕದ ಹಂಗನ್ನು ಕಳೆದುಕೊಂಡು, ಲೋಕದ ಪ್ರೀತಿಯಲ್ಲಿ ಬಂದಿಯಾದ. ಲೋಕದಲ್ಲಿ ಸ್ಥಿರವಾಗಿ ನಿಲ್ಲಲು ಬಯಸಿದ ರಾವಣ ಲೋಕತಿರಸ್ಕೃತನಾದ. ಈ ಕಾರಣದಿಂದ ಸಾಧಾರಣ ಲೌಕಿಕ ದೃಷ್ಟಿಗಿಂತಲೂ ಅಲೌಕಿಕ ಅಂತರೀಕ್ಷಣೆಯನ್ನು ಹೊಂದುವುದು ಅತ್ಯಗತ್ಯ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ಮೊನ್ನೆ ಮೊನ್ನೆ ದೇಶದ ಪ್ರಜಾಪ್ರಭುತ್ವದ ಆತ್ಮವಾದ ಸಂಸತ್ತಿನಲ್ಲಿ ಕೆಲ ಕಿಡಿಗೇಡಿಗಳು ಹುಸಿ ಬಾಂಬ್ ಬೆದರಿಕೆ ಹಾಕಿ ಎಲ್ಲರ ಗಮನ ಸೆಳೆದಿದ್ದಾರೆ. ಹಳೆಯ ಸಂಸತ್ತಿನ ಮೇಲೆ ಉಗ್ರರ ದಾಳಿಯ ನಂತರ ನಮ್ಮ ದೇಶದವರೇ ನೂತನ ಸಂಸತ್ತಿನ ಮೇಲೆ ದಾಳಿ ಮಾಡಿದ್ದು ಸಖೇದಾಶ್ಚರ್ಯವನ್ನುಂಟುಮಾಡಿದೆ. ಈ ಎರಡು ದಾಳಿಗಳ ಸಂದರ್ಭದಲ್ಲಿನ ಭದ್ರತಾಲೋಪದ ಬಗ್ಗೆ ಎಲ್ಲರೂ ಮಾತನಾಡುವುದನ್ನು, ಚರ್ಚಿಸುವುದನ್ನು ಗಮನಿಸಿದ್ದೇವೆ. ಮತ್ತೆ ಕೆಲವರು ಅವರು ಹಾಗೆ ಮಾಡಲು ನಿರುದ್ಯೋಗ ಕಾರಣ ಎಂಬ ನೆಪಗಳನ್ನು ಇಲ್ಲಿ ಹುಡುಕಿದ್ದಾರೆ.

ಇಲ್ಲಿ ಸ್ಪಷ್ಟವಾಗಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಈ ಉಗ್ರವಾದಿಗಳು ಹಾಗೂ ನಿರುದ್ಯೋಗಿಗಳೆಲ್ಲರೂ ವಿದ್ಯಾವಂತರೆಂಬುದು. ಈ ದೇಶದ ಯಾವ ಅನಕ್ಷರಸ್ಥನೂ ಈ ಬಗೆಯ ರಾಷ್ಟ್ರದ್ರೋಹದ ಆಲೋಚನೆ ಮಾಡುವುದಿಲ್ಲ. ಹಾಗಿದ್ದರೆ ವಿದ್ಯಾವಂತರೇ ಹೀಗೆ ಮಾಡಲು ಕಾರಣವೇನು? ಅವರು ವಿದ್ಯಾವಂತರಾಗಿದ್ದರಿಂದ ಇತರರಿಗೆ ಕಾಣದ ಸಂಗತಿಗಳು ಅವರಿಗೆ ಕಾಣಿಸುತ್ತಿವೆಯೇ? ಅಥವಾ, ಅವರು ಸಮಾಜವನ್ನು ಭಿನ್ನವಾಗಿ ನೋಡುತ್ತಿದ್ದಾರೆಯೆ? ಬಹುಶಃ ನಮ್ಮ ವಿದ್ಯಾಭ್ಯಾಸದ ಕ್ರಮದಲ್ಲಿಯೇ ಏನೋ ಲೋಪವಿರಬೇಕೆನಿಸುತ್ತದೆ. ಈ ದಾಳಿಯಲ್ಲಿ ಬಂಧಿತರಾದ ಬಹುತೇಕ ಎಲ್ಲರೂ ಸುಶಿಕ್ಷಿತರೇ ಆಗಿದ್ದಾರೆ. ಈ ಶಿಕ್ಷಣ ಅವರಲ್ಲಿ ಉಂಟುಮಾಡುತ್ತಿರುವ ವ್ಯಾಕುಲತೆಯಾದರೂ ಏನು, ವಿದ್ಯಾಭ್ಯಾಸ ಅವರನ್ನು ಯೋಗ್ಯರನ್ನಾಗಿ ಮಾಡುತ್ತಿದೆಯೆ ಅಥವಾ ವಿತಂಡವಾದಿಗಳನ್ನಾಗಿ ಮಾಡುತ್ತಿದೆಯೆ ಎಂಬುದನ್ನೂ ಚಿಂತಿಸಬೇಕು. ಶಿಕ್ಷಣ ಇಂದು ಕೇವಲ ಉದ್ಯೋಗ ಸೃಷ್ಟಿಸುವ ಸಾಧನವಾಗಿದ್ದು, ಅದು ಕೇವಲ ಸರ್ಕಾರಿ ಅಥವಾ ಖಾಸಗಿ ವಲಯದ ಕೆಲಸ ಎಂಬ ತಪ್ಪು ಗ್ರಹಿಕೆಯನ್ನು ನಾವು ಬದಲಾಯಿಸಿಕೊಳ್ಳಬೇಕು.

18ನೇ ಶತಮಾನದಲ್ಲಿ ಯೂರೋಪಿನಲ್ಲಿ ಆಧುನಿಕ ಶಿಕ್ಷಣ ಸಾರ್ವತ್ರಿಕವಾಗಿ ದೊರಕಿದ ಸಂದರ್ಭವನ್ನು ಗಮನಿಸಬೇಕು. ರೂಸೋ ಎಂಬ ದಾರ್ಶನಿಕ ಇಂಥ ಶಿಕ್ಷಣ ದೊರೆತರೆ ಲೋಕ ತಾನೇ ಬದಲಾಗುತ್ತದೆ ಎಂದು ಹೇಳಿದ. ಆತನ ಮಾತಿನಂತೆ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಲಾಯಿತು. ಆದರೆ ಏಕೋ ಏನೋ ರೂಸೋ

ತನ್ನ ಇಬ್ಬರು ಮಕ್ಕಳನ್ನು ಶಾಲೆಗೆ ಕಳಿಸಲಿಲ್ಲ. ಅದಕ್ಕೆ ಕಾರಣ ಕೇಳಿದಾಗ ಅವನು "ಮನುಷ್ಯ ಓದುತ್ತಾ ಓದುತ್ತಾ ಪ್ರಾಣಿಯಾಗುತ್ತಾನೆ. ನನಗೆ ನನ್ನ ಮಕ್ಕಳನ್ನು ಪ್ರಾಣಿಗಳನ್ನಾಗಿ ಮಾಡಲು ಮತ್ತು ನೋಡಲು ಇಷ್ಟವಿರಲಿಲ್ಲ" ಎಂದ. ವಾಸ್ತವವಾಗಿ ಸುಶಿಕ್ಷಿತ ಮನುಷ್ಯ 'ಸೋಶಿಯಲ್ ಅನಿಮಲ್' ಆಗಬೇಕು ಎಂದು ರೂಸೋ ಬಯಸಿದ್ದ. ಆತ ಸಾರ್ವತ್ರಿಕ ಶಿಕ್ಷಣ ದೊರಕಬೇಕು ಎಂದದ್ದು ಆ ದೃಷ್ಟಿಯಿಂದ.

ಆದರೆ ಆ ಕಾಲಕ್ಕೆ ಶಿಕ್ಷಣವನ್ನು, ಸರ್ಕಾರವನ್ನು, ವ್ಯವಸ್ಥೆಯನ್ನು ನಿಯಂತ್ರಿಸುತ್ತಿದ್ದ ಬಂಡವಾಳಶಾಹಿಗಳು ತಮ್ಮ ಸ್ವಾರ್ಥಕ್ಕಾಗಿ ಶಿಕ್ಷಣವನ್ನು ಒಂದು ಸರಕನ್ನಾಗಿ ಬಳಸಿಕೊಂಡರು. ಶಿಕ್ಷಣ ಮಾನವಸಂಪನ್ಮೂಲದ ಒಂದು ಭಾಗ; ಅಂಥ ಸಂಪನ್ಮೂಲವೂ ಬಂಡವಾಳವೃದ್ಧಿಗೆ ಒಂದು ಸೋಪಾನವಾಯಿತು. ಇದನ್ನರಿತ ರೂಸೋ ತನ್ನ ಮೂಲತತ್ತ್ವಕ್ಕೆ ವಿರುದ್ಧವಾಗಿದ್ದ ಶಿಕ್ಷಣದಿಂದ ಮಕ್ಕಳನ್ನು ದೂರವಿಟ್ಟ.

ಶಿಕ್ಷಣ ಸಾರ್ವತ್ರಿಕವಾಗಿದ್ದರಿಂದ ಲೋಕಕ್ಕೆ ಒಳಿತಾಯಿತು, ನಿಜ. ಆದರೆ ಮನುಷ್ಯನನ್ನು ಸಮಾಜಜೀವಿಯಾಗಿಸುವ ಅದರ ಉದ್ದೇಶ ವಿಫಲವಾಗಿದೆ. ಸಮಾಜ ಇಂದು ವ್ಯಕ್ತಿಕೇಂದ್ರಿತವಾಗಿ ಪರಿವರ್ತಿತವಾಗಿದೆ. ಬಂಡವಾಳಶಾಹಿ ಆಲೋಚನೆ ಹಾಗೇ ಉಳಿದಿದೆ. ಜಾಗತೀಕರಣದ ಬಳಿಕ 'ಸಮಾಜಜೀವಿ' ಎನ್ನುವ ಪದಕ್ಕೆ ಅರ್ಥವೇ ಇಲ್ಲವಾಗಿದೆ.

ನಮಗೆ ಸೂಕ್ತ ಉದ್ಯೋಗ ಸಿಗುತ್ತಿಲ್ಲ ಎಂಬ ಮನಃಸ್ಥಿತಿಯನ್ನು ಹೊಂದಿದ ಯುವಕರು ಈಗ ಎಲ್ಲ ಕಡೆ ಸಿಗುತ್ತಾರೆ. ಇಂದಿನ ವಿದ್ಯಾರ್ಥಿಯು ಒಂದು ರೀತಿಯ ಯಾವುದೋ ವಿಷಯತಜ್ಞತೆಯುಳ್ಳ ಶಿಕ್ಷಣವನ್ನು ಪಡೆಯುತ್ತಾನೆ. ಅಂಥ ಕೆಲಸವೇ ಆತನಿಗೆ ಬೇಕು. ಬೇರೆ ಕೆಲಸ ಮಾಡಲು ಆತ ಸಿದ್ಧನಿಲ್ಲ ಅಥವಾ ಆತನ ಜ್ಞಾನ ಬೇರೆ ಕೆಲಸ ಮಾಡಲು ಉಪಯೋಗಕ್ಕೆ ಬರುತ್ತಿಲ್ಲ.

ಹೀಗೆ ಜ್ಞಾನಧಾರಿತ ಅಥವಾ ಅಜ್ಞಾನಾಧಾರಿತ ಉದ್ಯೋಗದ ಕಲ್ಪನೆಯನ್ನು ಮೀರದೆ ಹೋದರೆ, ಮತ್ತೆ ಜಡ ಸಮಾಜ ಸೃಷ್ಟಿಯಾಗುತ್ತದೆ. ಉದ್ಯೋಗದ ಈ ಅಡ್ಡಗೋಡೆಯನ್ನು ಮುರಿಯದ ಹೊರತು ವರ್ಗ ಅಥವಾ ಜಾತಿವ್ಯವಸ್ಥೆ ನಾಶವಾಗುವುದಿಲ್ಲ. ಇಂದು ಡಾಕ್ಟರ್, ಇಂಜಿನಿಯರ್, ವಕೀಲರು ಹೀಗೆ ತಜ್ಞತೆಯನ್ನಾಧರಿಸಿದ, ವೃತ್ತಿಗಳನ್ನಾಧರಿಸಿದ ಹೊಸ ವರ್ಗ ಸೃಷ್ಟಿಯಾಗುತ್ತಿದೆ. ಸಮಾಜಜೀವಿ, ರೈತ, ಧಾರ್ಮಿಕ ವ್ಯಕ್ತಿ, ಸಂಭಾವಿತ ಇಂಥವರಿಗೆ ಇಲ್ಲಿ ಮಾನ್ಯತೆ ಇಲ್ಲ. ಶಿಕ್ಷಣ ನಮ್ಮನ್ನು ಸಮಾಜಜೀವಿಯನ್ನಾಗಿಸದಿದ್ದರೂ ಪರವಾಗಿಲ್ಲ, ಸಮಾಜ ನನಗೇನೂ ಮಾಡುತ್ತಿಲ್ಲ ಎಂಬ ಹಪಹಪಿಯನ್ನು ಸೃಷ್ಟಿಸದೆ ಇರುವಂತಾಗಬೇಕು. ಶಿಕ್ಷಣದ ಮೂಲ ಉದ್ದೇಶವನ್ನು ಮತ್ತೊಮ್ಮೆ ಪರಿಶೀಲಿಸಲು ಇದು ಸಕಾಲವಾಗಿದೆ.

**ಡಾ. ಎಂ.ಎನ್. ನಂದೀಶ್ ಹಂಚೆ**

ಪ್ರವಚನಸಾರ

# ವಿರಾಗ

**ಶ್ರೀ ಸಿದ್ಧೇಶ್ವರ ಸ್ವಾಮಿಗಳು**

ಸಂತರು ಸತ್ಯಪ್ರಿಯರು. ಸುಮಧುರ ಹೃದಯಿಗಳು. ಅವರ ಜೀವನ ಹೂವಿಗೆ ಸಮಾನ. ಹೂವು ದೇವನಿಗೂ ಪ್ರಿಯ. ಆ ಹೂವಿಗೇನು ಚಿನ್ನದ ರನ್ನದ ಮೌಲ್ಯವಿಲ್ಲ. ದಿವ್ಯ ಸೌಂದರ್ಯವಿದೆ. ಅದು ಸತ್ಯಂ-ಶಿವಂ-ಸುಂದರಂ ಎನ್ನಿಸಿದ ಸೌಂದರ್ಯ! ಹಾಗೆಯೇ ಸಂತರ ಜೀವನ. ಅವರಲ್ಲಿ ಭೌತಿಕ ಸಿರಿ ಇರಬಹುದು, ಇರಲಿಕ್ಕಿಲ್ಲ. ಆದರೆ ಆಧ್ಯಾತ್ಮಿಕ ಸಿರಿಗೇನೂ ಕೊರತೆಯಿಲ್ಲ. ಆ ಅಮರ ಸಿರಿ ಎಂಥದು? ಅವರ ಹೃದಯಕಮಲದಲ್ಲಿ ಪರಮ ಪ್ರೇಮರೂಪ ಸದ್ಭಕ್ತಿಯ ಮಕರಂದ ಸುಜ್ಞಾನದ ಸೌಂದರ್ಯ, ಸ್ವಾನುಭವದ ಸುಗಂಧ! ಅಂತೆಯೇ ಅವರ ಬಳಿ ರಾಗ-ದ್ವೇಷಾದಿಗಳೆಂದೂ ಸುಳಿಯವು!

ನಾವು ಸಂಸಾರಿಗರು ಹಾಗಲ್ಲ. ನಮ್ಮ ಜೀವನದ ತುಂಬ 'ರಾಗ-ದ್ವೇಷ'ದ ಜಾಲ. ಜೀವನದ ಕೊನೆಗೆ ಸಾವಿನಲ್ಲಿಯೂ ಅದೇ! ಒಬ್ಬ ತಂದೆಯು ಸಾಯುವಾಗ ಮಗನಿಗೆ ಕರೆದು ಹೇಳಿದ—"ನನ್ನ ಆತ್ಮಕ್ಕೆ ಶಾಂತಿ ಸಿಗಬೇಕಾದರೆ, ನೀನೊಂದು ಕೆಲಸ ಮಾಡಬೇಕು; ಮಾಡುತ್ತೇನೆಂದು ವಚನ ಕೊಡು!" ತಂದೆಯು ಏನೋ ಘನವಾದುದನ್ನು ಹೇಳುವನೆಂದು, "ಆಗಲಿ, ನೀನು ಹೇಳುವ ಕೆಲಸ ಮಾಡುತ್ತೇನೆ" ಎಂದು ವಚನವಿತ್ತ. "ನೋಡು ಮಗನೆ, ನೆರೆಮನೆಯವರ ಮನೆ ನಮ್ಮ ಪಕ್ಕದಲ್ಲಿ ಉಳಿದಿರಬಾರದು, ಹಾಗೆ ಮಾಡು" ಎಂದು ಹೇಳಿ ತಂದೆ ಕಣ್ಣು ಮುಚ್ಚಿದ. ಸಾಯುವಾಗಲೂ ಮಗನ ಮನದಲ್ಲಿ ದ್ವೇಷದ ಬೀಜ ಬಿತ್ತಿ ಹೋಗಿದ್ದ! ಇಂಥವರಿಗೆ ಇನ್ನೆಲ್ಲಿ ಭಕ್ತಿ? ಮುಕ್ತಿ? ಆದರೆ ಅದೇ ಮುಕ್ತಿಯ ನೆಲೆ, ಭಕ್ತಿಯ ಸೆಲೆ ಎನ್ನಿಸಿದ ಸಂತರು ವಿರಾಗಿಗಳು, ನಿರಾಸಕ್ತರು. ಈ ಪ್ರಪಂಚದಲ್ಲಿ ಪರಮಸತ್ಯವನ್ನಲ್ಲದೆ ಅವರು ಇನ್ನೇನನ್ನೂ ಬಯಸರು. ಸತ್ಯದ ಮೇಲೆ ಅವರಿಗೆ ಅಷ್ಟು ಪ್ರೇಮ! ಅದೇ ಸದ್ಭಕ್ತಿ!!

ಛತ್ರಪತಿ ಶಿವಾಜಿ ಒಂದು ದೇಶದ ರಾಜ. ಸಮರ್ಥ ರಾಮದಾಸರು ಅವನ ಗುರು. ಆದರೂ ರಾಮದಾಸರಿಗೆ ಕೌಪೀನ ಬಿಟ್ಟು ಮೈಮೇಲೆ ಮತ್ತೊಂದು ಬಟ್ಟೆ ಇರಲಿಲ್ಲ. ಅಂಥ ನಿರಾಸಕ್ತ ವೈರಾಗ್ಯದ ಜೀವನ ಸಾಗಿಸುತ್ತಿದ್ದರು. ಒಂದು ದಿನ ರಾಮದಾಸರು ಶಿವಾಜಿ ಮಹಾರಾಜನ ಅರಮನೆಯ ಎದುರು 'ಜೈ ರಘುವೀರ ಸಮರ್ಥ!' ಎಂದು ಭಿಕ್ಷಾಪಾತ್ರೆ ಹಿಡಿದು ನಿಂತಿದ್ದರು.

ಶಿವಾಜಿ ಮಹಾರಾಜನಿಗೆ ಅಚ್ಚರಿ ಹಾಗೂ ಆನಂದ! ಗುರುಸೇವೆಯ ಈ ಸದವಕಾಶ ಕಳೆದುಕೊಳ್ಳಬಾರದೆಂದು ಒಂದು ಶಾಸನಪತ್ರ ಬರೆದು ಗುರುಗಳ ಭಿಕ್ಷಾಪಾತ್ರೆಗೆ ಹಾಕಿದ. 'ಶಿವಾಜಿ ಮಹಾರಾಜನ ಸಮಸ್ತ ರಾಜ್ಯವೇ ಶ್ರೀ ಗುರು ರಾಮದಾಸರ ಪಾದಕ್ಕೆ ಸಮರ್ಪಣ!' ಎಂದು ಬರೆದಿತ್ತು ಅದರಲ್ಲಿ.

ಶ್ರೀ ರಾಮದಾಸರು ಕೇಳಿದರು "ರಾಜ್ಯವನ್ನೆಲ್ಲ ನನಗೆ ಕೊಟ್ಟು ನೀನೇನು ಮಾಡುವೆ?" "ಗುರುಗಳೇ, ತಾವು ಹೇಳಿದಂತೆ ಕೇಳಿಕೊಂಡಿರುವೆ!" ಎಂದ ರಾಜ. "ತೆಗೆದುಕೋ ಇದನ್ನು, ನನ್ನ ಹೆಸರಿನಲ್ಲಿ ನೀನು ಈ ರಾಜ್ಯವನ್ನು ರಕ್ಷಿಸು" ಎಂದು ರಾಮದಾಸರು ಆ ಶಾಸನಪತ್ರವನ್ನು ಹಿಂತಿರುಗಿಸಿದ್ದರು!

ಅಂಥ ವೈರಾಗ್ಯಶೀಲ ಸಂತರ ನುಡಿಮುತ್ತುಗಳನ್ನು ಭಕ್ತಿಸಾಧಕನು ಅವಶ್ಯವಾಗಿ ಕೇಳಬೇಕು. ಆ ನುಡಿಗಳಲ್ಲಿ ಅವರು ಕಂಡುಂಡ ಸತ್ಯದ ಬೆಳಕಿದೆ. ಹೃದಯದ ಮಾಧುರ್ಯವಿದೆ. ಅವರ ಅಲೌಕಿಕ ಬೆಳಕಿನ ಮಾತುಗಳನ್ನು ಕೇಳಿದರೆ ನಮ್ಮ ಮನದ ಕತ್ತಲೆ ಕಳೆದುಹೋಗುತ್ತದೆ. ಹೃದಯ ಹಸನಾಗುತ್ತದೆ.

ಪಾತಾಳದಗ್ಘವಣೆಯ ನೇಣಿಲ್ಲದೆ ತೆಗೆಯಬಹುದೆ
ಸೋಪಾನದ ಬಲದಿಂದಲ್ಲದೆ?
ಶಬ್ದಸೋಪಾನವ ಕಟ್ಟಿ ನಡೆಸಿದರು ಪುರಾತನರು,
ದೇವಲೋಕಕ್ಕೆ ಬಟ್ಟೆ ಕಾಣಿರೋ.
ಮರ್ತ್ಯರ ಮನದ ಮೈಲಿಗೆಯ ಕಳೆಯಲೆಂದು
ಗೀತಮಾತೆಂಬ ಜ್ಯೋತಿಯ ಬೆಳಗಿಕೊಟ್ಟರು,
ಕೂಡಲಚೆನ್ನಸಂಗನ ಶರಣರು.

ಚನ್ನಬಸವಣ್ಣನವರು ಮಹಾತ್ಮರ ಮಾತಿನ ಮಹಿಮೆಯನ್ನು ಸೊಗಸಾಗಿ ಚಿತ್ರಿಸಿರುವರು. ಸಂತರ ಶರಣರ ನುಡಿಗಳು ದೇವಲೋಕದ ದಾರಿದೀಪ! ನಮ್ಮ ಮನದ ಮೈಲಿಗೆಯನ್ನು ಕಳೆಯುವ ಪಾವನಗಂಗೆ!

ಒಂದು ಕಡೆ ಮಿಥ್ಯವಾದ ಭೂಮಂಡಲ. ಇನ್ನೊಂದು ಕಡೆ ಸತ್ಯವಾದ ಬ್ರಹ್ಮಮಂಡಲ. ಇವೆರಡನ್ನೂ ಒಂದುಗೂಡಿಸುವ ಸೋಪಾನವೆಂದರೆ ಬಲ್ಲವರ ನುಡಿ. ಅವರ ಅಮರ ನುಡಿಗಳ ನೆನಹಿನ ಸಂಗವೇ ಭಕ್ತಿಗೆ ಶಕ್ತಿ! ಮುಕ್ತಿಗೆ ಮೂಲ!!

ಸಂತರ ಮಾತುಗಳು ನಮಗೆ ಬೇಕಾದಷ್ಟು ಗೊತ್ತಿವೆ. ಗೊತ್ತಿದ್ದೂ ಗೊತ್ತಿಲ್ಲದಂತೆ ಬದುಕುತ್ತಿದ್ದೇವೆ. ಅದರಿಂದ ನಮಗೆ ಭಕ್ತಿ-ಮುಕ್ತಿದಾಯಕ ವೈರಾಗ್ಯದ ಬದುಕು ಸಾಧ್ಯವಾಗುತ್ತಿಲ್ಲ. ಗೀತೆಯ ಆ ಏಳುನೂರು ಶ್ಲೋಕಗಳು ಅದನ್ನು ಉಪದೇಶಿಸಿದ ಕೃಷ್ಣನಿಗೂ, ಕೇಳಿದ ಅರ್ಜುನನಿಗೂ ನೆನಪಿರಲಿಕ್ಕಿಲ್ಲ! ನಮಗೆ ಸಂಪೂರ್ಣ ಗೀತೆಯೇ ಮುಖೋದ್ಗತ!

'ಆಸೆಯೇ ದುಃಖಕ್ಕೆ ಕಾರಣ' ಎಂಬ ಬುದ್ಧನ ಮಾತು ಯಾರಿಗೆ ಗೊತ್ತಿಲ್ಲ? ಆದರೂ ನಮಗೆ ಅಳಿಯಾಸೆ ಬಿಡಲಾಗುತ್ತಿಲ್ಲ . ನಾವು ನಿತ್ಯವೂ ಸಾಕಷ್ಟು ಗ್ರಂಥಗಳ ಪಾರಾಯಣ ಮಾಡುತ್ತೇವೆ. ಅವುಗಳ ಪರಿಣಾಮ ನಮ್ಮ ಮೇಲೆ ಎಷ್ಟಾಗಿದೆ? ಸತ್ಯದ ಪ್ರೇಮ ವೈರಾಗ್ಯಭಾವ ಎಷ್ಟು ಬೆಳೆದಿದೆ?

ಧರ್ಮದ ತಿಳುವಳಿಕೆ ಇಲ್ಲದವರಷ್ಟೇ ಅಳಿಯಾಸೆ ಮಾಡುತ್ತಾರೆಂದಲ್ಲ. ಧರ್ಮಗ್ರಂಥಗಳ ಮೇಲೆ ಸಾಕಷ್ಟು ಪ್ರಭುತ್ವ ಸಾಧಿಸಿರುತ್ತೇವೆ. ಅವುಗಳ ಸಹಾಯದಿಂದ ಎಷ್ಟೋ ಎತ್ತರಕ್ಕೆ ಏರಿರುತ್ತೇವೆ. ಆದರೂ ನೇರವಾಗಿ ಆಸೆಯ ಕೊಳ್ಳದಲ್ಲಿಯೇ ಬೀಳುತ್ತೇವೆ. ನಮ್ಮ ಸಾಧನಾಸೌಧದ ಮೇಲೆ 'ಸತ್ಯಮೇವ ಜಯತೇ' ಎಂದು ಬರೆಸಿದ್ದೇವೆ. ಆದರೆ ನಾವೇ ಆ ಮಾತನ್ನು ಎಷ್ಟು ಸಲ ಮರೆತಿಲ್ಲ? ಈ ಮರೆವು ಯಾರನ್ನು ಬಿಟ್ಟಿದೆ?

ಒಬ್ಬ ಅರ್ಚಕ. ಪ್ರಾಮಾಣಿಕ. ಘನ ವಿದ್ವಾಂಸ. ಐವತ್ತರ ಮಧ್ಯಮ ವಯಸ್ಸು. ಮನೆಯಲ್ಲಿ ಹೆಂಡತಿ ಮಕ್ಕಳು. ನೆಮ್ಮದಿಯ ಬದುಕು. ಅವನ ಜೀವನದಲ್ಲಿ ನಡೆದ ಒಂದು ಘಟನೆ.

ದೇವರ ಸೇವೆಯಲ್ಲಿ ಆತನಿಗೆ ಅಪಾರ ನಿಷ್ಠೆ. ಸಮಯಕ್ಕೆ ಸರಿಯಾಗಿ ಮಂದಿರದ ದೇವರಿಗೆ ಅಷ್ಟವಿಧಾರ್ಚನ, ಷೋಡಶೋಪಚಾರ ಮಾಡುತ್ತಿದ್ದ. ಭಕ್ತಿಭಾವದಿಂದ ದೇವರನಾಮ ಹಾಡುತ್ತ ಸಾಮಗಾನ ಮಂತ್ರೋಪಚಾರಗಳಿಂದ ಭಕ್ತಿಯ ಪರಿಸರವನ್ನೇ ನಿರ್ಮಿಸಿದ್ದ. ಆ ದೇಶದ ಮಹಾರಾಜನೇ ಅರ್ಚಕನಿಗೆ ಆಶ್ರಯದಾತನಾಗಿದ್ದ. ಆದರೂ ಅರ್ಚಕನು ಸಾದಾ ಜೀವನ ಸಾಗಿಸುತ್ತ ಸಂತೃಪ್ತಿಯಿಂದ ಇದ್ದ.

ಒಂದು ದಿನ ಅರ್ಚಕನ ಹೆಂಡತಿಯ ತಂಗಿಯು ಊರಿಂದ ಬಂದಳು. ಅವಳ ಪತಿ ದೊಡ್ಡ ಸಿರಿವಂತ. ಬಹಳ ವರ್ಷಗಳ ನಂತರ ಅಕ್ಕನ ಮನೆಗೆ ಬಂದಿದ್ದಳು. ಮೈತುಂಬ ಬೆಲೆಯುಳ್ಳ ಆಭರಣ ಧರಿಸಿದ್ದಳು.

ಅರ್ಚಕ ಮನೆಗೆ ಬಂದ. ಅಕ್ಕ-ತಂಗಿಯರು ಆತ್ಮೀಯವಾಗಿ ಮಾತ ನಾಡುತ್ತಿದ್ದರು. ಹೆಂಡತಿಯ ತಂಗಿ ಪ್ರಸನ್ನವದನಳಾಗಿದ್ದಳು. ಹೆಂಡತಿಯ ಮುಖ ಮಾತ್ರ ಬಾಡಿತ್ತು. "ಎಂದೂ ಕಾಣದ ದುಃಖ ಇವಳಲ್ಲಿ ಇಂದೇಕೆ?" ಎಂದು ಅರ್ಚಕ ಯೋಚಿಸಿದ. 'ನನ್ನ ತಂಗಿಯ ವೈಭವವೆಲ್ಲಿ? ಈ ನನ್ನ ಅರ್ಚಕ ಪತಿಯ ದಾರಿದ್ರ್ಯವೆಲ್ಲಿ?' ಎಂಬ ಅಳಲು ಹೆಂಡತಿಯ ಮುಖದಲ್ಲಿ ಆಳವಾಗಿ ಮೂಡಿತ್ತು. ಅರ್ಚಕ ಗುರುತಿಸಿದ.

ಆ ದಿನ ರಾತ್ರಿ ಅರ್ಚಕನಿಗೆ ನಿದ್ರೆ ಬರಲಿಲ್ಲ. 'ಮೂವತ್ತು ವರುಷಗಳು ಆದರೂ ನನ್ನ ಹೆಂಡತಿಗೆ ಒಂದು ಒಳ್ಳೆಯ ಆಭರಣ ಮಾಡಿಸಿಕೊಡಲು ನನ್ನಿಂದಾಗಲಿಲ್ಲ. ಈ ಕಡುಬಡತನದಲ್ಲಿ ಅದು ಸಾಧ್ಯವಾಗುವುದಾದರೂ ಹೇಗೆ? ಅವಳ ಅಂತರಂಗದ ಅಳಲನ್ನು ಕಳೆಯುವುದಾದರೂ ಹೇಗೆ?' ಎಂದು ಅರ್ಚಕ ಆಳವಾಗಿ ಚಿಂತಿಸಿದ.

ತಕ್ಷಣ ಅವನಿಗೊಂದು ಉಪಾಯ ಹೊಳೆಯಿತು. ಮಧ್ಯರಾತ್ರಿ ಒಂದು ಗಂಟೆಗೆ ಗುಡಿಯತ್ತ ಹೆಜ್ಜೆ ಹಾಕಿದ. ಗುಡಿಯಲ್ಲಿ ರಾಧಾಕೃಷ್ಣರ ಮೂರ್ತಿಗೆ ಭಕ್ತರು ಸಾಕಷ್ಟು ಆಭರಣ ಮಾಡಿಸಿ ಕೊಟ್ಟಿದ್ದರು. ಒಮ್ಮೆಯೂ ಅರ್ಚಕನು ಆ ದೇವರ ಒಡವೆಗಳನ್ನು ಆಸೆಗಣ್ಣಿನಿಂದ ನೋಡಿರಲಿಲ್ಲ. ಇಂದು ಮಾತ್ರ ತಡೆಯಲಾಗಲಿಲ್ಲ!

ಗುಡಿಯ ತಲುಪಿದ. ಒಳಗೆ ಹೋಗಿ ಭದ್ರವಾಗಿ ಬಾಗಿಲು ಹಾಕಿಕೊಂಡ. ರಾಧಾಕೃಷ್ಣರ ಸುಂದರ ಮೂರ್ತಿಗಳು ಅದೇಕೋ ನಸುನಗೆ ಬೀರಿದವು. ಪಕ್ಕದಲ್ಲಿದ್ದ ದೀಪದ ಬೆಳಕಿನಲ್ಲಿ ಆಭರಣಗಳು ಸುಮ್ಮನೆ ಥಳಥಳಿಸಿದವು! ಒಂದು ಕ್ಷಣ ನಿಂತು ಅರ್ಚಕ ಸುತ್ತೆಲ್ಲ ಕಣ್ಣಾಡಿಸಿದ. ಕಳೆದ ಮೂವತ್ತು ವರುಷಗಳಿಂದ ಆ ಪಾವನ ಮೂರ್ತಿಗಳನ್ನು ನಿಷ್ಠೆಯಿಂದ ಅರ್ಚಿಸಿದ್ದ. ಅವುಗಳನ್ನು ನೋಡುತ್ತ, ಸೇವೆ ಮಾಡುತ್ತ ಹೆಂಡತಿ ಮಕ್ಕಳನ್ನೂ ಮರೆತಿದ್ದ! ಭಗವದಾನಂದ ಅನುಭವಿಸಿದ್ದ!

ಆ ಪವಿತ್ರ ದೇವತಾಮೂರ್ತಿಗಳು ಇಂದು ಅರ್ಚಕನಿಗೆ ಕಾಣಿಸಲಿಲ್ಲ. ಹೆಂಡತಿ, ಹೆಂಡತಿಯ ತಂಗಿಯ ಆಭರಣ ಬಿಟ್ಟರೆ ಬೇರೇನೂ ಕಾಣಲಿಲ್ಲ. ಗೀತೆ, ಉಪನಿಷತ್ತು ಸಕಲಶಾಸ್ತ್ರಗಳೆಲ್ಲ ಮರೆತುಹೋಗಿದ್ದವು. ಅರ್ಚಕರ ತಲೆ ಮಂದವಾಗಿತ್ತು! ಮರಗಟ್ಟಿತ್ತು!! ರಾಧೆಯ ಮೇಲಿನ ಅಮೂಲ್ಯ ಆಭರಣ ಒಂದನ್ನು ಎತ್ತಿಕೊಂಡ. "ಹೆಂಡತಿಯ ಕೊರಳಿಗೆ ಎಷ್ಟು ಸೊಗಸಾಗಿರುತ್ತದೆ ಈ ಆಭರಣ!" ಎಂದ.

ನಾವು ಸಂತರ ನುಡಿಗಳನ್ನು ಬರಿದೆ ಆಲಿಸಿದರೆ, ಪಠಿಸಿ ಪಾರಾಯಣ ಮಾಡಿದರೆ ವಿರಾಗ, ವಿರತಿ ಸಾಧಿಸದು. ಆ ಸಂತರ-ಮಹಂತರ ಪಾವನ ಸಂಗ, ಸತ್ಸಂಗವೂ ಅಷ್ಟೇ ಅವಶ್ಯ. ಅದು ನಮ್ಮ ಸಾಧನೆಗೆ ವಜ್ರಕವಚವನ್ನು ತೊಡಿಸುತ್ತದೆ. ಅದರಿಂದ ವೈರಾಗ್ಯ ಸಿದ್ಧಿಸುತ್ತದೆ! ಅದೇ ಭಕ್ತಿಭವನಕ್ಕೆ ಭದ್ರ ಬುನಾದಿಯಾಗುತ್ತದೆ!!

☐

ಜ್ಯೋತಿಯ ಮುಟ್ಟಿದ ಬತ್ತಿ ಎಲ್ಲ ಜ್ಯೋತಿಯಪ್ಪವಯ್ಯಾ
ಸಾಗರವ ಮುಟ್ಟಿದ ನದಿಗಳೆಲ್ಲ ಸಾಗರವಪ್ಪವಯ್ಯಾ
ಪ್ರಸಾದವ ಮುಟ್ಟಿದ ಪದಾರ್ಥವೆಲ್ಲ ಪ್ರಸಾದವಪ್ಪವಯ್ಯಾ
ಲಿಂಗವ ಮುಟ್ಟಿದ ಅಂಗವೆಲ್ಲ ಲಿಂಗವಪ್ಪವಯ್ಯಾ
ಸಕಳೇಶ್ವರದೇವಾ, ನಿಮ್ಮ ಮುಟ್ಟಿದವರೆಲ್ಲ ನಿಮ್ಮಂತಪ್ಪರಯ್ಯಾ

– ಸಕಳೇಶ ಮಾದರಸರು

# ಸೈಕಲ್ ಬಾಡಿಗೆ!

ಡಾ. ಎಂ.ಎನ್. ನಂದೀಶ್ ಹಂಚೆ

ಕಚೇರಿಯ ಸಮಯಕ್ಕೆ ಸರಿಯಾಗಿ ರಾಮಾನುಜ ರಸ್ತೆಯಲ್ಲಿ ನಡೆದು ಬರುತ್ತಿದ್ದ ಬಸವಣ್ಣನವರಿಗೆ ಆ ದಿನದ ಶ್ರೀಮಠದ ಉಳಿದ ಕೆಲಸಗಳದ್ದೇ ಚಿಂತೆ. ಶ್ರೀಮಠದ ಪ್ರಾಕಾರಕ್ಕೆ ಕಾಲಿಟ್ಟರೂ ಅವರ ಮನಸ್ಸಿನ ತುಂಬ ಆ ಕೆಲಸಗಳದೇ ಯೋಚನೆ. ಪೂಜೆ, ಪ್ರಸಾದ ಮುಗಿಸಿ, ಕಚೇರಿಯ ಕೆಲ ಕಾಗದ ಪತ್ರಗಳನ್ನು ಗಮನಿಸುತ್ತಿದ್ದ ರಾಜೇಂದ್ರ ಶ್ರೀಗಳ ಕಾಲಿಗೆ ಎಂದಿನಂತೆ ನಮಿಸಿದರು, ಬಸವಣ್ಣನವರು. ಅವರ ಅನ್ಯಮನಸ್ಕತೆಯನ್ನು ಗಮನಿಸಿದ ರಾಜೇಂದ್ರ ಶ್ರೀಗಳು, "ಏನು ಬಸವಣ್ಣ, ಎಲ್ಲಿದೆ ಜ್ಞಾನ" ಎಂದರು. ಎಚ್ಚೆತ್ತ ಬಸವಣ್ಣನವರು "ಏನೂ ಇಲ್ಲ ಬುದ್ಧಿ, ಹಿಂದಿನ ವಾರ ಶ್ರೀಮಠದ ಯಾವ ಕೆಲಸವೂ ಸರಿಯಾಗಿ ಆಗಿಲ್ಲ. ಈ ವಾರವಾದರೂ ಅವೆಲ್ಲವನ್ನೂ ಹೇಗಾದರೂ ಮಾಡಿ ಮುಗಿಸಬೇಕು ಎಂದು ಯೋಚಿಸುತ್ತಿದ್ದೆ" ಎಂದರು. ಶ್ರೀಗಳು "ಆಯಿತು ಬಿಡೋ ದಡ್ಡ, ಯಾವ ಕಾರ್ಯ ಯಾವ ಕಾಲಕ್ಕೆ ಆಗಬೇಕು ಎಂದು ದೇವರು ನಿಶ್ಚಯಿಸಿರುತ್ತಾನೆ, ಆಗ ಆ ಕಾರ್ಯ ಆಗುತ್ತದೆ. ನಮ್ಮ ಪ್ರಯತ್ನ ಕೇವಲ ನೆಪ, ತಿಳ್ಕೋ" ಎಂದರು. ಬಸವಣ್ಣನವರು "ನಮ್ಮ ಪ್ರಯತ್ನವೂ ಮುಖ್ಯ ಅಲ್ಲವೆ? ಬುದ್ದಿ" ಎಂದರು. ಹೌದೆಂದ ಶ್ರೀಗಳು ಬಸವಣ್ಣನವರು ಹೇಳಿದ ಕೆಲಸಗಳ ಪಟ್ಟಿಯನ್ನು ಕೇಳಿ, "ಆಯಿತು, ಇಷ್ಟೆಲ್ಲ ಕೆಲಸಗಳನ್ನು ನೀನು ನಡೆದುಕೊಂಡು ಮಾಡುತ್ತೇನೆ ಅಂದರೆ ಇನ್ನು ಒಂದು ವಾರವಾದರೂ ಆಗುವುದಿಲ್ಲ. ಒಂದು ಕೆಲಸ ಮಾಡು. ಸುಣ್ಣದಕೇರಿಯಲ್ಲಿ ಅಬ್ದುಲ್ಲನ ಬಳಿ ಒಂದು ಸೈಕಲ್ ಬಾಡಿಗೆಗೆ ತೆಗೆದುಕೊಂಡು ಹೋಗು. ಕಚೇರಿಯಿಂದ ಕಚೇರಿಗೆ ಅಲೆಯುವುದು ಇರುತ್ತೆ" ಎಂದರು.

ಆ ಕಾಲಕ್ಕೆ ಶ್ರೀಮಠದಲ್ಲಿ ಯಾವ ವಾಹನದ ವ್ಯವಸ್ಥೆಯೂ ಇರಲಿಲ್ಲ. ರಾಜೇಂದ್ರ ಮಹಾಸ್ವಾಮಿಗಳು ಅಥವಾ ಅವರ ಗುರುಗಳಾದ ಮಂತ್ರಮಹರ್ಷಿಗಳು ಎತ್ತಿನ ಕಮಾನುಗಾಡಿಯಲ್ಲಿ ಪ್ರಯಾಣಿಸುತ್ತಿದ್ದರು. ಒಂದು ಕಾರಿತ್ತಾದರೂ ಅದನ್ನು ವಿಶೇಷ ಸಂದರ್ಭದಲ್ಲಿ ಮಾತ್ರ ಬಳಸುತ್ತಿದ್ದರು. ಆ ಕಾಲಕ್ಕೆ ಸೀಮೆಯೆಣ್ಣೆಯಿಂದ ಮೊದಲುಗೊಂಡು ಡೀಸೆಲ್, ಪೆಟ್ರೋಲ್ ಎಲ್ಲವನ್ನೂ ಪಡಿತರದ ಮೂಲಕ ಪರ್ಮಿಟ್ಟಿನಲ್ಲಿ ಪಡೆಯಬೇಕಾಗಿತ್ತು. ಅರವತ್ತರ ದಶಕದಲ್ಲಿ ಮಧ್ಯಮ ವರ್ಗದ ಅತ್ಯಂತ ಶ್ರೀಮಂತ ವಾಹನವೆಂದರೆ ಸೈಕಲ್.

ಸೈಕಲ್‌ಗೆ ಆ ಕಾಲದಲ್ಲಿ ಕಡ್ಡಾಯವಾಗಿ ಡೈನಮೋ ಇರಲೇಬೇಕು, ಬೆಲ್ ಕಡ್ಡಾಯ. ಇವು ಇಲ್ಲದಿದ್ದರೆ ದಂಡ ವಿಧಿಸಲಾಗುತ್ತಿತ್ತು. ಬಹಳ ಜನರಿಗೆ ಸೈಕಲ್ ಖರೀದಿಸುವುದೊಂದು ಅಸಾಮಾನ್ಯ ವಿಷಯವಾಗಿತ್ತು. ಹಾಗಾಗಿ ಬಾಡಿಗೆ ಸೈಕಲ್ ಬಳಸುತ್ತಿದ್ದರು. ಈಗ ಕಾರನ್ನು ಬಾಡಿಗೆಗೆ ಪಡೆಯುವಂತೆಯೇ ಆಗ ಸೈಕಲ್ಲನ್ನು ಬಾಡಿಗೆಗೆ ಪಡೆಯಲಾಗುತ್ತಿತ್ತು.

ಸೈಕಲ್‌ಗಳನ್ನು ಬಾಡಿಗೆಗೆ ನೀಡುವವನು ಸ್ವಲ್ಪ ಅನುಕೂಲಸ್ಥನಾಗಿರುತ್ತಿದ್ದ. ನೀವು ಗಮನಿಸಬೇಕು, ಈಗಿನ ವಾಹನಗಳಿಗೆ ಇರುವ ಹಾಗೆ ಸೈಕಲ್‌ಗಳಿಗೆ ನಂಬರ್ ಪ್ಲೇಟ್ ಇರುತ್ತಿರಲಿಲ್ಲ. ಯಾರೋ ಒಬ್ಬ ಬಾಡಿಗೆಗೆ ಪಡೆದು ಸೈಕಲ್ ಕದ್ದರೆ ಏನು ಮಾಡುವುದು ಎಂದರೆ, ಅದು ಸಾಧ್ಯವಿಲ್ಲದ ಮಾತು. ಯಾಕೆಂದರೆ ಪರಿಚಯವಿದ್ದವರಿಗೆ ಹೊರತು ಬೇರೆಯವರಿಗೆ ಸೈಕಲ್ ಬಾಡಿಗೆಗೆ ನೀಡುತ್ತಿರಲಿಲ್ಲ. ಆ ಕಾಲಕ್ಕೆ ಸೈಕಲ್ ಯಾರ ಬಳಿ ಇದ್ದರೂ ಪರವಾನಗಿ ಇರಲೇಬೇಕು. ಆ ಕಾಲಕ್ಕೆ ಗಂಟೆಗೆ 10 ಪೈಸೆ, ದಿನವೊಂದಕ್ಕೆ 5 ರೂಪಾಯಿ ಬಾಡಿಗೆ ಇರುತ್ತಿತ್ತು.

ಶ್ರೀಗಳವರ ಮಾತಿನಂತೆ ಬಸವಣ್ಣನವರು ಸುಣ್ಣದಕೇರಿ ಅಬ್ದುಲ್ಲನ ಬಳಿ ಸೈಕಲ್ ಬಾಡಿಗೆಗೆ ಪಡೆದು ಕೆಲಸಕ್ಕೆ ತೆರಳಿದರು. ಸಂಜೆ ಆರು ಗಂಟೆಯ ಸಮಯಕ್ಕೆ ಶ್ರೀಮಠಕ್ಕೆ ಹಿಂದಿರುಗಿ ಕಚೇರಿಯ ವಿಷಯವನ್ನೆಲ್ಲ ಶ್ರೀಗಳಲ್ಲಿ ನಿವೇದಿಸಿ "ಸೈಕಲ್ ವಾಪಸ್ಸು ನೀಡಿ ಬರುತ್ತೇನೆ" ಎಂದರು. ಅಷ್ಟರಲ್ಲಿ ಶ್ರೀಗಳು "ಬಸವಣ್ಣ, ನಾಳೆಯೂ ಏನಾದರೂ ಕಚೇರಿ ಕೆಲಸ ಇರಬೇಕಲ್ಲ" ಎಂದರು.

"ಇಲ್ಲ ಬುದ್ದಿ, ಬಹುಮಟ್ಟಿಗೆ ಎಲ್ಲ ಕೆಲಸವೂ ನಿಮ್ಮ ಕೃಪೆಯಿಂದ ಈವತ್ತು ಮುಗಿದಿದೆ. ನಾಳೆ ಡಿಸಿ ಕಚೇರಿಯಲ್ಲಿ ಮಾತ್ರ ಕೆಲಸ, ನಡೆದುಕೊಂಡೇ ಹೋಗುತ್ತೇನೆ. ಸೈಕಲ್ ನಿಲ್ಲಿಸಿಕೊಂಡರೆ ಸುಮ್ಮನೆ ಬಾಡಿಗೆ ಕಟ್ಟಬೇಕು" ಎಂದರು. "ಏ ದಡ್ಡ, ಡಿಸಿ ಆಫೀಸ್ ಜೊತೆಗೆ ಬೇರೆ ಏನಾದರೂ ಕೆಲಸ ಇದ್ದರೆ ಅದನ್ನೂ ಮುಗಿಸು, ಈಗ ಸೈಕಲ್ ವಾಪಸ್ಸು ಕೊಟ್ಟು, ನಾಳೆ ಮತ್ತೆ ಸೈಕಲ್ ತರೋಕೆ ಹೋದರೆ ಸಮಯ ಹಾಳು. ಶ್ರೀಮಠದಲ್ಲೇ ಸೈಕಲ್ ಇರಲಿ, ಬಿಡು" ಎಂದರು. ಶ್ರೀಗಳ ಮಾತಿಗೆ ಪ್ರತಿ ಹೇಳಲಾರದೆ ಬಸವಣ್ಣನವರು ಮನೆಗೆ ತೆರಳಿದರು.

ಮಾರನೇ ದಿನ ಕೂಡ ಕಚೇರಿಯ ಕೆಲಸ ಎಲ್ಲ ಮುಗಿಸಿ ಬಂದು, ಶ್ರೀಗಳಿಗೆ ವರದಿ ಒಪ್ಪಿಸಿ ಸೈಕಲ್ ವಾಪಸ್ಸು ಬಿಡುವ ಮಾತನಾಡಿದಾಗ ಬಸವಣ್ಣನವರಿಗೆ, ಶ್ರೀಗಳು "ಲೇ, ನಿನ್ನೆ ಕೂಡ ಏನೂ ಕೆಲಸ ಇಲ್ಲ ಕೇವಲ, ಬರಿ ಡಿಸಿ ಆಫೀಸ್ ಕೆಲಸ ಎಂದೆ. ಈಗ ನೋಡು ಸೈಕಲ್ ಎಷ್ಟು ಉಪಯೋಗಕ್ಕೆ ಬಂತು. ಕೆಲಸ ಎಲ್ಲ ಮುಗಿಸಿ ಸಂಜೆಗೆ ಬಂದಿದ್ದೀಯಾ. ಸೈಕಲ್ ಶ್ರೀಮಠದಲ್ಲೇ ಇರಲಿ, ನಾಳೆ ಕೊಟ್ಟರೆ ಆಯಿತು" ಎಂದರು. ಇದೇ ರೀತಿ ಸೈಕಲ್ ಬಾಡಿಗೆಗೆ ಪಡೆದು ನಾಲ್ಕು ದಿನಗಳು ಕಳೆಯಿತು. ಕಚೇರಿಯ

ಯಾವ ಕೆಲಸವೂ ಇಲ್ಲದಿದ್ದರೂ ಸಹ ಸೈಕಲ್ ಶ್ರೀಮಠದಲ್ಲೇ ಉಳಿಯಿತು. ಬಸವಣ್ಣನವರು ಎಷ್ಟೇ ಹೇಳಿದರೂ ಶ್ರೀಗಳು ಯಾವುದಾದರೂ ಒಂದು ನೆಪ ಹೇಳಿ ಸೈಕಲ್ ಹಿಂದಿರುಗಿಸಲು ಬಿಡುತ್ತಿರಲಿಲ್ಲ. ಇದು ಬಸವಣ್ಣನವರಿಗೆ ಮಾತ್ರವಲ್ಲ, ಶ್ರೀಮಠದ ಮಿಕ್ಕವರಿಗೂ ಕುತೂಹಲ ಮೂಡಿಸುತ್ತಿತ್ತು. ಆದರೆ ಕಾರಣ ಯಾರಿಗೂ ತಿಳಿಯುತ್ತಿರಲಿಲ್ಲ. ಶ್ರೀಗಳವರನ್ನು ಪ್ರಶ್ನಿಸುವಂತೆಯೂ ಇರಲಿಲ್ಲ. ಕ್ಯಾತನಹಳ್ಳಿ ಶ್ರೀಗಳಿಗೆ ಬಹುಶಃ ಕಾರಣ ತಿಳಿದಿತ್ತು. ಆದರೆ ಅವರನ್ನು ಕೇಳುವ ಧೈರ್ಯ ಯಾರಿಗೂ ಇರಲಿಲ್ಲ.

ಐದು ದಿನ ಕಳೆದ ಮೇಲೆ ಶ್ರೀಗಳು "ಲೋ... ಬಸವಣ್ಣನನ್ನು ಕೂಗೋ" ಎಂದು ಶ್ರೀಮಠದ ಸೇವಕ ಶಿವರಾಮುವಿಗೆ ಹೇಳಿದರು. "ಅವರಿನ್ನೂ ಬಂದಿಲ್ಲ ಬುದ್ಧಿ, 10 ಗಂಟೆಗೆ ಬರಬಹುದು" ಎಂದರು. "ಶ್ರೀಗಳು ಹಾಗಿದ್ದರೆ ಒಂದು ಕೆಲಸ ಮಾಡು. ನೀನೇ ಸೈಕಲ್ ತೆಗೆದುಕೊಂಡು ಹೋಗಿ ಅಬ್ದುಲ್ಲನಿಗೆ 5 ರೂಪಾಯಿ ಬಾಡಿಗೆ ಕೊಟ್ಟು ಬಾ" ಎಂದು ಅವನ ಕೈಗೆ ಹಣ ಕೊಟ್ಟರು. ಶಿವರಾಮು ಸೈಕಲ್ ವಾಪಸ್ಸು ನೀಡಿ ಬಂದರು. ಕಚೇರಿಗೆ ಸಮಯಕ್ಕೆ ಸರಿಯಾಗಿ ಬಂದ ಬಸವಣ್ಣನವರಿಗೆ ವಿವರವೆಲ್ಲ ತಿಳಿದು, ಶ್ರೀಗಳ ಬಳಿ ಹೋಗಿ "ಅಲ್ಲ ಬುದ್ಧಿ, ಮೂರು ದಿನ ಏನೂ ಕೆಲಸವಿಲ್ಲದೆ ಸೈಕಲ್ ಶ್ರೀಮಠದಲ್ಲೇ ಇತ್ತು. ಸುಮ್ಮಸುಮ್ಮನೆ ಮೂರು ದಿನದ ಬಾಡಿಗೆ ವ್ಯರ್ಥವಾಯಿತಲ್ಲ" ಎಂದರು. ಅಲ್ಲೇ ಇದ್ದ ಕ್ಯಾತನಹಳ್ಳಿ ಶ್ರೀಗಳು "ಲೋ ಬಾಡಿಗೆ ಕೊಡೋದಕ್ಕೆ ದುಡ್ಡು ಇದ್ದರಲ್ಲವೆ, ಸೈಕಲ್ ವಾಪಸ್ಸು ನೀಡೋದು" ಎಂದರು.

ಈ ಯಾವ ಸಂಭಾಷಣೆಯ ಮೇಲೂ ಗಮನವಿಲ್ಲದೆ ನಿರುಮ್ಮಳರಾಗಿದ್ದ ಶ್ರೀಗಳನ್ನು ತದೇಕಚಿತ್ತದಿಂದ ನೋಡಿ, ಕಂಗಳು ತುಂಬಿಕೊಂಡ ಬಸವಣ್ಣನವರು ರಾಜೇಂದ್ರ ಶ್ರೀಗಳ ಪಾದಕ್ಕೆ ಬಿದ್ದು ಅಳತೊಡಗಿದರು. ಶ್ರೀಗಳು "ಏನೋ ಯಾಕೋ ಅಳ್ತೀಯ. ಈವೊತ್ತು ಮಠಕ್ಕೆ ಜೇಮಾರಳ್ಳಿ ಸಾಹುಕಾರರು ಬಂದಿದ್ದರು. 10 ರೂಪಾಯಿ ದಕ್ಷಿಣೆ ಹಾಕಿದರು. ಅದರಲ್ಲಿ 5 ರೂಪಾಯಿ ಬಾಡಿಗೆ ನೀಡಿದ್ದೇವೆ. ನಮಗೆ ಮೊದಲ ದಿನವೇ ಕೆಲಸವಿಲ್ಲವೆಂದು ಗೊತ್ತಿದ್ದರೂ ಬಾಡಿಗೆ ನೀಡಲು ಹಣವಿರಲಿಲ್ಲ" ಎಂದರು. "ಅಲ್ಲ ಬುದ್ಧಿ, ಹಣಕ್ಕೆ ಇಷ್ಟು ಕಷ್ಟಪಡುತ್ತಿದ್ದರೂ ಇಷ್ಟು ಜನ ವಿದ್ಯಾರ್ಥಿಗಳನ್ನು ಸಲಹುತ್ತಿದ್ದೀರಿ. ಇದೆಲ್ಲ ಬೇಕಾ, ಬುದ್ಧಿ" ಎಂದರು. "ಬಸವಣ್ಣ, ದೇವರು ನಮ್ಮನ್ನು ಹೀಗೆ ಸೇವೆ ಮಾಡಲೆಂದೇ ನಿಯಮಿಸಿದ್ದಾನಲ್ಲಪ್ಪ, ಅದನ್ನು ಮಾಡಬೇಕು. ನಾವು ಒಂದು ಸೈಕಲ್ ಇದ್ದ ಹಾಗೆ. ಇದು ಕೂಡ ಬಾಡಿಗೆ ಸೈಕಲ್ಲೇ. ದೇವರು ಇದರ ಕಾರ್ಯ ಮುಗಿದ ಮೇಲೆ ವಾಪಸ್ಸು ಪಡೀತಾನೆ ಬಿಡು" ಎಂದು ಹೇಳುತ್ತ ಶ್ರೀಮಠದೊಳಕ್ಕೆ ತೆರಳಿದರು.

□

ವೀರಶೈವ ಟೀಕು ಸಾಹಿತ್ಯ ಸರಣಿ

# ಶಬರಶಂಕರ ವಿಲಾಸ–ಟೀಕು

ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು

**ಚ॥** ಮರಕತವೇದಿಮಾಣಿಕದ ಬಘದೊಗೆ ನೀಲದಕಂಬಮಿಂದುಕಾಂ ।
ತರುಚಿರ ಕಟ್ಟಿಮಂ ಪವಳದೊಳ್ದೂಲೆ ರನ್ನದ ಜಂತೆಪುಷ್ಯರಾ ।
ಗರುಚಿವಿತರ್ದಿಮೌಕ್ತಿಕಲಸತ್ಕಲಶಂ ಪರಿಶೋಭೆವೆತ್ತ ಬ ।
ಜ್ಜರದ ಕವಾಟಮೊಂದೆ ಕರಮೊಪ್ಪಿದುದೀಶಸಭಾನಿಕೇತನಂ ॥ ೭೦ ॥

**ಟೀಕ॥** ಮರಕತವೇದಿ – ಪಚ್ಚೆಗಳ ಜಗುಲಿಯ, ಮಾಣಿಕದ ಬೋದಿಗೆ, ಪದ್ಮರಾಗಗಳ – ಕಂಭಗಳ ಮೇಲಣ ತುಂಡು, ದೂಲ – ನೀಲದ ಕಂಭಂ, ಇಂದ್ರನೀಲದ ಸ್ತಂಭವು, ಇಂದುಕಾಂತ – ಚಂದ್ರಕಾಂತ ಶಿಲೆಗಳಿಂದ, ರುಚಿರ – ಮನೋಹರವಾದ, ಕುಟ್ಟಿಮಂ ಕೆತ್ತಿದ ನೆಲ, ಹಾಸಿ, ಜೋಡಿಸಿ, ಕಟ್ಟಿ, ಕಟ್ಟಿರುವ ಭೂಮಿ, ಪವಳದೊಲ್ದೂಲೆ – ಹವಳದ, ಒಳ್ಳೆಯ, ದೂಲ – ಕನಕ ಶಾಲಾ ಕಾನಿಬದ್ಧಪ್ರವಾಳಮನಿಲತಾನಿಚಿತ ಮಹಾಸ್ಥೂಣೆ, ರತ್ನದ ಜಂತೆ – ರತ್ನದ ಅಡ್ಡಪಟ್ಟಿಕೆ, ಪುಷ್ಯರಾಗರುಚಿವಿತರ್ದಿ – ಬಿಳಿಯ ತರುಪುಗಳ ಹಾಗೆ ರತ್ನಕಾಂತಿಯುಳ್ಳ ಜಗುಲಿ, ಮೌಕ್ತಿಕಲಸತ್ಕಲಶಂ – ಮುತ್ತಿನ ಶೋಭಿಸುವ ಶಿಖರವು, ಪರಿಶೋಭೆವೆತ್ತ – ಸರ್ವತ್ರ ಪ್ರಕಾಶವಂಪಡೆದ, ಬಜ್ಜರದ – ವಜ್ರದ, ಕವಾಟಂ – ಕದವು, ಒಂದೆ – ಹೊಂದಿರಲಾಗಿ, ಈಶಸಭಾನಿಕೇತನಂ – ಶಿವನೋಲಗದ ಮನೆಯು, ಕರಂ – ಅತಿಶಯವಾಗಿ, ಒಪ್ಪಿದುದು – ಶೋಭಿಸಿತು ಉದಾತ್ತಾಲಂಕಾರ ಚಂಪಕಮಾಲಾವೃತ್ತ ॥ ೭೦ ॥

**ಉ॥** ಕನ್ನಡಿಯಲ್ಲಿ ಮಾರ್ಪೊಳೆವ ದಂತಿಯ ಮಾಳ್ಕೆಯೊಳಬ್ಜಜಾಂಡಮ ।
ತ್ಯುನ್ನತ ತತ್ಸಭಾಗೃಹಬವದ್ಘೃಣಿ ಮಂಡಲದಲ್ಲಿ ತೋರ್ಕುಮು ॥
ದ್ಯನ್ನಳಿನಾಪ್ತದೀಧಿತಿಯ ಮುಂದಣ ಮಿಂಬುಳುವಂತೆ ತತ್ಸಭಾ ।
ಸನ್ನಿಧಿಯಲ್ಲಿ ಕಾಣಿಪುದು ಪನ್ನಗರಾಜಫಣಾಮಣಿ ವ್ರಜಂ ॥ ೭೧ ॥

**ಟೀಕ॥** ಕನ್ನಡಿಯಲ್ಲಿ – ದರ್ಪಣದೊಳಗೆ, ಮಾರ್ಪೊಳೆವ – ಪಡಿನೆಳಲಾಗಿ ತೋರುವ, ದಂತಿಯ ಮಾಳ್ಕೆಯೊಳು – ಆನೆಯ ಬಗೆಯಿಂದ, ಅಬ್ಜಜಾಂಡಮಂ – ಬ್ರಹ್ಮಾಂಡವು ಅತ್ಯುನ್ನತ – ಬಹಳ ಉದ್ದವಾದ, ತತ್ಸಭಾಗೃಹ – ಶಿವನೋಲಗದ ಚಾವಡಿಯ ದೆಸೆಯಿಂದ, ಭವತ್ – ಆದ, ಘೃಣಿ – ಕದಿರಗಳ, ಮಂಡಲದಲ್ಲಿ – ಬಿಂಬದೊಳು, ತೋರ್ಕುಂ – ತೋರುವದು, ಉದ್ಯತ್ – ಉದಯಿಸುವ, ನಳಿನಾಪ್ತ – ತಾವರೆಯ ಗಳೆಯನ, ಸೂರ್ಯನ, ದೀಧಿತಿಯ – ಕಿರಣದ, ಮುಂದಣ – ಮುಂದೆಯಿರುವ,

ಮುಂಬುಳುವಂತೆ – ಚುಕ್ಕೆಯ ಹುಳದ ಹಾಗೆ, ಮಿಣಕರಬೂಚಿಹುಳ – ಮಿಂಚುಹುಳ, ಖದ್ಯೋತ – ತತ್ಸಭಾ ಸನ್ನಿಧಿಯಲ್ಲಿ – ಆ ಸಭೆಯ ಬಳಿಯಲ್ಲಿ, ಪನ್ನಗರಾಜ – ಪಾವುಗಳೊಡೆಯನೆ, ಫಣಾ – ಹೆಡೆಗಳ, ಮಣಿ – ರತ್ನಗಳ, ವ್ರಜಂ – ಗುಂಪು, ಕಾಣಿಪುದು – ಕಣ್ಣಿಗೆ ಗೋಚರವಾಗುವದು ॥

**ತಾ॥** ಆನೆಯು ದೊಡ್ಡದಾದರೂ ಸಣ್ಣ ಕನ್ನಡಿಯಲ್ಲಿ ಕಾಣಿಸುವ ಹಾಗೆ ಶತಕೋಟಿ ಯೋಜನದ ಬ್ರಹ್ಮಾಂಡವು ಕೋಟಿ ಯೋಜನದ ಶಿವಸಭೆಯಲ್ಲಿ ಅಡಗಿ ತೋರುತ್ತಿರುವುದು. ಸೂರ್ಯಪ್ರಕಾಶದ ಮುಂದೆ ಮಿಂಚುಹುಳವು ಬೆಳಗದೆ ಇರುವ ಹಾಗೆ ಆ ಸಭೆಯ ಬಳಿಯಲ್ಲಿ ಆದಿಶೇಷಗಳ ಹೆಡೆಗಳ ರತ್ನಗಳು ಬೆಳಗುವದಿಲ್ಲವು. ಎಂಬುವದರಿಂದ ಪ್ರಾಕೃತವಾದ ಮಿಥ್ಯಾ ಪ್ರಪಂಚಕ್ಕೆ ಕಾರಣವಾಗಿರುವದು, ಅಪ್ರಾಕೃತ ಶಿವಸಭೆಯೆನುತಲು. ಅದರ ಪ್ರಕಾಶವು ಅತ್ಯಧಿಕವಾದುದೆನುತಲು ತಾತ್ಪರ್ಯವು. ಉಪಮಾಲಂಕಾರ. ಉತ್ಪಲಮಾಲಾವೃತ್ತ ॥ ೭೧ ॥

**ವ॥** ಅಂತೊಪ್ಪುವ ನಲ ರವಿ ಶಶಿಕೋಟಿ ರುಚಿಯಂ ಪಳಿದು ಪಜ್ಜಳಿಪ ವಿಪುಳಪ್ರಭಾ ಮಂಡಲಂ ಪುದಿದ ಮಹಾಸ್ಥಾನ ಮಂಟಪದ ಮಧ್ಯದೋಳೇಕಲಕ್ಷ ಯೋಜನದನಿತು ವಿಸ್ತೀರ್ಣಮನನಿತುನ್ನತಿಯನಾಳ್ದು ಕಂಗೊಳಿಪ ಚಿಂತಾಮಣಿ ಮಹಿತ ಮಂಗಳಮಯ ಮಹಾಪೀಠ ಮನೀಶಾನದಿಶೆಯೊಳೈಶ್ವರ್ಯಮೇಂ ಮೃಗೇಂದ್ರಾಕಾರಂಬೆತ್ತವಿಮಳಧರ್ಮಮೇ ವೃಷಭಾಕೃತಿ ಪಡೆದನೆನಲಾಶೆಯೊಳ್ಸುಜ್ಞಾನಮೇ ಕಾಂತಿ ದೇವತಾರೂಪದಿಂ ನಿರಯತಿಯತ್ತಲ್ ವೈರಾಗ್ಯಮೆ ವೈಭವಸ್ವರೂಪದಿಂದ ನಿಲದೆಶೆಯೋಳ್ಪರಿವಿಡಿಯಂ ಪೂರ್ವದಕ್ಷಿಣ ಪಶ್ಚಿಮೋತ್ತರಂಗಳೋಳ್ ಭೂತರೂಪಮಂ ತಾಳ್ದ ಧರ್ಮಮುಮಂ ವಿಕಟಾಂಗಕಮೆನಿಪ ಜ್ಞಾನಮಂ ಘೋರವೇಷವಂ ಪಡೆದ ವೈರಾಗ್ಯಮಂ ವಿಕೃತಕಾಯಾನ್ವಿತಮಾದನೈಶ್ವರ್ಯಮಂ ಮೆಟ್ಟಿ ನಿಂದು ನಿಂತೇಣ್ದೆಸೆಯೋಳೇಣ್ಬರಿಜಂಪೊತ್ತು ಸೇವಿಸುತ್ತಮಿರೆ ತದಂತರಾಳ ಭಾಸುರಮೆನಿಸಿ ॥

**ಟೀಕ॥** ಅಂತು – ಹಾಗೆ, ಒಪ್ಪುವ – ಚನ್ನಾದ, ಅನಲರವಿಶಶಿ – ಅಗ್ನಿ, ಸೂರ್ಯ ಚಂದ್ರರ, ಕೋಟಿ – ನೂರು ಲಕ್ಷಗಳ, ರುಚಿಯಂ – ಬೆಳಕನ್ನು, ಪಳಿದು – ನಿಂದಿಸಿ, ಪಜ್ಜಳಿಪ – ಪ್ರಜ್ವಲಿಸುವ, ವಿಪುಳ – ವಿಸ್ತಾರವಾದ, ಪ್ರಭಾಮಂಡಲ – ಕಾಂತಿಬಿಂಬವು, ಪುದಿದ – ತುಂಬಿದ, ಮಹತ್ – ದೊಡ್ಡ, ಆಸ್ತಾನಮಂಟಪದ – ಓಲಗದ, ಚಾವಡಿಯ, ಮಧ್ಯದೊಳು – ನಡುವೆ, ಏಕಲಕ್ಷಯೋಜನದ – ಒಂದು ಲಕ್ಷ ಗಾವುದದ, ಅನಿತು ವಿಸ್ತೀರ್ಣಮಂ – ಅಷ್ಟೂ ಅಗಲವನ್ನು, ಅನಿತುನ್ನತಿಯಂ – ಅಷ್ಟುದ್ದವನ್ನೂ, ಆಳ್ದು – ಪೋಷಿಸಿ, ಕಂಗೊಳಿಪ – ಕಾಣಿಸುತ್ತಿರುವ, ಚಿಂತಾಮಣಿ – ಚಿಂತಿತಾರ್ಥವಂ ಕೊಡುವ ದೇವಲೋಕ ರತ್ನದಿಂದ, ಮಹಿತ – ಪೂಜ್ಯವಾದ, ಮಂಗಳಮಯ – ಶುಭಪ್ರಚುರವಾದ, ಮಹಾಪೀಠಮಂ – ದೊಡ್ಡ ಗದ್ದುಗೆಯನ್ನು, ಈಶಾನದಿಶೆಯೊಳು – ದೇವಮೂಲೆಯಲ್ಲಿ,

ಐಶ್ವರ್ಯಮೆ – ನಿಯಾಮಕತ್ವ ಶಕ್ತಿಯೆ, ಮೃಗೇಂದ್ರಾಕಾರಂಬೆತ್ತು – ಸಿಂಹದ ರೂಪವಂ ಪಡೆದು, ಅನಲಾಶಯೋಳ್ – ಅನ್ನಯ ದೆಶೆಯಲ್ಲಿಯು, ವಿಮಳಧರ್ಮೆ – ಶುದ್ಧ ಪುಣ್ಯವೆ, ವೃಷಭಾಕೃತಿ ಪಡೆದ – ಎತ್ತಿನ ರೂಪವಂ ಪಡೆದು, ನಿರತಿಯತ್ತಲ್ – ರಾಕ್ಷಸಮೂಲೆಯಲ್ಲಿ, ಸುಜ್ಞಾನಮೇ – ಒಳ್ಳೆಯರುಹೆ, ಶಾಂತಿದೇವತಾರೂಪದಿಂ – ಆಕಾರದಿಂದಲು, ಅನಿಲದಿಶೆಯೊಳು – ವಾಯುದಿಕ್ಕಿನಲ್ಲಿ, ವೈರಾಗ್ಯಮೆ – ವಿರಕ್ತಿಯೆ, ವೈಭವಸ್ವರೂಪದಿಂ – ವಿಭುತ್ವ ರೂಪದಿಂದಲೂ, (ವ್ಯಾಪಕವಾದ ಆಕಾರದಿಂದಲೂ), ಪರಿವಿಡಿಯಂ – ವರಸೆಯಿಂದ, ಪೂರ್ವದಕ್ಷಿಣ ಪಶ್ಚಿಮೋತ್ತರಂಗಳೋಳ್ – ಮೂಡಲು ತೆಂಕಲು ಪಡುವಲು ಬಡಗಲ್ಗಳಲ್ಲಿ, ಭೂತರೂಪಮಂ ತಾಳ್ದ – ಭೂತಾಕಾರವಂ ಧರಿಸಿದ, ಅಧರ್ಮವನ್ನು – ಪಾಪವನ್ನು, ವಿಕಟಾಂಗಕಮೆನಿಪ – ವಕ್ರವಾದ ಮೈಯುಳ್ಳದೆನಿಸುವ, ಅಜ್ಞಾನವಂ – ಅನಾದಿಭಾವಾಜ್ಞಾನವನ್ನು, ಘೋರವೇಷಂ ಬಡೆದ – ಭಯುಂಕರವಾದ ರೂಪವಂ ತಳೆವ, ಆ ವೈರಾಗ್ಯವಂ – ಲೋಭವನ್ನು, ವಿಕೃತಕಾಯಾನ್ವಿತಮಾದ – ವಿಕಾರಗೊಂಡ ಮೆಯ್ಯಿಂದ ಕೂಡಿದ, ಅನೈಶ್ವರ್ಯಮಂ – ಬಡತನವನ್ನು, ಮೆಟ್ಟಿ – ತುಳಿದು, ನಿಂದು – ನಿಂತು, ಎಣ್ದೆಸೆಯೋಳ್ – ಎಂಟು ದಿಕ್ಕುಗಳಲ್ಲಿ, ಏಳ್ಪರಿಜಂ – ಎಂಟು ಮೂಲೆಗಳಲ್ಲಿ, ಪೊತ್ತು – ಹೊತ್ತು, ಸೇವಿಸುತ್ತಂ – ಭಜಿಸುತ್ತ, ಇರೆ – ಇರಲು, ತದಂತರಾಳ – ಅದರ ನಡುವೆ, ಭಾಸುರಂ – ಶೋಭಿಸುವದು, ಎನಿಸಿ – ಎಂದು ಪ್ರಖ್ಯಾತಿಗೊಂಡು ॥

**ತಾ॥** ಶಿವಸಭಾಮಂಟಪವು. ಕೋಟಿಸೂರ್ಯರ ಕೋಟಿಚಂದ್ರರ ಕೋಟಿ ಅಗ್ನಿಗಳ ಕಾಂತಿಗಿಂತಲೂ ಅತಿಶಯವಾಗಿ ಬೆಳಗುತ್ತಿದೆ. ಆ ಮಂಟಪದ ನಡುವೆ ಚಿಂತಾಮಣಿ ಶುಭಪೀಠವು ಲಕ್ಷ ಯೋಜನದಗಲ ಲಕ್ಷ ಯೋಜನದುದ್ದವಾಗಿ ಬೆಳಗುತ್ತಿದೆ. ಆ ಪೀಠವನ್ನು ಕೆಳಗಡೆ ಈಶಾನಾದಿ ನಾಲ್ಕು ಮೂಲೆಗಳಲ್ಲಿಯು ಕ್ರಮದಿಂದ ಐಶ್ವರ್ಯವು ಸಿಂಹವಾಗಿ ಈಶಾನ ಮೂಲೆಯನ್ನು ಧರ್ಮವು ಎತ್ತಾಗಿ ಅಗ್ನಿಮೂಲೆಯನ್ನು ಜ್ಞಾನವು ಶಾಂತಿರೂಪವಾದ ನಿರತಿಯ ಮೂಲೆಯನ್ನು ವೈರಾಗ್ಯವು ವ್ಯಾಪಕ ರೂಪಕದಿಂದ ವಾಯುಮೂಲೆಯನ್ನು ಹೊತ್ತಿವೆ. ಮೂಡಲು ಮೊದಲಾದ ನಾಲ್ಕು ಕಡೆಗಳಲ್ಲಿಯೂ ಕ್ರಮವಾಗಿ ಕೆಳಗೆ ಮಲಗಿರುವ ಭೂತಾಕಾರವಾದ ಪಾಪವನ್ನು ವಕ್ರಾಕಾರವಾದ ಅಜ್ಞಾನವನ್ನು ಘೋರ ರೂಪವಾದ ಆಶೆಯನ್ನು ವಿಕಾರರೂಪವಾದ ದರಿದ್ರತೆಯನ್ನು ಮೇಲೆ ಹೇಳಿದ ಐಶ್ವರ್ಯ ಧರ್ಮಜ್ಞಾನ ವೈರಾಗ್ಯಗಳು ತೊಳಕೊಂಡಿವೆ. ಎಂದರೆ ಎರಡು ಹಿಂಗಾಲ್ಗಳಿಂದ ಕೆಳಗೆರಡನ್ನು ತುಳಕೊಂಡು ಮೇಲೆ ಎರಡು ಕೈಗಳಿಂದಲು ತಲೆಯಿಂದಲು ಪೀಠದ ಮೂರು ಮೂಲೆಗಳಿಗೆ ಆತುಕೊಂಡು ಹೊತ್ತಿದೆ. ಹೀಗಿಯೆ ನಾಲ್ಕು ಮೂಲೆಗಳ ಧರ್ಮಾದ್ಯಾಕಾರಗಳು ಹೊತ್ತಿರುವದರಿಂದ ಕೆಳಗಿರುವ ಅಜ್ಞಾನಾದಿಗಳು, ಎರೆಡೆರಡದಿಂದ ತುಳಿದು ಮೆಟ್ಟಲ್ಪಟ್ಟವಾಗಿದೆ. ಪೀಠದ ಮೂಲೆಗಳಲ್ಲಿ ದಿಗ್ಭಾಗಗಳೂ ಎರಡೆರಡು ಕೈಗಳಿಂದಳು ನಿದಿಗ್ಭಾಗಗಳು ಒಂದೊಂದು ತಲೆಯಿಂದಲೂ ಅಂತು ೮

ಮೂಲೆಗಳಲ್ಲಿಯು ಹೊರಲ್ಪಟ್ಟು ಬೆಳಗುತ್ತಿರುವದು. ಈ ಮೇಲರೆ ಪ್ರಾಕೃತ ಗುಣಗಳನ್ನು ಮೆಟ್ಟಿರುವ ಆ ಪ್ರಾಕೃತ ಕಲ್ಯಾಣಗುಣಗಳ ಉತ್ತರಭಾಗದಲ್ಲಿ ಎಂದರೆ ಶಿರಪ್ರದೇಶದ ಮೇಲೆ ಚಿಂತಾಮಣಿ ಪೀಠವಿರುವದೆಂದು ಭಾವವು ಶಿವಮೂರ್ತಿ ಧ್ಯಾನಕ್ಕೆ ಆಲಂಬವಾದ ಪೀಠಕಲ್ಪನವು ಜ್ಞಾನೈಶ್ವರ್ಯಧರ್ಮ ವೈರಾಗ್ಯಗಳ ಮೇಲೆ ಧೈರ್ಯ ಕ್ಷಮಾ ಶಾಂತಿ ನೈಸ್ಪೃಹ್ಯಗಳ ರೂಪದಿಂದ ಅಧರ್ಮಜ್ಞಾನ ಲೋಭದಾರಿದ್ರ್ಯಗಳಂ ತುಳಿದುಳಿದ ದೃಢನಿಶ್ಚಯದಲ್ಲಿ ಶಿವಯೋಗಿಗಳವಡುವುದೆಂಬರ್ಥವು. ಶಿವಯೋಗಪ್ರಕಾಶಿಕಾ ಗ್ರಂಥದೊಳು ಅಷ್ಟಾಂಗ ಯೋಗ ವಿವರಣ ಪ್ರಕರಣದಲ್ಲಿ ಧ್ಯಾನಯೋಗಾಲಂಬನವು ನಿರೂಪಿಸಲ್ಪಟ್ಟಿದೆ. ಅದಕ್ಕೆ ಬೀಜಭೂತವಾಗಿರುವದೇ ಶಿವಲೋಕದ ಚಿಂತಾಮಣಿ ಪೀಠವರ್ಣನವೆಂದರಿವುದು ॥

ಮ॥ಸ್ರ॥ ಫಣಿರಾಜಂ ನಾಳಮಾಗುತ್ತಿರೆ ಮಿಸುಪೆಸಳೆಂಟಾಗೆಮ ನಿರ್ವ್ಯಾಜದಿಂ ಸಂ ॥
ದಣಿಮಾದ್ಯೈಶ್ವರ್ಯಮುಂ ವಾಮೆಯೆಮೊದಲೆನಿಪಾ ಶಕ್ತಿಗಳ್ಕರ್ಣಿಕಾಲ ।
ಕ್ಷಮಂತಾಳ್ದೊಪ್ಪೆ ವಿದ್ಯಾಧಿಪರೆ ತೊಳೆಪತತ್ಕೇಸರಾಕಾರದಿಂ ಸಂ ।
ದಣಿಸುತ್ತಂ ತೋರೆ ಸೂರ್ಯಾನಲಶಶಿಯುತಮೊಪ್ಪಿರ್ದುದಂ ಭೋಜಪೀಠಂ ॥೭॥

**ಟೀಕೆ॥** ಫಣಿರಾಜಂ – ನಾಗೇಂದ್ರನು, ನಾಳಂ – ದಂಟು, ಆಗುತ್ತ ಇರೆ – ಇರಲು, ಮಿಸುಪ – ಶೋಭಿಸುವ, ನಿರ್ವ್ಯಾಜದಿಂ ಸಂದ – ನಿಷ್ಕಪಟವಾಗಿಸಲು ಒಳಗೆ ಬಂದ, ಅಣಿಮಾದ್ಯೈಶ್ವರ್ಯಮಂ – ಅಣಿಮಾದ್ಯಷ್ಟಸಿದ್ದಿಗಳೆಂಬ ಐಶ್ವರ್ಯವು, ಎಸಳು, ಎಂಟಾಗೆ – ಎಂಟು ರೇಕುಗಳಾರಲು, ವಾಮೆಯೆ ಮೊದಲೆನಿಪ – ವಾಮದೇವಿಯೇ ಮುಂತಾದ, ಆ ಶಕ್ತಿಗಳ್ – ಆ ದೇವತೆಗಳು, ಕರ್ಣಿಕಾಲಕ್ಷಣಮಂ ತಾಳ್ದು – ಗೊಂಡೆಯ ಕುರುಹಂ ಪಡೆದು, ಒಪ್ಪೆ – ಬೆಳಗುತ್ತಿರಲು, ವಿದ್ಯಾಧಿಪರೆ – ವಿದ್ಯಾಧೀಶ್ವರರಾದ ದೇವತೆಗಳೆ, ತೊಳಪ – ಬೆಳಗುವ, ತತ್ಕೇಸರಾಕಾರದಿಂ – ಆದರ ಕಿಂಜಲ್ಕಗಳ ರೂಪದಿಂದ, ಸಂದಣಿಸುತ್ತಂ – ಸಂಮರ್ದಗೊಳಿಸುತ್ತ, ತೋರೆ ಕಾಣಿಸುತ್ತಿರಲು, ಸೂರ್ಯಾನಲಶಿಯುತಂ, ಆದಿತ್ಯಾಗ್ನಿಚಂದ್ರಸಹಿತವಾದ, ಅಂಬೋಜಪೀಠಂ – ಕಮಲಾಸನವು, ಒಪ್ಪಿ – ಹೊಂದಿಕೆಯಾಗಿ, ಇರ್ದುದು – ಇತ್ತು ॥

**ತಾ॥** ಚಿಂತಾಮಣಿ ಪೀಠದ ಮೇಲೆ ಕಮಲ ಪೀಠವಿದೆ. ಆ ಕಮಲಕ್ಕೆ ಆದಿಶೇಷನೆ ಕಾಂಡದಂಡವಾಗಿಯು, ಅಷ್ಟಸಿದ್ಧಿಗಳೇ ಎಸಳ್ಗಳಾಗಿಯು ವಾಮಾದಿ ಶಕ್ತಿಗಳೇ ನಡುವಣ ದಿಮ್ಮಿಯಾಗಿಯು, ಮಂತ್ರ ವಿದ್ಯೇಶ್ವರ ದೇವತೆಗಳೇ ಆದರ ಸತ್ತಣ ಕುಸುಮಗಳಾಗಿಯು ಇರುವಲ್ಲಿ ಸೂರ್ಯಚಂದ್ರಾಗ್ನಿಗಳ ತೇಜೋಮಂಡಲತ್ರಯವು ಮೇಲುಹಾಸಿಗೆಯಾಗಿದೆ. ॥ ವಿವರಣ – ಫಣಾ ಹಣೇ, ಫಣಿ – ಹೆಡೆಯುಳ್ಳದ್ದು, ನಾಗಸರಗಳಿಗೆ ರಾಜಂ – ಅರಸು ಶೇಷನು ॥ ೧ ಅಣಿಮೆ – ಸಂಣದಾಗುವ ಶಕ್ತಿ ೨ ಮಹಿಮೆ – ದೊಡ್ಡದಾಗುವ ಸಾಮರ್ಥ್ಯ ೩ ಗರಿಮೆ – ಭಾರವಾಗಲುಳ್ಳ ಪಟಿಮೆ ೪ ಲಘಿಮೆ – ಹಗುರಾಗಲುಳ್ಳ ಹವಣು ೫ ಪ್ರಾಪ್ತಿ – ಬೇಕಾಸೇರುಳ್ಳಧಟು ೬ ಪ್ರಾಕಾಮ್ಯಂ – ಬಯಸಿದ್ದನ್ನು ಪಡೆಯಲುಳ್ಳ ಶಕ್ತಿ ೭ ಈಶತ್ವಂ ಸರ್ವನಿಯಮಕ ಸಾಮರ್ಥ್ಯ ೮ ವಶಿತ್ವಂ ಸರ್ವವನ್ನು

ಸ್ವಾಧೀನದಲ್ಲಿರಿಸಿಕೊಳ್ಳುವ ಸಾಮರ್ಥ್ಯ ಇವೆಂಟು ಮಣಿಮಾದ್ಯೈಶ್ವರ್ಯಗಳು ವಾಮಾ ಉನ್ಮನೀ ಕುಂಡಲ ಚಿತ್ಕಳಾ ಭಾಮಿನಿ ಶ್ರೀ, ಮುದಿತ ಮೊದಲಾದವು ಶಕ್ತಿಗಳು ಮೂಲವಿದೇಶ್ವರ ಪ್ರಾಸಾದವಿದ್ಯೇಶ್ವರ, ಮಂತ್ರೇಶ್ವರ, ಕೀಲವಿದ್ಯೇಶ್ವರ, ಶಕ್ತಿವಿದ್ಯೇಶ್ವರ, ಕವಚವಿದ್ಯೇಶ್ವರ, ಅಸ್ತ್ರವಿದ್ಯೇಶ್ವರ, ಮುಂತಾದವರು ವಿದ್ಯಾಧಿಪರು, ಸೂರ್ಯ ಇಡಾಜ್ಯೋತಿ, ಅನಲ ಸುಷುಮ್ನಾಜ್ಯೋತಿ, ಶಶೌ ಪಿಂಗಳಾಜ್ಯೋತಿ, ಅಂಭೋಜಂ ಹೃತ್ಕಮಲ ಇದೇ ಸಹಸ್ರಾರವೆನಿಸುವದು, ತಲೆಯ ಮೆದುಳಿನಲ್ಲಿರ್ಪುದು ॥ ಮಹಾಸ್ರಗ್ಧರಾವೃತ್ತ. ರೂಪಕಾಲಂಕಾರ ॥ ೭೨ ॥

**ವ॥** ಹೃತ್ಪದ್ಮಪೀಠದೋಳ್ಕೌಸುಂಭತಲ್ಪ್ರಮನೆ ಕೆಂಬೊಳಪಿತೊಳೆವ
ಮಹಾಬಿಂದುವೆಂಬ ಮೇಲ್ವಸೆಯಲ್ಲಿ ಗಾಡಿಯಿಂ ಮೂರ್ತಿಗೊಂಡು ॥

**ಟೀಕ॥** ತತ್ಪದ್ಮಪೀಠದೋಳ್ – ಆ ಕಮಲಾಸನದಲ್ಲಿ, ಕೌಸುಂಭತಲ್ಪಮನೆ – ಕುಸುಂಬಾ ಬಣ್ಣದ ಹಾಸಿಗೆಯೋ ಎಂಬಂತೆ, ಕೆಂಬೊಳಪಿಂ – ಕೆಂಪು ಹೊಳಪಿನಿಂದ, ತೊಳೆಪ – ಹೊಳೆಯುತ್ತಿರುವ, ಮಹಾಬಿಂದುವೆಂಬ – ಚಿದ್ಬಿಂದುವೆಂಬ ಶಿವತತ್ವದ, ಮೇಲ್ವಸೆಯಲ್ಲಿ – ಮೇಲುಹಾಸಿಗೆಯಲ್ಲಿ, ಗಾಡಿಯಿಂ – ಸೊಗಸಿನಿಂದ, ಮೂರ್ತಿಗೊಂಡು – ಕುಳಿತು.

**ತಾ॥** ಕಮಲಾಸನದಲ್ಲಿ ಕೌಸುಂಭತಲ್ಪದ ಮೇಲೆ ಅರುಣವರ್ಣದ ಬಿಂದುಪೀಠದ ಮೇಲುಹಾಸಿಗೆಯಲ್ಲಿ ಶಿವನಿರುವನು. ವಿವರಣ, ವರ್ಣಾಧ್ವ, ಪದಾಧ್ವ, ಮಂತ್ರಾಧ್ವ, ತತ್ವಾಧ್ವ, ಭುವನಾಧ್ವ, ಕಲಾಧ್ವಗಳೆಂಬ ಷಡಧ್ವಗಳಿಗೂ, ವೈಖರ್ಯಾದಿ ಚತುರ್ವಿಧ ವಾಕ್ಕುಗಳಿಗು, ಆಧಾರ ಪರಿಣಾಮರೂಪದಿಂ, ಕಾರಣವಾಗಿರುವ ಲಿಂಗಪೀಠವೆಂಬ ಪಾಶವೆ ಬಿಂದು ವೆನಿಸುವದು, ಆಗಮಿಕರು ಶುದ್ಧವಿದ್ಯಾದಿ ಪಂಚತತ್ವಗಳಲ್ಲಿ ನಾದಬಿಂದುಗಳಿಗೆ ಅಂತರ್ಭಾವಮಂಪೇಳುವರು. ಈ ಬಿಂದುವನ್ನು ಲಯಾವಸ್ಥೋಪಾಧಿಯೆಂದು ಶಿವಯೋಗಿಗಳೆನ್ನುವರು. ವೀರಶೈವರು ಪಂಚಸಂಜ್ಞೆಗಳುಳ್ಳ ಲಿಂಗಸ್ವರೂಪರಾಗಿಯು ದಶನಾಮಗಳಿಂ ಪ್ರಸಿದ್ಧಮಾಗಿಯು ಸರ್ವಕಾರಣಗಳಿಗುಂ ಮೂಲಕಾರಣವಾಗಿರುವ ಶಿವತತ್ವದ ಅಭಿವ್ಯಕ್ತಿ ಸ್ಥಾನವೇ ಬಿಂದುವೆಂದು ಪೇಳುವರು (ವಿವೇಕಚಿಂತಾಮಣಿ).

**ಮ॥** ಚಿದಚಿತ್ಪ್ರೇರಕನದ್ವಿತೀಯನನಘಂ ವೇದಾಂತವೇದ್ಯಂ ಕಳಾ ।
ಸ್ಪದನಾದ್ಯಂತವಿದೂರನಾರ್ಯನಜಡಂ ವಿಶ್ವಾಧಿಕಂ ವಿಸೌಮೂ ।
ರ್ತಿ ದಯಾವಾರ್ಧಿ ಜಗಜ್ಜನಿಸ್ಥಿತಿಲಯಾಧಾರಂ ಮಹಾಭೋಗಮೋ ।
ಕ್ಷದನಬ್ಜಾಕ್ಷಮುಖಾಸುರಾರ್ಚಿತಪದಂ ಕಣ್ಗೊಪ್ಪಿದಂ ಶಂಕರಂ ॥ ೭೩ ॥

**ಟೀಕ॥** ಚಿದಚಿತ್ಪ್ರೇರಕಂ – ಚಿತ್ ಜೀವಾತ್ಮರಿಗು, ಆಚಿತ್ ಕಾಲಾಕಾಶವಾಯ್ವಾದಿಗಳಿಗು, ಪ್ರೇರಕಂ – ಜ್ಞಾನಪ್ರಿಯಾಜನಕನೂ, ಅದ್ವಿತೀಯಂಸ್ವಜಾತೀಯ ಭೇದವಿಲ್ಲದವನೆಂದು – ಶೈವರೆನ್ನುವರು – ಸಜಾತೀಯ ವಿಜಾತೀಯ ಸ್ವಗತಭೇದ ಶೂನ್ಯನೆಂದು –

ದ್ವೈತಿಗಳೆನ್ನುವರ್ – ಎರಡನೆಯದಿಲ್ಲದವನು, ಅನಘಂ – ಪಾಪವಿಲ್ಲದವನು, ಮಲಮಾಯಾಕರ್ಮಗಳೆಂಬ – ಪಾಶತ್ರಯವಿಲ್ಲದವನು, ವೇದಾಂತವೇದ್ಯಂ – ಉಪನಿಷತ್ತುಗಳಿಂದ, ತಿಳಿಯತಕ್ಕವನು, ಕಳಾಸ್ಪದಂ – ಚತುಃಷಷ್ಟಿ ಕಲೆಗಳಿಗೂ ನಿಮಿತ್ತವಾದವನು, ಕಾಂತಿಗಳಿಗಾಧಾರವಾದವನು, ಶಿವಯೋಗದಲ್ಲಿ ನಾದಾನುಸಂಧಾನ ಮಾಡುವವರಿಗೆ, ಪ್ರಾಣಾಯಾಮದೊಳು – ಧ್ಯಾನಾಸರಸದಲ್ಲಿ ಬಿಂದುದರ್ಶನವಾದ ಮೇಲೆ ನಕ್ಷತ್ರಗಳಂತೆ ತೋರುವ ಚಿತ್ಕಲೆಗಳಿಗೆ ಆಸ್ಪದವಾಗಿರುವ ಸಹಸ್ರಾರದ ಬಳಿಯ ಸುಷುಮ್ನಾಗ್ರಗಳಿಗೆ – ತೊಟ್ಟಾಗಿರುವ ನಾಳದೊಳಗಣ – ಚಿದಂಬರ ಸ್ವರೂಪನೆಂದು – ಶಿವಯೋಗಿಗಳು ಹೇಳುವರು. ಆದ್ಯಂತವಿದೂರಂ – ಮೊದಲು ಕೊನೆಯೂ ಇಲ್ಲದವನು, ಆಯಂ – ಪೂಜ್ಯನು, ಅಜಡಂ – ಸ್ವರೂಪಾಜ್ಞಾನದ ಅವರಣ ವಿಕ್ಷೇಪಗಳಿಲ್ಲದವನು, (ಚಿದ್ರೂಪನೆಂದು ಭಾವವು), ವಿಶ್ವಾದಿಕಂ – ಪ್ರಾಕೃತ ಪ್ರಪಂಚಕ್ಕಿಂತಲೂ ಹೆಚ್ಚಾದವನು, ವಿಷ್ಣು ಬ್ರಂಹದಮೇದ್ರಾದಿ ಸಕಲ ದೇವತೆಗಳಿಂತಲು – ಉತ್ತಮನೆಂದು ಭಾವವು – ವಿಶ್ವಮೂರ್ತಿ – ಪ್ರಪಂಚವೇ ಆಕಾರವಾಗಿ ಉಳ್ಳವನು – ಪೃಥಿವ್ಯಪ್ತೇಜೋವಾಯ್ವಾಕಾಶಗಳು – ಸೂರ್ಯಚಂದ್ರಾತ್ಮನು – ಆವಷ್ಟಮೂರ್ತಿಗಳುಳ್ಳವ ನಾದ್ದರಿಂದ – ವಿಶ್ವಮೂರ್ತಿಯೆಂದು ಪ್ರಕೃತಿಶೈವರೆನ್ನುವರ್ – ಶಿವನು ಚಿದಚಿಚ್ಛರೀರಕನಾದ್ದ ರಿಂದ – ಆತನ ಸೂಕ್ಷ್ಮ ಚಿದಚಿನ್ಮೂರ್ತಿಗಳೇ ಸ್ಥೂಲ ಚಿದಚಿತ್ಪ್ರಪಂಚಕ್ಕೆ ಉಪಾದಾನ ಕಾರಣವಾದ್ದರಿಂದ ವಿಶ್ವಮೂರ್ತಿಯೆಂದು ಶೈವ ವಿಶಿಷ್ಟಾದ್ವೈತಿಗಳೆನ್ನುವರ್. ವಿಶ್ವಕಲ್ಪನಕ್ಕೆ ಅಧಿಷ್ಠಾನವಾದ್ದರಿಂದಲು ವಿಶ್ವದಲ್ಲಿ ಸತ್ತಾಮಾತ್ರಗವಾಗಿರುವದರಿಂದಲು – ಶಿವನೇ ವಿಶ್ವಮೂರ್ತಿಯೆಂದು ಶಿವದ್ವೈತಿಗಳೆನ್ನುವರ್ – ದಯಾಪರ, ಕರುಣಾಸಮುದ್ರನು ನೀರಿಗೆ ಕಡಲಿನಂತೆ, ದಯೆಗೆ ಕಣಿಯಾಗಿರುವನು – ಆಬಷ್ಯಾನಂತಾ ಪರಿಮಿತ – ದಯೆಯುಳ್ಳವನೆಂದು ಭಾವವು, ಜಗತ್ ಜಗಸ್ಥಿತಿಲಯ ಆಧಾರಂ – ಪ್ರಪಂಚದ ಸೃಷ್ಟಿ ರಕ್ಷಣ ಸಂಹಾರಂಗಳಿಗೆ – ಅಧಿಕರಣವಾಗಿರುವವನು – ಮಹಾಭೋಗಮೋಕ್ಷದಂ ಮಹಾಭೋಗ – ಶಿವಸಾಲೋಕ್ಯ ಶಿವಸಾಮೀಪ್ಯ ಶಿವಸಾರೂಪ್ಯಗಳೆಂಬ ಪೂರ್ಣಾನಂದಗಳುಳ್ಳ ಶಿವಲೋಕದೊಳಗಣ ಸಗುಣಮುಕ್ತಿಗಳು – ಮೋಕ್ಷ ನಿರ್ವಿಶೇಷಬ್ರಹ್ಮೈಕ್ಯವೆಂಬ – ಚಿನ್ಮಾತ್ರಾವಸ್ಥಿಯಾದ – ಶಿವಕೈವಲ್ಯವೆಂಬನಿರ್ವಾಣವು – ಈ ಸಗುಣನಿರ್ಗುಣ ಮುಕ್ತಿಗಳೆರಡನ್ನು ಭಕ್ತಿಜ್ಞಾನ ವೈರಾಗ್ಯಗಳುಳ್ಳ ತನ್ನವರಿಗೆ, ದಂ – ಕೊಡುವವನು, ಅಬ್ಜಾಕ್ಷಮುಖಾಮುರಾರ್ಚಿತಪದಂ – ಅಬ್ಜಾಕ್ಷ – ವಿಷ್ಣುವೇ ಮುಖ ಮೊದಲಾದ – ಅಮರ – ದೇವತೆಗಳಿಂದ, ಅರ್ಚಿತ – ಪೂಜಿಸಲ್ಪಟ್ಟ ಪದಂ – ಪಾದಗಳುಳ್ಳವನು – (ಲಿಂಗವೆಂಬ ಗುರ್ತುಳ್ಳವನು) – ಇಚಿತಾ ಶಂಕರಂ – (ಶಂ) ಜ್ಞಾನಭೋಗವೈರಾಗ್ಯಗಳೆಂಬ – ಸುಖಗಳನ್ನು (ಕರಂ) ಭಕ್ತರಿಗೆ ಮಾಡುವವನು – ಆದಿಶಿವನು ಕಣ್ಗೆ ದರ್ಶನಾರ್ತಿಗಳ ದೃಷ್ಟಿಗೆ (ಯೋಗಿಲಕ್ಷಕ್ಕೆ) ಒಪ್ಪಿದಂ – ವಿಷಯನಾಗಿ ಮೆರೆದನು. ಮತ್ತೇಭವಿಕ್ರೀಡಿತ ವೃತ್ತ ॥ ೭೩ ॥

ಉ॥ ಬಾಂಬೊಳೆತಳ್ತ ಕೆಂಜಡೆಯ ಬಲ್ಮುಡಿ ತಾಳ್ದ ಶಶಾಂಲೇಖೆ ಫಾ ।
ಲಾಂಬಕಂ ಮುಲ್ಲಸತ್ಫಣಿಪಕುಂಡಲಂ ಮಾಯೆತಬಾಹುಕೃತ್ತಿ ವ ।
ಸ್ತ್ರಂ ಬಗೆಗೊಳ್ವನುಣ್ಗೆ ರವರಾಭಯಶೂಲಮೃಗಾಂಕಪಾಣಿಯಂ ।
ಕಂಬಿಡದೊಪ್ಪುವದ್ರಿಜೆ ವಿರಾಜಿಸೆ ರಂಜಿಸಿದಂ ಮಹೇಶ್ವರಂ ॥ ೭೩ ॥

**ಟೀಕ॥** ಬಾಂಬೊಳೆತಳ್ತ – ಗಂಗೆಯನ್ನುಧರಿಸಿದ, ಕೆಂಜಡೆಯ – ಕೆಂಪುಜಡೆಯ, ಬಲ್ಮುಡಿ – ಬಲವಾದ ಗಂಟಿನಲ್ಲಿ, ತಾಳ್ದ – ಧರಿಸಿದ, ಶಶಾಂಕಲೇಖೆ – ಚಂದ್ರರೇಖೆಯು, ಫಾಲಾಂಬಕಂ – ಹಣೆಗಣ್ಣು, ಉಲ್ಲಸತ್ಫಣಿಪಕುಂಡಲಂ – ಶೋಭಿಸುವ ನಾಗರಾಜವೆಂಬ, ಕಿವಿದೊಡವುಗಳೂ – ಆಯುತ ಬಾಹು, ನೀಳವಾದ ತೊಳುಗಳು, ಕೃತ್ತಿವಸ್ತ್ರ ಚರ್ಮಾಂಬರವು ಬಗೆಗಳ್ವ – ಮನೋಹರವಾದ, ನುಣ್ಗರೆ – ನುಣೂಪಾದ ಕರೆ, ಕಪ್ಪುಗರಳವೂ, ವರಾಭಯಶೂಲಮೃಗಾಂಕಪಾಣಿ – ವರವೂ, ಅಭಯವೂ, ಶೂಲಾಯುಧವು, ಯಜ್ಞಮೃಗವೂ, ಅಂಕ – ಗುರ್ತಾಗಿ ಮುಳ್ಳ, ಪಾಣಿ – ಹಸ್ತಗಳೂ, ಅಂಕಂಬಿಡದ – ತೊಡಯನಗಲದೆ, ಒಪ್ಪುವ – ಶೋಭಿಸುವ, ಅದ್ರಿಜೆ – ಪಾರ್ವತಿಯೂ, ವಿರಾಜಿಸೆ – ಪ್ರಕಾಶಿಸುತ್ತಿರಲು, ಮಹೇಶ್ವರಂ – ಮಹಾದೇವನು, ರಂಜಿಸಿದಂ – ಸಂತೋಷ ಗೊಳಿಸಿದನು.

**ತಾ॥** ಗಂಗಾಧರನೂ, ಕಪರ್ದಿ, ಚಂದ್ರಶೇಖರನು, ನಾಗಾಭರಣನು, ದಶಬಾಹುವು ವ್ಯಾಘ್ರೊಜಿಸಧರನು. ಗಜಚರ್ಮಾಂಬರನು, ನೀಲಗ್ರೀವನು, ಮೃಗಶೂಲವರಾಭಯ ಹಸ್ತನು, ಪಾರ್ವತೀಪತಿಯೂ, ಆದ ಶಿವನು ಬೆಳಗಿದನು ಉತ್ಪಲಮಾಲಾವೃತ್ತ ॥ ೭೪ ॥

(ಮುಂದುವರಿಯುವುದು)

ಭಕ್ತನಾದ ಬಳಿಕ ಭಕ್ತಿವಿಡಿದಾಚರಿಸುವುದೆಂತಯ್ಯಾ?
ಭಕ್ತ ತಾನಾದ ಬಳಿಕ ಭಕ್ತಿಯ ಹೊಲಬನರಿಯಬೇಕು.
ಭಕ್ತ ತಾನಾದ ಬಳಿಕ ಜ್ಞಾನಕ್ರಿಯಾವಿವರವ ವಿಚಾರಿಸಿ, ನೋಡಬೇಕು.
ಭಕ್ತ ತಾನಾದ ಬಳಿಕ ಅರುಹಿನ ಕುರುಹುವಿಡಿದಾಚರಿಸಬೇಕು.
ಭಕ್ತ ತಾನಾದ ಬಳಿಕ ತಾಪತ್ರಯಕ್ಕೊಳಗಾಗದೆ,
ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಐಕ್ಯ ಹೊಂದಲೇಬೇಕು.

**– ಸಿದ್ಧರಾಮೇಶ್ವರ**

ಧಾರ್ಮಿಕ ಕ್ಷೇತ್ರಗಳ ದರ್ಶನಮಾಲಿಕೆ

# ಹಿರಿಯೂರು ತಾಲ್ಲೂಕಿನ ಧಾರ್ಮಿಕ ಕ್ಷೇತ್ರಗಳ ದರ್ಶನ

ಡಾ. ಎಸ್.ಜಿ. ರಾಮದಾಸ ರೆಡ್ಡಿ

**ಮರಡಿದೇವಿಗೆರೆಯ ಕೋಡಿಮಲ್ಲೇಶ್ವರ ದೇವಾಲಯ**

ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು ಕೇಂದ್ರದಿಂದ ಚಿತ್ರದುರ್ಗಕ್ಕೆ ಹೋಗುವ ಮಾರ್ಗಮಧ್ಯದಲ್ಲಿ ಪೂರ್ವಕ್ಕೆ 2 ಕಿ.ಮೀ. ದೂರದಲ್ಲಿರುವ ಮರಡಿಹಳ್ಳಿ ಗ್ರಾಮದ ಪಕ್ಕದಲ್ಲಿ ಮರಡಿದೇವಿಗೆರೆ ಎಂಬ ಗ್ರಾಮವಿದೆ. ಈ ಗ್ರಾಮದಲ್ಲಿ ಪ್ರಾಚೀನವಾದ ಮಲ್ಲೇಶ್ವರ ದೇವಾಲಯವಿದೆ.

ದೇವಾಲಯವು ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ದೀಪಸ್ತಂಭಗಳಿಂದ ಕೂಡಿದೆ. ದೇವಾಲಯವನ್ನು ಇಟ್ಟಿಗೆ, ಮಣ್ಣು, ಕಲ್ಲು, ಕಲ್ಲುಚಪ್ಪಡಿಗಳನ್ನು ಬಳಸಿ ನಿರ್ಮಿಸಲಾಗಿದೆ. ದೇವಾಲಯವನ್ನು ಜೀರ್ಣೋದ್ಧಾರ ಮಾಡುವಾಗ ಇಟ್ಟಿಗೆಗಳನ್ನು ತೆಗೆದುಹಾಕಿದ್ದಾರೆ. ಇಲ್ಲಿನ ಇಟ್ಟಿಗೆಗಳು ಗಾತ್ರದಲ್ಲಿ 33 ಸೆಂ.ಮೀ ಉದ್ದ, 70 ಸೆಂ.ಮೀ ಅಗಲ, 9 ಸೆಂ.ಮೀ ದಪ್ಪವಾಗಿರುವ ಪ್ರಾಚೀನ ಕಾಲಕ್ಕೆ ಸೇರಿದವಾಗಿವೆ.

ಗರ್ಭಗೃಹದ ಬಾಗಿಲುವಾಡವು ಸರಳವಾಗಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಅಂತರಾಳದಲ್ಲಿ ಎರಡು ವೃತ್ತಾಕಾರದ ಹಾಗೂ ಆಲಂಕಾರಿಕ ಕಂಬಗಳಿವೆ. ಗರ್ಭಗೃಹದಲ್ಲಿ ಎರಡು ಅಡಿ ಎತ್ತರ, ಮೂರು ಅಡಿ ಉದ್ದ, ಎರಡು ಅಡಿ ಅಗಲವಿರುವ ಪಾಣಿಬಟ್ಟಲು ಇದೆ. ಇದರ ಮೇಲೆ ಅರ್ಧ ಅಡಿ ಎತ್ತರದ ಕಪ್ಪುಶಿಲೆಯ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ.

ನವರಂಗದಲ್ಲಿ ಶಿವಲಿಂಗಕ್ಕೆ ಎದುರಾಗಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ ಹಾಗೂ ಬಹುಮುಖಗಳ ಕೆತ್ತನೆ ಕಂಬಗಳಿವೆ. ಕಂಬಗಳ ಮೇಲ್ಭಾಗದಲ್ಲಿ ವೃತ್ತಾಕಾರದ ಅಬ್ಯಾಕಸ್ ಮತ್ತು ಬೋದಿಗೆಗಳಿವೆ. ಕಂಬಗಳ ಎಂಟು ಪಾರ್ಶ್ವಗಳನ್ನು ಅಲಂಕಾರಿಕವಾಗಿ ಕೆತ್ತಲಾಗಿದೆ. ಕಂಬಗಳ ನಾಲ್ಕು ಭಾಗಗಳಲ್ಲಿ ವಿವಿಧ ಶಿಲ್ಪಗಳ ಕೆತ್ತನೆಗಳಿವೆ. ಶ್ರೀರಾಮ ಏಳು ಮರಗಳನ್ನು ಸೀಳಿ ಹೋಗುವಂತೆ ಬಾಣವನ್ನು ಬಿಡುತ್ತಿರುವುದು, ವಾಲಿ ಸುಗ್ರೀವರ ಹೋರಾಟ, ರಾಮಲಕ್ಷ್ಮಣರು ಸಿಂಹಾಸನದಲ್ಲಿ ಕುಳಿತಿರುವುದು, ವಾಲಿ ಸುಗ್ರೀವರು ಕೈಮುಗಿದು ಕುಳಿತಿರುವುದು ಹೀಗೆ ರಾಮಾಯಣದ ದೃಶ್ಯಗಳನ್ನು ನಾಲ್ಕು ಕಂಬಗಳಲ್ಲಿ ಕೆತ್ತಲಾಗಿದೆ. ಜೊತೆಗೆ ನಂದಿಯ ಮೇಲೆ ಉಮಾಮಹೇಶ್ವರರು ಆಸೀನರಾಗಿರುವುದು,

ನಾಗ–ನಾಗಿಣಿಯರು, ಭೈರವ ಮೊದಲಾದ ಉಬ್ಬುಶಿಲ್ಪಗಳಿವೆ. ನವರಂಗದಲ್ಲಿ ಭುವನೇಶ್ವರಿ ಶಿಲ್ಪ ಇದೆ. ಪದ್ಮ, ವಾದ್ಯಗಾರರು, ನೃತ್ಯಗಾರ್ತಿ, ಗರುಡ ಮುಂತಾದ ಉಬ್ಬು ಶಿಲ್ಪಗಳಿವೆ.

ನವರಂಗದ ಬಾಗಿಲುವಾಡದಲ್ಲಿ ನಾಲ್ಕು ಪಟ್ಟಿಕೆಗಳಿವೆ. ಅವುಗಳಲ್ಲಿ ವಜ್ರ, ಹೂಬಳ್ಳಿ ಸ್ತಂಭಶಾಖೆಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪಗಳಿವೆ. ಬಾಗಿಲ ಇಕ್ಕೆಲಗಳಲ್ಲಿ ಶೈವದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ನವರಂಗದ ಎರಡು ಕಡೆ ಮಹಿಷಮರ್ದಿನಿಯ ಎರಡು ಶಿಲ್ಪಗಳಿವೆ. ಒಂದು ಶಿಲ್ಪವು ಒಂದೂವರೆ ಅಡಿ ಎತ್ತರವಾಗಿದ್ದು ನಾಲ್ಕು ಕೈಗಳನ್ನು ಹೊಂದಿದೆ. ಕರಂಡ ಮಕುಟಧಾರಿಯಾದ ದೇವಿಯು ಬಲಗೈಗಳಲ್ಲಿ ತ್ರಿಶೂಲ, ಎಡಗೈಗಳಲ್ಲಿ ಶಂಖ ಮತ್ತು ಮಹಿಷನನ್ನು ಹಿಡಿದಿದ್ದಾಳೆ. ಕೆಳಗೆ ಮಹಿಷನ ಕೋಣದ ರೂಪಿನ ಮಹಿಷನನ್ನು ಕೊಲ್ಲುತ್ತಿರುವಂತೆ ಹಾಗೂ ದೇವಿಯ ವಾಹನ ಸಿಂಹವನ್ನು ಚಿತ್ರಿಸಲಾಗಿದೆ. ಮಹಿಷಮರ್ದಿನಿಯ ಇನ್ನೊಂದು ದೊಡ್ಡ ಶಿಲ್ಪಕ್ಕೆ ಎಂಟು ಕೈಗಳಿವೆ. ಇವುಗಳಲ್ಲಿ ಪಾಶ, ಶಂಖ, ತ್ರಿಶೂಲಗಳಿವೆ. ಉಳಿದ ಕೈಗಳಲ್ಲಿ ಇರುವ ಆಯುಧಗಳು ಸ್ಪಷ್ಟವಾಗಿ ಕಾಣುತ್ತಿಲ್ಲ. ಕೆಳಗೆ ಕೋಣ ಮತ್ತು ದೇವಿಯ ವಾಹನವಾದ ಸಿಂಹವನ್ನು ಚಿತ್ರಿಸಿರುವರು. ಇವುಗಳಲ್ಲದೆ ಸಪ್ತಮಾತೃಕೆಯರ ಪಟ್ಟಿಕೆ ಮತ್ತು ನಾಗಶಿಲ್ಪಗಳಿವೆ. ದೇವಾಲಯದ ಮೇಲೆ ದ್ವಿತಲ ಶಿಖರವಿದ್ದು, ಇದರಲ್ಲಿ ಗಾರೆಗಚ್ಚಿನ ಕೋಡುಗಳು ಮತ್ತು ನಂದಿಯ ಶಿಲ್ಪಗಳಿವೆ. ಮೇಲ್ಭಾಗದಲ್ಲಿ ಗುಮ್ಮಟಾಕಾರದ ಶಿಖರವಿದೆ. ಅದರ ಮೇಲೆ ಕಳಶವನ್ನು ಪ್ರತಿಷ್ಠಾಪಿಸಿದ್ದಾರೆ.

ಈ ದೇವಾಲಯವನ್ನು ಶೈಲಿಯ ಆಧಾರದ ಮೇಲೆ ಕ್ರಿ.ಶ. 10–11ನೆಯ ಶತಮಾನದಲ್ಲಿ ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಲುಕ್ಯರ ಅಧೀನದಲ್ಲಿ ಆಳ್ವಿಕೆ ಮಾಡಿದ ನೊಳಂಬ–ಪಲ್ಲವರ ಕಾಲದಲ್ಲಿ ನಿರ್ಮಾಣವಾಗಿದೆ ಎಂದು ಹೇಳಬಹುದು. ಇದು ಶೈವಪಂಥಧ ಮೇಲೆ ಬೆಳಕು ಚೆಲ್ಲುವ ಪ್ರಮುಖ ದೇವಾಲಯವಾಗಿರುವುದು ಒಂದು ವಿಶೇಷ. ದೇವಾಲಯವನ್ನು ಸಂರಕ್ಷಿಸುವ ಕಾರ್ಯವನ್ನು ಗ್ರಾಮಸ್ಥರು ಮಾಡಬೇಕಿದೆ.

**ಹಿರಿಯೂರಿನ ಶ್ರೀತೇರುಮಲ್ಲೇಶ್ವರ ದೇವಾಲಯ**

ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು ಕೇಂದ್ರ. ನಗರದ ಮಧ್ಯಭಾಗದಲ್ಲಿ ಐತಿಹಾಸಿಕ ಪ್ರಸಿದ್ಧ ಶ್ರೀತೇರುಮಲ್ಲೇಶ್ವರ ದೇವಾಲಯವಿದೆ. ದೇವಾಲಯದ ಮಹಾದ್ವಾರ ಪೂರ್ವದಿಕ್ಕಿಗೆ ಇದೆ. ಈ ಕ್ಷೇತ್ರವನ್ನು “ದಕ್ಷಿಣಕಾಶಿ” ಎಂದೂ ಕರೆಯುತ್ತಾರೆ.

ಈ ದೇವಾಲಯ ಚಿತ್ರದುರ್ಗ ಜಿಲ್ಲೆಯ ಪ್ರಾಚೀನ ತ್ರಿಕೂಟ ದೇವಾಲಯವಾಗಿದೆ. ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಆಯತಾಕಾರದ ಮಂಟಪ, ನವರಂಗ ಮತ್ತು ಸಭಾಮಂಟಪಗಳನ್ನು ಹೊಂದಿದೆ. ವಿಜಯನಗರದ ರಾಜರ ಕಾಲದಲ್ಲಿ ಮುಖಮಂಟಪ, ದ್ವಾರಗೋಪುರಗಳು ನಿರ್ಮಾಣಗೊಂಡಿವೆ.

ಗರ್ಭಗೃಹ ಚೌಕಾಕಾರವಾಗಿದೆ. ನಾಲ್ಕು ಮೂಲೆಗಳಲ್ಲಿ ನಾಲ್ಕು ಕಂಬಗಳನ್ನು ನಿರ್ಮಿಸಿದ್ದಾರೆ. ಮೂರು ಗರ್ಭಗೃಹಗಳಿವೆ. ಒಂದು ಗರ್ಭಗೃಹದಲ್ಲಿ ಮಲ್ಲೇಶ್ವರ, ಎರಡನೆಯದರಲ್ಲಿ ಮಧ್ಯಭಾಗದಲ್ಲಿ ಶಿವಲಿಂಗವಿದೆ. ಶಿವಲಿಂಗಕ್ಕೆ ಯಾವುದೇ ಪೀಠಪಟ್ಟಿಕೆಗಳಿಲ್ಲ. ಬಲಭಾಗದ ಮತ್ತೊಂದು ಗರ್ಭಗೃಹದಲ್ಲಿ ದೇವಿಯ ಮೂರ್ತಿಶಿಲ್ಪವಿದೆ. ಸರಳವಾದ ದ್ವಾರಬಂಧಕ್ಕೆ ಹೊಂದಿಕೊಂಡಂತೆ ದೀಪದಮಲ್ಲಿಯರ ಶಿಲ್ಪಗಳಿವೆ. ದ್ವಾರಬಂಧವು ಗಮನಾರ್ಹವಾಗಿದೆ.

ಗರ್ಭಗೃಹದ ಪ್ರವೇಶದ್ವಾರದಲ್ಲಿ ಪಂಚಶಾಖೆಗಳಿವೆ. ಲಲಾಟದಲ್ಲಿ ಶಿವಲಿಂಗದ ಕೆತ್ತನೆ ಇದೆ. ದ್ವಾರದ ಕೆಳಭಾಗದಲ್ಲಿ ಪೂರ್ಣ ಕಳಸಗಳಿವೆ. ಅಂತರಾಳದ ಪ್ರವೇಶದ್ವಾರವು ಸಹ ಪಂಚಶಾಖೆಗಳನ್ನು ಹೊಂದಿದೆ. ಲಲಾಟದಲ್ಲಿ ಗಣಪತಿಯ ಉಬ್ಬುಶಿಲ್ಪ ಇದೆ. ಇದರ ಎಡಭಾಗಕ್ಕೆ ಮೂರು ಉತ್ಸವ ಮೂರ್ತಿಗಳಾದ ಶ್ರೀ ತೇರುಮಲ್ಲೇಶ್ವರ, ಶ್ರೀ ಉಮಾಮಹೇಶ್ವರ ಮತ್ತು ಶ್ರೀ ಚಂದ್ರಮೌಳೇಶ್ವರ ಮೂರ್ತಿಗಳನ್ನು ಇಡಲಾಗಿದೆ. ಈ ದ್ವಾರಗಳ ಮಧ್ಯದಲ್ಲಿ ಶೈವ ದ್ವಾರಪಾಲಕರ ಉಬ್ಬುಕೆತ್ತನೆಗಳಿವೆ.

ನವರಂಗದಲ್ಲಿ ಪ್ರಾಚೀನವಾದ ನಂದಿಯ ಶಿಲ್ಪವಿದೆ. ದೇವಾಲಯದ ಹೊರಭಿತ್ತಿ ಜೀರ್ಣೋದ್ಧಾರಗೊಂಡಿದೆ. ವಿಜಯನಗರ ಶೈಲಿಯದೆನಿಸಿದರೂ ಒಳಭಾಗಗಳು ಪ್ರಾಚೀನತೆಯನ್ನು ಸ್ಪಷ್ಟಪಡಿಸುತ್ತವೆ. ಗಂಗರ ವಾಸ್ತುಶೈಲಿಯಲ್ಲಿ ನಿರ್ಮಾಣವಾದರೂ ಇದನ್ನು ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯವೆಂದು ಇಲ್ಲಿನ ಲಕ್ಷಣಗಳಿಂದ ಗುರುತಿಸಬಹುದು.

ವಿಜಯನಗರದ ಅರಸ ಸದಾಶಿವರಾಯನು ಕ್ರಿ.ಶ. 1543–70ರಲ್ಲಿ ಆಳ್ವಿಕೆ ನಡೆಸುತ್ತಿದ್ದಾಗ ಹಿರಿಯೂರನ್ನು ಆಳಿದ ಹರತಿ ಪಾಳೆಯಗಾರ ಕೆಂಚಪ್ಪನಾಯಕನು (ಕ್ರಿ.ಶ.1568–83) ಈ ತೇರುಮಲ್ಲೇಶ್ವರ ದೇವಾಲಯದ ಮುಖಮಂಟಪ, ದ್ವಾರಗೋಪುರಗಳನ್ನು ನಿರ್ಮಿಸಿದನು. ಈ ದೇವಾಲಯಕ್ಕೆ ದತ್ತಿ ನೀಡಿದ ಉಲ್ಲೇಖವನ್ನು ಕ್ರಿ.ಶ. 1567ರ ಶಾಸನ ತಿಳಿಸುತ್ತದೆ. ದ್ವಾರಗೋಪುರದ ವಿಜಯನಗರದ ಕಾಲದಲ್ಲಿ ನಿರ್ಮಾಣಗೊಂಡಿದೆ. ಈ ಗೋಪುರ ಹಂಪಿಯ ವಿರೂಪಾಕ್ಷ ದೇವಾಲಯ, ಮೈಸೂರಿನ ಚಾಮುಂಡೇಶ್ವರಿ ದೇವಾಲಯಗಳ ಗೋಪುರಗಳನ್ನು ಹೋಲುತ್ತದೆ.

ಅಂತರಾಳದ ಮಧ್ಯದಲ್ಲಿ ಕುಳಿತಿರುವ ನಂದಿ ಇದೆ. ಅಂತರಾಳಕ್ಕೆ ಹೊಂದಿಕೊಂಡಂತೆ ನಂದಿಮಂಟಪವಿದೆ. ಆದರೆ ಈಗ ಇಲ್ಲಿ ಯಾವುದೇ ನಂದಿಯ ಶಿಲ್ಪ ಕಂಡುಬರುವುದಿಲ್ಲ. ಈ ಮಂಟಪಕ್ಕೆ ಅಭಿಮುಖವಾಗಿರುವಂತೆ ಎರಡು ಗುಡಿಗಳನ್ನು ನಿರ್ಮಿಸಲಾಗಿದೆ. ಬಲಬದಿಯ ಗುಡಿಯಲ್ಲಿ ಪಾರ್ವತಿಯ ಶಿಲ್ಪವಿದೆ. ಎಡಬದಿಯ ಗುಡಿಯಲ್ಲಿ ಯಾವುದೇ ವಿಗ್ರಹವಿಲ್ಲ. ಬಲಬದಿಯ ಗುಡಿಯ ಪ್ರವೇಶದ್ವಾರದಲ್ಲಿ ದೀಪಸುಂದರಿಯರು ಇದ್ದಾರೆ. ಎಡಬದಿಯ ಗುಡಿಯಲ್ಲಿ ದ್ವಾರದ ಇಕ್ಕೆಲಗಳಲ್ಲಿ ಶಿವಲಿಂಗಕ್ಕೆ ಕೈಮುಗಿಯುತ್ತಿರುವ ಭಕ್ತರು ಹಾಗೂ ಶೈವ ಯತಿಗಳ ಉಬ್ಬುಕೆತ್ತನೆಗಳಿವೆ.

**ನವರಂಗ**

ನಂದಿಮಂಟಪಕ್ಕೆ ಹೊಂದಿಕೊಂಡಂತೆ ನಾಲ್ಕು ಕಂಬಗಳ ನವರಂಗ ಇದೆ. ಇದರ ಪ್ರವೇಶದ್ವಾರಕ್ಕೆ ಹಿತ್ತಾಳೆ ಹೊದಿಕೆಯ ಅಲಂಕರಣೆ ಮಾಡಿದ್ದಾರೆ. ನವರಂಗದ ಮಧ್ಯದ ನಾಲ್ಕು ಕಂಬಗಳು ಪೀಠಪಾದ, ಅಷ್ಟಮುಖ ದಿಂಡು, ಚೌಕ ಅಷ್ಟಮುಖ ದಿಂಡು ಮತ್ತು ಸರಳ ಬೋದಿಗೆಗಳನ್ನು ಹೊಂದಿವೆ. ಕಂಬಗಳ ಪ್ರತಿ ಚೌಕ ಭಾಗಗಳ ಪ್ರತಿ ಮುಖದಲ್ಲೂ ಉಬ್ಬುಕೆತ್ತನೆಗಳನ್ನು ಕಾಣಬಹುದು. ಈ ರೀತಿಯ ಅಲಂಕರಣೆ ಉಬ್ಬುಕೆತ್ತನೆಗಳಲ್ಲಿ ಇಂದ್ರ, ವೀರಭದ್ರ, ಕುಬೇರ, ನರ್ತಕಿಯರು, ವಾದ್ಯಗಾರರು, ಆತ್ಮಲಿಂಗವನ್ನು ಪೂಜಿಸುತ್ತಿರುವ ವರುಣ, ಹಾವಾಡಿಗ, ಅಗ್ನಿ, ಭಕ್ತ ವ್ಯಾಳ, ಹಂಸ, ಯತಿ ಆನೆಯೊಂದಿಗೆ ಹೋರಾಡುವ ಶೈವ ಯತಿ, ದೇವಿ, ಕಾಮಧೇನು, ಭೈರವ, ವೃಷಭಾರೂಢ ಶಿವ, ಗಣೇಶ, ಬೇಡರ ಕಣ್ಣಪ್ಪ ಇತ್ಯಾದಿ ಶಿಲ್ಪಗಳನ್ನು ಕೆತ್ತಲಾಗಿದೆ.

ನವರಂಗದ ವಿತಾನದಲ್ಲಿ ಪದ್ಮದ ಅಲಂಕರಣೆ ಇರುವುದು. ಇಲ್ಲಿ ಪದ್ಮವನ್ನು ನಾಲ್ಕು ಗಿಣಿಗಳು ಸುತ್ತುವರೆದಂತೆ ತೋರಿಸಲಾಗಿದೆ. ನವರಂಗಕ್ಕೆ ಪೂರ್ವ ಮತ್ತು ದಕ್ಷಿಣ ದಿಕ್ಕುಗಳಿಗೆ ಎರಡು ಮುಖ್ಯ ಪ್ರವೇಶ ದ್ವಾರಗಳಿವೆ. ನವರಂಗಕ್ಕೆ ಹೊಂದಿಕೊಂಡಂತೆ ನಾಲ್ಕು ಕಂಬಗಳ ಸಭಾಮಂಟಪವಿದೆ.

ಸಭಾಮಂಟಪಕ್ಕೆ ಸುತ್ತಲೂ ಕಕ್ಷಾಸನವಿದೆ. ಸಭಾಮಂಟಪದಲ್ಲಿರುವ ಒಟ್ಟು ಇಪ್ಪತ್ತು ಕಂಬಗಳಲ್ಲಿ ಮೂರು ಶೈಲಿಗಳನ್ನು ಕಾಣಬಹುದಾಗಿದೆ. ಮಧ್ಯದ ನಾಲ್ಕು ಕಂಬಗಳು ಸಿಂಹ, ಹಸ್ತಿ, ಕಂಬಗಳಾಗಿಯೂ, ಕಕ್ಷಾಸನದ ಮೂಲೆಯಲ್ಲಿರುವ ಕಂಬಗಳು ಮತ್ತೊಂದು ಶೈಲಿಯಲ್ಲಿಯೂ, ಉಳಿದ ಹತ್ತು ಕಂಬಗಳು ಬೇರೊಂದು ರೀತಿಯಲ್ಲಿಯೂ ಇವೆ. ಸಿಂಹ, ಹಸ್ತಿಸ್ತಂಭಗಳ ಒಂದು ಮುಖದಲ್ಲಿ ಆನೆಗಳ ಮೇಲೆ ನಿಂತಿರುವ ಸಿಂಹ ತನ್ನ ಮುಂದಿನ ಎರಡು ಕಾಲುಗಳನ್ನು ಮೇಲಕ್ಕೆತ್ತಿ ನೆಗೆಯುತ್ತಿರುವಂತಿದೆ. ಮತ್ತೊಂದು ಶೈಲಿಯ ಕಂಬಗಳಲ್ಲಿ ಒಂದು ಮುಖದಲ್ಲಿನ ಸಿಂಹಗಳ ಬದಲಿಗೆ ಕಿರು ನೀಳಕಂಬವನ್ನು ಅಳವಡಿಸಿರುವರು. ಮತ್ತೊಂದು ಶೈಲಿಯ ಕಂಬಗಳಲ್ಲಿ ಯಾವುದೇ ಹೆಚ್ಚುವರಿ ವಿರವ ಗಳಿಲ್ಲದೆ ಸಾಮಾನ್ಯ ಕಂಬಗಳಾಗಿವೆ. ಈ ಕಂಬಗಳ ಪ್ರತಿ ಚೌಕಭಾಗಗಳಲ್ಲಿಯೂ ಸಹ ಉಬ್ಬುಶಿಲ್ಪಗಳಿವೆ. ಅವು ವ್ಯಾಳ, ಹಂಸ, ಶೈವ, ನಂದಿ, ಶಂಖ, ಭಕ್ತ, ನರ್ತಕರು ಯತಿ, ಪೂರ್ಣ ಕಳಶ, ಯತಿ, ಪುಂಗಿಊದುವವ, ಗಂಡಬೇರುಂಡ, ಬೇಡರ ಕಣ್ಣಪ್ಪ ಮುಂತಾದ ಶೈವಶಿಲ್ಪಗಳಿವೆ. ಕಂಬಗಳಲ್ಲಿ ಹಾವಾಡಿಗ ಭುವನೇಶ್ವರಿಯನ್ನು ಕಾಣಬಹುದು. ಮುಖ ಮಂಟಪದ ಕಕ್ಷಾಸನದ ಒಳಮೈಯಲ್ಲಿ ಶಿವಪುರಾಣ, ಗಿರಿಜಾಕಲ್ಯಾಣ, ಕಿರಾತಾರ್ಜುನ ಯುದ್ಧ, ಸೀತಾಕಲ್ಯಾಣ, ದಶಾವತಾರ, ಅಷ್ಟದಿಕ್ಪಾಲಕರಲ್ಲದೆ ನೃತ್ಯಶಿಲ್ಪಗಳು ಇವೆ.

ದೇವಾಲಯದ ಹೊರಗಿನ ಏರುವಿನ್ಯಾಸದಲ್ಲಿ ಅಧಿಷ್ಠಾನವಿದೆ. ಇದರಲ್ಲಿ ಉಪಾನ, ಜಗತಿಗಳು, ತ್ರಿಪಟ ಕುಮುದ, ಕಂಠ, ಚಾಚುಪಟ್ಟಿಕೆಗಳಿವೆ. ನಂತರ ಸರಳವಾಸ ಭಿತ್ತಿ

ಇದೆ. ಭಿತ್ತಿಯ ಮೇಲ್ಭಾಗದಲ್ಲಿ ಗರ್ಭಗೃಹದ ಮೇಲೆ ಎತ್ತರಕ್ಕೆ ದ್ರಾವಿಡ ಶೈಲಿಯ ವಿಮಾನವಿದೆ. ಇದರ ಮೇಲೆ ಗುಮ್ಮಟಾಕಾರದ ಶಿಖರವಿದೆ. ಅಲ್ಲಿಂದ ಮೇಲೆ ಕಳಶವಿದೆ. ಭಿತ್ತಿಯ ಸುತ್ತಲೂ ಪ್ರಾಣಿಗಳ ಶಿಲ್ಪಗಳು, ಶಿವಲಿಂಗದ ಶಿಲ್ಪಗಳು, ಉಬ್ಬುಶಿಲ್ಪಗಳು ಹಾಗೂ ಕಥಾನಕಶಿಲ್ಪಗಳಿವೆ. ಭಿತ್ತಿಯ ಮೇಲೆ ಕಪೋತವಿದ್ದು, ಅಧಿಷ್ಠಾನದಿಂದ ಕಪೋತದವರೆಗಿನ ದೇವಾಲಯವನ್ನು ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಇದರ ಮೇಲಿನ ಗೋಪುರ ಮತ್ತು ಶಿಲ್ಪಗಳನ್ನು ಇಟ್ಟಿಗೆ, ಗಾರೆಗಳಿಂದ ಜೀರ್ಣೋದ್ಧಾರಗೊಳಿಸಲಾಗಿದೆ. ಕಪೋತದ ಸುತ್ತಲೂ ಹಾವಾಡಿಗರು, ಮಹಿಳೆಯರು, ನರ್ತಕಿಯರು, ಕಾಮಧೇನು, ಶಿವನಿಗೆ ಹಸು ಹಾಲು ನೀಡುತ್ತಿರುವ ದೃಶ್ಯ, ರಥಶಿಲ್ಪಗಳು ಕಂಡುಬರುತ್ತವೆ. ನಂತರ ಹಂಸಗಳ ಸಾಲು, ಪದ್ಮ ಹಾಗೂ ಸಿಂಹಾಕೃತಿಯ ಶಿಲ್ಪಗಳು, ಕೃಷ್ಣ, ಆಂಜನೇಯ, ಗಂಗೆ–ಯಮುನೆಯರ, ಉಮಾಮಹೇಶ್ವರಿ ಶಿಲ್ಪ, ದ್ವಾರದ ಎರಡು ಬದಿಗಳಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳು ಕಂಡುಬರುತ್ತವೆ.

ದೇವಾಲಯದ ಸುತ್ತಲೂ ಪ್ರಾಂಗಣ ಇದೆ. ಪ್ರಾಂಗಣದ ಪೂರ್ವಕ್ಕೆ ಎರಡು ಕಂಬಗಳ ದ್ವಾರಮಂಟಪವಿದೆ. ಕಂಬಗಳ ಒಂದು ಭಾಗದಲ್ಲಿ ಗಣಪ, ನಾಗಬಂಧ, ಶೈವ ಯತಿ; ಮತ್ತೊಂದು ಕಂಬದಲ್ಲಿ ಭೈರವ, ಪದ್ಮ ಮತ್ತು ಶೈವ ಯತಿಯರ ಉಬ್ಬುಶಿಲ್ಪಗಳಿವೆ. ಕೆಳಗೆ ಶೈವ ದ್ವಾರಪಾಲಕರ ಶಿಲ್ಪಗಳಿವೆ.

ಮಹಾದ್ವಾರದ ಮೇಲೆ ನಿರ್ಮಾಣವಾಗಿರುವ ಐದು ಅಂತಸ್ತುಗಳ ಗೋಪುರವನ್ನು ರಾಯಗೋಪುರ ಎನ್ನುವರು. ಪಾಳೆಯಗಾರರ ಕಾಲದಲ್ಲಿ ಆಳ್ವಿಕೆ ನಡೆಸುತ್ತಿದ್ದ ವೀರಕೆಂಚಪ್ಪನಾಯಕರು ಪೂರ್ವಾಭಿಮುಖವಾಗಿರುವ ಮಹಾದ್ವಾರದ ಮೇಲೆ ಈ ರಾಯಗೋಪುರವನ್ನು ಕಟ್ಟಿಸಿದನು. ದ್ರಾವಿಡ ಶೈಲಿಯಲ್ಲಿರುವ ಈ ಗೋಪುರವು 75 ಅಡಿ ಎತ್ತರವಿದೆ. ಮೇಲ್ಭಾಗದ ಶಿಖರವು 25 ಅಡಿ ಅಗಲವಿದೆ. ಗೋಪುರದ ಮೇಲಕ್ಕೆ ಹೋಗಲು ಒಳಗಡೆಯಿಂದ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಗೋಪುರದ ತಳಭಾಗವು ದೀರ್ಘಚತುರ ಪ್ರಕಾರದಲ್ಲಿದೆ. ಕಲ್ಲು, ಗಾರೆಯನ್ನು ಬಳಸಿ ಇದನ್ನು ನಿರ್ಮಿಸಲಾಗಿದೆ. ಪ್ರವೇಶದ್ವಾರದ ಇಕ್ಕೆಲಗಳಲ್ಲಿ ದ್ವಾರಪಾಲಕರ, ದೇವತಾಪುರುಷರ ಮತ್ತು ಅಪ್ಸರೆಯರ ಶಿಲ್ಪಗಳಿವೆ.

ಒಟ್ಟಾರೆ ತಾಲ್ಲೂಕಿನ ದೇವಾಲಯಗಳು ಶೈವ ಮತ್ತು ವೈಷ್ಣವ ಪಂಥದ ಮೇಲೆ ಬೆಳಕು ಚೆಲ್ಲುವ ಪ್ರಮುಖ ದೇವಾಲಯಗಳಾಗಿವೆ. ಈ ದೇವಾಲಯಗಳು ಗಂಗರ ಕಾಲದಿಂದ ಇಲ್ಲಿಯವರೆಗೆ ಎರಡು ಪಂಥಗಳ ಮಧ್ಯೆ ಸೌಹಾರ್ದ ಬೆಸೆಯುವ ದೇವಾಲಯಗಳಾಗಿದ್ದು ಗ್ರಾಮಗಳಲ್ಲಿ ಶಾಂತಿ, ಸಹಬಾಳ್ವೆಯ ಜೀವನ ನಡೆಸಲು ಅನುವು ಮಾಡಿಕೊಟ್ಟಿವೆ. ಈ ದೇವಾಲಯಗಳನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯವನ್ನು ಮಾಡಬೇಕಿದೆ.

□

# ಸರ್ವಜ್ಞ ವಚನ ವ್ಯಾಖ್ಯಾನ

**ಪ್ರೊ. ಮೊರಬದ ಮಲ್ಲಿಕಾರ್ಜುನ**

**ಸರ್ವಜೀವಾತ್ಮಕನು ಒರ್ವನೆಂಬಾ ಭಾವ**
**ನಿರ್ವಾಹವಾಗಿ ಇರುತಿರಲು ಮೋಕ್ಷ ತಾ**
**ಸರ್ವರಿಗೆ ಸುಲಭ ಸರ್ವಜ್ಞ**

ಜಗತ್ತಿನಲ್ಲಿ ಹಲವಾರು ಜಾತಿ-ಮತಗಳಿವೆ, ಧರ್ಮ-ಪಂಗಡಗಳಿವೆ, ದೇವರುಗಳಂತೂ ಅಸಂಖ್ಯಾತ. ಈ ಮತ, ಧರ್ಮ, ಸದಾ ದೇವರುಗಳಿಗಾಗಿಯೇ ನಾವು ಕಚ್ಚಾಡುತ್ತಿದ್ದೇವೆ, ಸಂಘರ್ಷಕ್ಕೆ ಇಳಿದಿದ್ದೇವೆ. ಇತಿಹಾಸವಂತೂ ಧರ್ಮಯುದ್ಧಗಳ ರಕ್ತಕೋಡಿಯಿಂದ ಒದ್ದೆಯಾಗಿಹೋಗಿದೆ.

ಆದರೆ, ಇದು ಸರಿಯೆ ಎಂಬ ವಿವೇಚನೆ, ಪ್ರಶ್ನೆ ಮತ್ತೆ ಮತ್ತೆ ವಿವೇಕಿಗಳನ್ನು ಕಾಡುತ್ತಲೆ ಇದೆ. ಉಪನಿಷತ್ತು 'ಏಕಂ ಸತ್' 'ದೇವನೊಬ್ಬನೆ ಸತ್ಯ' ಎಂದಿದೆ. ಬಸವಣ್ಣನವರು 'ದೇವನೊಬ್ಬ ನಾಮ ಹಲವು' ಎಂದರು. ಕಬೀರದಾಸರು 'ರಾಮ – ರಹೀಮ ಬೇರೆ ಅಲ್ಲಾ' ಎಂದರು.

ಸರ್ವಜ್ಞನಂತೂ ಈ ಬಗ್ಗೆ ನಿಚ್ಚಳವಾಗಿಯೇ ಹೇಳುತ್ತಾನೆ. ಎಲ್ಲರ ಜೀವದಲ್ಲಿಯೂ ಇರುವ ಆತ್ಮ. ಇಡೀ ಜಗತ್ತಿಗೆ ಒಬ್ಬನೇ, ಆದ ಪರಮಾತ್ಮ ಎಂಬ ಭಾವ ಗಟ್ಟಿಯಾಗಿ ನೆಲೆಗೊಂಡರೆ ಎಲ್ಲರಿಗೂ ಸುಲಭವಾಗಿ ಮೋಕ್ಷ ದೊರೆಯುತ್ತದೆ. ಎಂತಹ ಸರ್ವಾತ್ಮಕ ಭಾವವನ್ನು ಸರ್ವಜ್ಞ ವ್ಯಕ್ತಪಡಿಸಿದ್ದಾನೆ ಎಂಬುದನ್ನು ನಾವು ಗಮನಿಸಬೇಕು.

**ವಿದ್ಯೆವುಳ್ಳನ ಮುಖವು ಮುದ್ದಿನಂತಿರುತಿಕ್ಕು**
**ವಿದ್ಯೆವಿಲ್ಲದನ ಬರಿಮುಖ ಹಾಳೂರ**
**ಹದ್ದಿನಂತಿಕ್ಕು ಸರ್ವಜ್ಞ**

ವಿದ್ಯೆ ಎಂಬುದು ಎಲ್ಲ ಕಾಲದ ಆಕರ್ಷಣೆ ಮತ್ತು ಆದರ್ಶ. ಹಾಗೆ ನೋಡಿದರೆ ಪ್ರಾಣಿ ಪ್ರಪಂಚದಿಂದ ಮನುಷ್ಯನನ್ನು ಬೇರ್ಪಡಿಸಿರುವುದು ಮತ್ತು ಶ್ರೇಷ್ಠನನ್ನಾಗಿಸಿರುವುದು ವಿದ್ಯೆಯೆ. ಉಳಿದೆಲ್ಲ ಪ್ರಾಣಿಗಳೂ ಹಸಿವು, ಬಾಯಾರಿಕೆ, ನಿದ್ರೆಗಳಂತಹ ಪ್ರಾಕೃತಿಕ ವ್ಯವಹಾರಗಳಲ್ಲೇ ಮುಳುಗಿರುವ ಸಂದರ್ಭದಲ್ಲಿ ಮನುಷ್ಯ ಪ್ರಾಕೃತಿಕ ಪ್ರಪಂಚವನ್ನೂ ದಾಟಿ ವಿದ್ಯೆಯ ಬಲದಿಂದ ಸಾಂಸ್ಕೃತಿಕ ಪ್ರಪಂಚದ ನಾಯಕನಾಗಿ ಶೋಭಿಸುತ್ತಿದ್ದಾನೆ. ಹಾಗಂತ ಎಲ್ಲ ಮನುಷ್ಯರೂ ವಿದ್ಯೆಯನ್ನು ಪಡೆದಿದ್ದಾರೆಯೆ ಎಂದು ಕೇಳಿದರೆ ನಾವು ಮೌನವಾಗುತ್ತೇವೆ.

ಎಲ್ಲರೂ ವಿದ್ಯೆ ಪಡೆಯಲು ಸಾಧ್ಯವಾಗದ ಐತಿಹಾಸಿಕ ದುರಂತ ಈ ನಾಡಿನಲ್ಲಿತ್ತು. ಇಂತಹ ಸಂದರ್ಭದಲ್ಲಿ ಎಲ್ಲರನ್ನೂ ವಿದ್ಯೆಯೆಡೆಗೆ ಸೆಳೆಯುವ ಸಕಾರಾತ್ಮಕ ಪ್ರಯತ್ನವನ್ನು ಸರ್ವಜ್ಞನಂತಹವರು ಮಾಡಿದರು. ಅದರ ಫಲವಾಗಿಯೆ ಸರ್ವಜ್ಞ ವಿದ್ಯೆಯುಳ್ಳವನ ಮುಖವು ಮುದ್ದಾಗಿರುತ್ತದೆ. ವಿದ್ಯೆ ಇಲ್ಲದವನ ಬರಿ ಮುಖ ಹಾಳೂರ ಹದ್ದಿನ ಹಾಗಿರುತ್ತದೆ. ಆದ್ದರಿಂದ ವಿದ್ಯೆಯ ವಲಯಕ್ಕೆ ಬನ್ನಿ ಎಂದು ಎಲ್ಲರನ್ನೂ ಕರೆಯುತ್ತಾನೆ.

**ವಿದ್ಯೆ ಕಲಿತರೆ ಇಲ್ಲ ಬುದ್ಧಿ ಕಲಿತರೆ ಇಲ್ಲ**
**ಉದ್ಯೋಗ ಮಾಡಿದರೆ ಇಲ್ಲ ಗುರುಕರುಣ**
**ವಿದ್ದಲ್ಲದಿಲ್ಲ ಸರ್ವಜ್ಞ**

ವಿದ್ಯೆ, ಬುದ್ಧಿ ಮತ್ತು ಉದ್ಯೋಗಗಳು ಮನುಷ್ಯ ತನ್ನ ಸಂಸ್ಕಾರವಶದಿಂದ ಪಡೆಯುವಂತಹವುಗಳು. ಸಂಸ್ಕಾರವನ್ನು ನೀಡುವುದಕ್ಕೆ ಒಬ್ಬ ಯೋಗ್ಯ ಮಾರ್ಗದರ್ಶಕ ಬೇಕು. ಆ ಮಾರ್ಗದರ್ಶಕನನ್ನೇ ನಾವು 'ಗುರು' ಎನ್ನುತ್ತೇವೆ.

ಗುರು ಶಿಷ್ಯನಾದವನಿಗೆ ಅಕ್ಷರ ಕಲಿಸುವುದರ ಮೂಲಕ ವಿದ್ಯೆಯನ್ನು ಹೇಳಿಕೊಡುತ್ತಾನೆ. ಗುಣ, ಸ್ವಭಾವಗಳನ್ನು ತಿದ್ದುವ ಮೂಲಕ ಬುದ್ಧಿಯನ್ನೂ ಕಲಿಸುತ್ತಾನೆ. ನಮ್ಮ ಶಕ್ತಿಸಾಮರ್ಥ್ಯ ತೋರಿಸಿಕೊಡುವುದರ ಮೂಲಕ ಉದ್ಯೋಗದ ದಾರಿಯನ್ನು ತೋರಿಸುತ್ತಾನೆ. ಆದರೆ ಇಷ್ಟೇ ಸಾಕೆ? ಎಂದರೆ ಸಾಲದು. ಜೊತೆಗೆ ಗುರುಕರುಣೆಯೂ ಬೇಕು. ಗುರುಕರುಣೆ ಇದ್ದಾಗ ಮಾತ್ರ ನಾವು ಪ್ರತಿಯೊಂದರಲ್ಲೂ ಗೆಲ್ಲುತ್ತಾ ಹೋಗುತ್ತೇವೆ. ಇಲ್ಲದೆ ಹೋದಾಗ ಎಲ್ಲವೂ ಇದ್ದೂ ಸೋಲನ್ನು ಅನುಭವಿಸಬೇಕಾಗುತ್ತದೆ.

ಉದಾಹರಣೆಗೆ, ಮಹಾಭಾರತದಲ್ಲಿ ಗುರು ದ್ರೋಣರ ಕರುಣೆಗೆ ಒಳಗಾದ ಅರ್ಜುನ ಅರೆಕೊರೆಗಳಿದ್ದೂ ಗೆಲುವಿನ ಸರದಾರನಾಗುತ್ತಾನೆ. ಪರಶುರಾಮರ ಅವಕೃಪೆಗೆ ಒಳಗಾದ ಕರ್ಣ ಸಹಜವಾದ ಸಾಮರ್ಥ್ಯವಿದ್ದೂ ಸೋಲಿಗೆ ಒಳಗಾಗುತ್ತಾನೆ.

**ಭಕ್ತಿಗೆರಡಕ್ಷರವು ಮುಕ್ತಿಗೆರಡಕ್ಷರವು**
**ಭಕ್ತಿಯು ಮುಕ್ತಿವೊಡೆವರೆ ಮುಂದೆ ಆ**
**ರಕ್ಷರವು ಕಾಣ ಸರ್ವಜ್ಞ**

ಸರ್ವಜ್ಞ ಭಕ್ತಿ, ಮುಕ್ತಿಯಂತಹ ಸಾಧನೆಗಳನ್ನು ಸಾಧಿಸುವ ಬಗೆಯನ್ನೂ ಸರಳವಾಗಿ ವಿವರಿಸುವ ಪ್ರಯತ್ನ ಮಾಡಿದ್ದಾನೆ. ಭಕ್ತಿ, ಮುಕ್ತಿ ಎರಡೂ ಎರಡಕ್ಷರದ ಶಬ್ದಗಳು. ಭಕ್ತಿ ಎಂದರೆ ಸಾಧಕ ತಾಳಬೇಕಾದ ಸ್ಥಿತಿ. ಮುಕ್ತಿ ಎಂದರೆ ಸಾಧಕ ಪಡೆಯಬೇಕಾದ ಸ್ಥಾನ. ಭಕ್ತಿಯ ಮೂಲಕ ಮುಕ್ತಿಯನ್ನು ಪಡೆಯಬಹುದು. ಹಾಗೆ ಪಡೆಯಬೇಕಾದರೆ ಸಾಧಕ ಆರಕ್ಷರದ ಮಂತ್ರವನ್ನು ಅವಲಂಬಿಸಬೇಕು.

ಆರಕ್ಷರದ ಮಂತ್ರವೆಂದರೆ 'ಓಂ ನಮಃಶಿವಾಯ' ಎನ್ನುವ ಷಡಕ್ಷರಿ ಮಂತ್ರ. ಓಂ ಎಂದರೆ ಎರಡಲ್ಲದ ಅದ್ವೈತ ಸ್ಥಿತಿ. ಮನಸ್ಸು ಮೂಲಪ್ರಾಣದಲ್ಲಿ ಲೀನವಾಗುವುದರಿಂದ

ಉಂಟಾಗುವ ತನ್ಮಯಾನಂದ. ನ ಎಂದರೆ ನಯನ ತತ್ವ, ಮ ಎಂದರೆ ಮನೋತತ್ವ, ಶಿ ಎಂದರೆ ಶಿರಸ್ಸಿನಲ್ಲಿರುವ, ವಾ ಎಂದರೆ ವಾಯುರೂಪ ಪ್ರಾಣದಲ್ಲಿ, ಯ ಎಂದರೆ ಲಯವಾಗುವುದು.

ವಿಶ್ವಾತ್ಮನ ಸಂಕೇತವಾಗಿರುವ ಪ್ರಣವದಲ್ಲಿ ಲೀನವಾಗಲು ಪಂಚತತ್ವಗಳಿಂದ ಕೂಡಿ ಲೋಕಾಭಿಮುಖವಾಗಿ ವ್ಯವಹರಿಸುತ್ತಿರುವ ಮನಸ್ಸು ಅಂತರ್ಮುಖಿಗೊಂಡು ಏಕತ್ವಗೊಳ್ಳುವುದೇ ಷಡಕ್ಷರಿ ಮಂತ್ರದ ಮರ್ಮ. ಇದೇ ಶೂನ್ಯಸಂಪಾದನೆಯೂ ಹೌದು, ಬಯಲ ಗಳಿಕೆಯೂ ಹೌದು.

**ಹಂದೆಯಾದರೆ ಮೈಯು ಅಂದವುಳ್ಳರೆ ಸಾಕು**
**ಸಂದು ಸಾಸಿರವನಿರಿವರೆ ದುರ್ಜನರ**
**ದಂದುಗವೆ ಬೇಡ ಸರ್ವಜ್ಞ**

ಸರ್ವಜ್ಞ ಸಾಮಾಜಿಕ ಸ್ವಾಸ್ಥ್ಯವನ್ನು ಕುರಿತಂತೆ ಇನ್ನಿಲ್ಲದ ಕಾಳಜಿಯನ್ನು ವ್ಯಕ್ತಪಡಿಸಿದ್ದಾನೆ. ಸಮಾಜ ಸುಕ್ಷೇಮದಿಂದಿರಬೇಕಾದರೆ ಸಜ್ಜನರ ಸಮುದಾಯ ಹೆಚ್ಚಬೇಕು, ದುರ್ಜನರು ಇಲ್ಲವಾಗಬೇಕು ಎಂಬುದು ಅವನ ಕಳಕಳಿ. ಆದ್ದರಿಂದ ಅವನು 'ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ, ದುರ್ಜನರ ಒಡನಾಟ ಬಚ್ಚಲ ರೊಚ್ಚಿನಂತಿಹುದು' ಎಂಬಂತಹ ಮಾತುಗಳ ಮೂಲಕ ಜನಸಾಮಾನ್ಯರ ಮನದಲ್ಲಿ ಸಜ್ಜನಿಕೆಯ ಬಗೆಗಿನ ಬೀಜವನ್ನು ಬಿತ್ತುವ ಪ್ರಯತ್ನ ಮಾಡಿದ್ದಾನೆ.

ಆದರೆ ಬದುಕಿನ ಸಹಜಗತಿಯಲ್ಲಿ ದುರ್ಜನನಾಗುವುದು, ಹೇಡಿಯಾಗುವುದು ಸರಳ, ಸುಲಭ. ಹೇಡಿಯಾಗಿ ಬದುಕುವುದಾದರೆ ನಮ್ಮ ಮೈಯ ಚೆಂದವನ್ನು ಹೆಚ್ಚಿಸಿಕೊಂಡರೆ ಸಾಕು ಮಾನ ಮರ್ಯಾದೆಗಳಿಲ್ಲದೆ ನೂರ್ಕಾಲ ಬದುಕಬಹುದು. ಅದೇ ಹೋರಾಟ ಮಾಡಿ ಮೈತುಂಬ ಗಾಯವಾಗಿಸಿಕೊಂಡು ಬಾಳಬೇಕಾದರೆ ನಿಜವಾದ ಮನೋದಾರ್ಢ್ಯ ಬೇಕು. ಸರ್ವಜ್ಞ ಹೇಳುತ್ತಾನೆ, ಮೈ ಗಾಯಗೊಂಡರೂ ಸರಿಯೆ ನಮ್ಮ ಬದುಕಿನಲ್ಲಿ ದುರ್ಜನರ ದಂದುಗ ಬೇಡ. ಎಂತಹ ಸಾಮಾಜಿಕ ಕಳಕಳಿ!

**ಹೆಣ್ಣಿಗು ಮಣ್ಣಿಗು ಉಣ್ಣದುರಿಯಲು ಬೇಡ**
**ಹೆಣ್ಣಿಂದ ಕೆಟ್ಟ ದಶಕಂಠ ಕೌರವನು**
**ಮಣ್ಣಿಂದ ಕೆಟ್ಟ ಸರ್ವಜ್ಞ**

ಜಗತ್ತಿನ ಯಾವುದೇ ಮಹತ್ಕೃತಿಯನ್ನು ಗಮನಿಸಿದರೂ ಒಂದು ಆಶ್ಚರ್ಯ, ನೋವು ನಮ್ಮನ್ನು ಕಾಡುತ್ತದೆ. ಎಲ್ಲ ಮಹಾಕಾವ್ಯಗಳೂ ಹೋರಾಟದ ಕಥೆಯನ್ನೇ ಹೇಳುತ್ತವೆ. ಅವೆಲ್ಲವೂ ಸಾವು ನೋವಿನ ವ್ಯಥೆಗಳನ್ನೇ ತುಂಬಿಕೊಂಡಿವೆ. ಈ ವ್ಯಥೆಯ ಕಥೆ ಯಾಕಾಗಿ? ಎಂದರೆ ಒಂದೋ ಹೆಣ್ಣಿಗಾಗಿ ಅಥವಾ ಮಣ್ಣಿಗಾಗಿ.

ಉಳಿದ ದೇಶಗಳ ಕಥೆಗಳಿರಲಿ, ನಮ್ಮ ಭಾರತದ ಎರಡು ಮಹಾಕಾವ್ಯಗಳು ರಾಮಾಯಣ ಮತ್ತು ಮಹಾಭಾರತ; ಇವೆರಡೂ ವೀರಾವೇಶದ ಯುದ್ಧದ ದಾಖಲೆಗಳೆ.

ರಾಮಾಯಣದಲ್ಲಿ ರಾಮ ರಾವಣನನ್ನು ಕೊಲ್ಲುತ್ತಾನೆ. ಯಾಕಾಗಿ? ಹೆಂಡತಿಯಾದ ಸೀತೆಗಾಗಿ. ಮಹಾಭಾರತದಲ್ಲಿ ಪಾಂಡವರು ಕೌರವರನ್ನು ನಾಮಾವಶೇಷ ಮಾಡುತ್ತಾರೆ. ಯಾಕಾಗಿ? ನೆಲಕ್ಕಾಗಿ.

ಸರ್ವಜ್ಞ ವಿವೇಕವನ್ನು ಹೇಳುತ್ತಾನೆ. ಬದುಕಿನಲ್ಲಿ ನೆಮ್ಮದಿಯಿಂದ ಬಾಳುವುದನ್ನು ಬಿಟ್ಟು ಹೆಣ್ಣು ಮಣ್ಣಿಗಾಗಿ ಕುದಿಯಬೇಡ. ಏಕೆಂದರೆ ಹೆಣ್ಣಿನಿಂದಾಗಿ ರಾವಣ, ಮಣ್ಣಿನಿಂದಾಗಿ ದುರ್ಯೋಧನ ಉರಿದುರಿದು ಸುಟ್ಟು ಬೂದಿಯಾದರು.

**ಹಬ್ಬದಲಿ ಹೋಗದಿರು ತಬ್ಬಿಬ್ಬನಾಗದಿರು**
**ಕೊಬ್ಬದಿರು ಬಾಳು ಬಂದಲ್ಲಿ ಪರಸತಿಯ**
**ತಬ್ಬಿದರೆ ಕೇಡು ಸರ್ವಜ್ಞ**

ನಮ್ಮ ಸಮಾಜವ್ಯವಸ್ಥೆಯಲ್ಲಿ ಕುಟುಂಬಕ್ಕೆ ವಿಶಿಷ್ಟವಾದ ಸ್ಥಾನವಿದೆ. ಕುಟುಂಬದ ಕಟ್ಟುಕಟ್ಟಳೆಗಳನ್ನು ಸಂರಕ್ಷಿಸುವುದರ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಉಳಿಸಿಕೊಂಡು ಬರುವ ಪ್ರಯತ್ನ ಎಂದಿನಿಂದಲೂ ನಡೆದುಕೊಂಡು ಬಂದಿದೆ.

ಅದರಲ್ಲೂ ಸತಿ–ಪತಿಗಳ ಸಂಬಂಧವನ್ನು ಹೆಚ್ಚು ಗಟ್ಟಿಗೊಳಿಸುವ ಪ್ರಯತ್ನ ಎಂದಿನಿಂದಲೂ ನಡೆಯುತ್ತಲೇ ಇದೆ. ನಮ್ಮ ವ್ಯವಸ್ಥೆ ಪತಿವ್ರತಾ ಧರ್ಮದ ಮೂಲಕ, ಏಕಪತ್ನೀ ವ್ರತದ ಮೂಲಕ ಗಂಡ–ಹೆಂಡತಿಯರಲ್ಲಿ ನಿಷ್ಠೆಯನ್ನು ನೆಲೆಗೊಳಿಸುವ ಯತ್ನವನ್ನು ಮನಃಪೂರ್ವಕವಾಗಿ ಮಾಡಿದೆ. ಶರಣರಂತೂ 'ಸತಿ–ಪತಿಗಳು ಒಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂದಿದ್ದಾರೆ.

ಹೀಗಿದ್ದೂ ಮನುಷ್ಯ ಸಂಯಮಿಯಾಗದೆ ಹೋಗಿರುವ ಪ್ರಕರಣಗಳು ಅಸಂಖ್ಯಾತ. ಆದ್ದರಿಂದಲೆ ಪರಸತಿಯ ಒಡನಾಟಕ್ಕಾಗಿ ಸಂಭ್ರಮದಿಂದ ಮುನ್ನುಗ್ಗಬೇಡ, ಎಡಬಿಡಂಗಿಯಾಗಬೇಡ, ಯಾರೋ ನಿನಗೆ ದಕ್ಕಿದರು ಎಂದು ಅಹಂಕಾರ ಪಡಬೇಡ. ಪರಸತಿಯ ಸಹವಾಸ ಸರ್ವನಾಶಕ್ಕೆ ದಾರಿ ಎಂದು ಸರ್ವಜ್ಞ ಎಚ್ಚರಿಸಿದ್ದಾನೆ.

**ಇಟ್ಟ ವಿಭೂತಿ ತಾ ಪಟ್ಟದಂತಿರುತಿಕ್ಕು**
**ಇಟ್ಟ ವಿಭೂತಿ ಅಳಿದರೆ ಸೀಹೋದ**
**ಬಟ್ಟೆಯಂತಿಕ್ಕು ಸರ್ವಜ್ಞ**

ನಾವು ಹಣೆಯ ಮೇಲೆ ವಿಭೂತಿ ಧರಿಸುತ್ತೇವೆ. ವಿಭೂತಿ ಧರಿಸುವುದು ನಾನು ನಿರ್ದಿಷ್ಟವಾದ ಸಮುದಾಯಕ್ಕೆ ಸೇರಿದ್ದೇನೆ ಎಂದು ಹೇಳುವುದಕ್ಕಲ್ಲ, ಬದಲಾಗಿ ನನ್ನ ಮನಸ್ಸಿನಲ್ಲಿರುವ ಕಾಮ–ಕ್ರೋಧ –ಮದ–ಮತ್ಸರ–ಲೋಭ–ಮೋಹಗಳನ್ನು ಸುಟ್ಟುಹಾಕಿದ್ದೇನೆ ಎಂಬ ಸಂಕೇತ ಅದು. ವಿಭೂತಿ ಎಂಬುದು ವೈರಾಗ್ಯದ ಪಟ್ಟದ ಹಾಗೆ ಇರುವಂತಹುದು; ಆ ಎಚ್ಚರ ನಮಗೆ ಬೇಕು.

ನಾವು ಧರಿಸಿದ ವಿಭೂತಿ ಅಳಿಸಿಹೋದರೆ, ಅಂದರೆ ನಾವು ಅರಿಷಡ್ವರ್ಗಗಳಿಗೆ ಬಲಿಯಾದರೆ, ವೈರಾಗ್ಯದ ಭಾವವನ್ನು ಬದಿಗಿಟ್ಟು ವಿಷಯವಾಸನೆಗಳಿಗೆ ಒಳಗಾದರೆ, ಲೌಕಿಕ ಜಂಜಡಗಳ ದಾಸರಾದರೆ ನಮ್ಮ ಬದುಕು ಸುಟ್ಟುಹೋದ ಬಟ್ಟೆಯಂತಾಗುತ್ತದೆ.

ಸರ್ವಜ್ಞನ ದೃಷ್ಟಿಯಲ್ಲಿ ವಿಭೂತಿ ಎನ್ನುವುದು ವ್ಯಕ್ತಿಯ ಅಂತರಂಗವನ್ನು ಶುದ್ಧಗೊಳಿಸಿ ಬಹಿರಂಗದ ಕವಚವಾಗಿ ಕಾಪಾಡುವ ಶಕ್ತಿ. ವಿಭೂತಿ ಅಳಿಸುವುದು ಎಂದರೆ ಮರ್ಯಾದೆಯ ಬಟ್ಟೆ ಸುಟ್ಟುಹೋಗಿ ನಮ್ಮ ಬದುಕು ಬತ್ತಲಾಗುವುದು ಎಂದರ್ಥ. ಹಾಗಾಗುವುದು ಬೇಡ ಎಂಬ ಎಚ್ಚರಿಕೆಯನ್ನು ಅವನು ನೀಡುತ್ತಿದ್ದಾನೆ.

**ಆಗದ ಕೆಲಸಕ್ಕೆ ಸಾಗರ ಬಯಲಕ್ಕು**
**ಆಗಿಕ್ಕು ಶಿವನ ಒಲವಿರಲು ಅಲ್ಲದೊಡೆ**
**ಹೋಗಿಕ್ಕು ಕೂಡ ಸರ್ವಜ್ಞ**

ಮನುಷ್ಯ ಬದುಕಿನ ಪ್ರತಿಯೊಂದು ಕಾರ್ಯಕ್ಕೂ ಎರಡು ಬಲಗಳು ಬೇಕಾಗುತ್ತವೆ. ಒಂದು ಪುರುಷಪ್ರಯತ್ನ, ಇನ್ನೊಂದು ದೈವಬಲ. ಆದರೆ ಎಷ್ಟೋ ಸಂದರ್ಭದಲ್ಲಿ ಅಹಂಕಾರಿಯಾದ ಮನುಷ್ಯ ದೈವಬಲವನ್ನು ಧಿಕ್ಕರಿಸಿ ಎಲ್ಲವೂ ತನ್ನಿಂದಲೇ ಸಾಧ್ಯ ಎಂಬ ಪ್ರಯತ್ನದಲ್ಲಿ ತೊಡಗುತ್ತಾನೆ. ಆಗ ಅವನು ಪ್ರತಿಯೊಂದರಲ್ಲೂ ಸೋಲುತ್ತಲೇ ಹೋಗುತ್ತಾನೆ. ಉದಾಹರಣೆಗೆ ರಾವಣ ದುರ್ಯೋಧನರ ಸೋಲಿನ ಕಥೆಯನ್ನು ಗಮನಿಸಬಹುದು. ದೈವಬಲವನ್ನು ಕಳೆದುಕೊಂಡ ರಾವಣನ ಸುವರ್ಣಲಂಕೆ ಸುಟ್ಟು ಭಸ್ಮವಾಗುತ್ತದೆ. ದುರ್ಯೋಧನ ಹನ್ನೊಂದು ಲಕ್ಷ ಅಕ್ಷೋಹಿಣಿ ಸೈನ್ಯವಿದ್ದೂ ಸೋಲುತ್ತಾನೆ, ಸಾಯುತ್ತಾನೆ.

ಇದನ್ನೇ ಸರ್ವಜ್ಞ ನಾವು ಮಾಡುವ ಕೆಲಸ ನಿರರ್ಥಕ ಎಂದಾದರೆ ಸಾಗರದ ನೀರೂ ಬತ್ತಿ ಬಯಲಾಗುತ್ತದೆ. ಒಂದು ವೇಳೆ, ನಾವು ಮಾಡುವ ಕಾರ್ಯ ಧರ್ಮಪರವಾಗಿದ್ದು, ಒಳಿತಾಗಿದ್ದರೆ, ಶಿವನ ಒಲುಮೆಗೆ ಪಾತ್ರವಾಗಿದ್ದರೆ ಅದರಲ್ಲಿ, ಯಶಸ್ಸನ್ನು ಗಳಿಸುವುದು ಸಾಧ್ಯ ಎನ್ನುತ್ತಾನೆ. ಕೃಷ್ಣನ ಒಲುಮೆಯಿಂದ ಪಾಂಡವರು ಜಯಶಾಲಿಗಳಾಗಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

**ಕಾಯಕವುಳ್ಳರೆ ನಾಯಕನೆನಿಸುವ**
**ಕಾಯಕ ತೀರಿದ ಮರುದಿನ ಅಡವಿಯ**
**ನಾಯಕನೆನಿಪ ಸರ್ವಜ್ಞ**

ಬಸವಾದಿ ಶರಣರು ಕಾಯಕಕ್ಕೆ ಬಹು ದೊಡ್ಡ ಸ್ಥಾನವನ್ನು ಕೊಟ್ಟಿದ್ದಾರೆ. ಕಾಯ ಎಂದರೆ ದೇಹ. ಕಾಯಕ ಎಂದರೆ ದೇಹಪೋಷಣೆಗಾಗಿ ನಾವು ಕೈಗೊಳ್ಳುವ ಸಂಪಾದನೆಯ ಮಾರ್ಗ, ವೃತ್ತಿ.

ಶರಣರ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಕಾಯವನ್ನು ಪೋಷಿಸಲೇಬೇಕು. ಏಕೆಂದರೆ ನಮ್ಮ ದೇಹ ಬರಿ ದೇಹವಲ್ಲ, ಅದು ಪ್ರಸಾದಕಾಯ. ದೇವರ ಅನುಗ್ರಹದಿಂದ ನಮಗೆ ದೊರೆತದ್ದು. ಇದರ ಪೋಷಣೆ ನಮ್ಮ ಸ್ವಂತ ದುಡಿಮೆಯಿಂದಲೇ ಆಗಬೇಕು ಎಂಬ ಛಲ ಶರಣರದು. ಆದ್ದರಿಂದ ಪ್ರತಿಯೊಬ್ಬ ಶರಣರೂ ಕಡ್ಡಾಯವಾಗಿ ಸತ್ಯಶುದ್ಧ ಕಾಯಕ ಮಾಡುತ್ತಲೇ ಇದ್ದರು. ಎಲ್ಲ ಶರಣರನ್ನೂ ಅವರ ವೃತ್ತಿವಾಚಕಗಳಿಂದಲೇ ನಾವು ಗುರುತಿಸುತ್ತೇವೆ.

ಇದನ್ನು ಸೂಕ್ಷ್ಮವಾಗಿ ಗಮನಿಸಿದ ಸರ್ವಜ್ಞ ಎಲ್ಲ ಶರಣರೂ ತಮ್ಮ ಕಾಯಕ ಗಳಿಂದಲೇ ಇಂದು ನಮ್ಮ ನಾಯಕರು ಎನಿಸಿಕೊಂಡಿದ್ದಾರೆ. ನಾವು ಕೂಡ ನಾಯಕರಾಗ ಬೇಕು ಎಂದಾದರೆ ಕಾಯಕ ಮಾಡಬೇಕು. ಕಾಯಕ ಮಾಡುವವರೆಗೆ ನಾವು ನಾಯಕರು ಎನಿಸಿಕೊಳ್ಳುತ್ತೇವೆ. ಕಾಯಕ ನಿಂತಿತು ಎಂದಾದರೆ ಕಾಡುಮನುಷ್ಯರಾಗುತ್ತೇವೆ ಎಂದು ಎಚ್ಚರಿಸುತ್ತಾನೆ.

□

## ಚಂದಾದಾರರಲ್ಲಿ ವಿನಂತಿ

'ಪ್ರಸಾದ' ಮಾಸಪತ್ರಿಕೆಯ ಚಂದಾ ಅವಧಿ (10 ವರುಷಗಳು) ಮುಗಿದಿರುವ ಚಂದಾದಾರರು ಚಂದಾ ಹಣ ಪಾವತಿಸಿ ಸದಸ್ಯತ್ವವನ್ನು ನವೀಕರಿಸಿಕೊಳ್ಳಲು ವಿನಂತಿಸಿದೆ. ಚಂದಾ ಹಣವನ್ನು ಪಾವತಿಸಬೇಕಾಗಿರುವ ಖಾತೆಯ ವಿವರಗಳು ಇಂತಿವೆ.

ಚಂದಾ ಮೊಬಲಗು: ರೂ. 500 (ಹತ್ತು ವರ್ಷಗಳಿಗೆ)

Name of the Account : JSS Prasada Magazine

Branch : JSS College Branch, Mysuru

IFSC : SBIN0040249

ಹಣ ಪಾವತಿಗೆ ಸಂಬಂಧಿಸಿದ ಚೆಕ್/ಡಿಡಿ/UTR ನಂ. ಮೊದಲಾದ ವಿವರಗಳನ್ನು 'ಪ್ರಸಾದ ಮಾಸಪತ್ರಿಕೆ, ಪ್ರಕಟಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ, ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004' ಈ ವಿಳಾಸಕ್ಕೆ ಕೂಡಲೇ ಕಳುಹಿಸಿಕೊಡಲು ಕೋರಿದೆ.

**ಪ್ರಕಾಶಕರು**

# ವಚನಸಾಹಿತ್ಯದ ಪ್ರಭಾವದಲ್ಲಿ ಕಂಬಾರರ 'ಶಿವರಾತ್ರಿ' ನಾಟಕ

**ಕೆ.ಬಿ. ಹೇಮಲತ**

ಕನ್ನಡ ಸಾಹಿತ್ಯವು ಹಲವು ಸಾಹಿತ್ಯರೂಪಗಳ ಸಂಗಮವಾಗಿದೆ. ಹಳಗನ್ನಡ, ನಡುಗನ್ನಡ ಮತ್ತು ಆಧುನಿಕ ಕನ್ನಡ ಎಂಬ ಸಾಹಿತ್ಯಘಟ್ಟಗಳಲ್ಲಿ ಮಧ್ಯಕಾಲೀನ ಘಟ್ಟದ ವಚನ ಸಾಹಿತ್ಯವು ಒಂದು ತಲೆಮಾರನ್ನು ಎಚ್ಚರಗೊಳಿಸಿದ ಹಾಗೂ ರಾಜಕೀಯ–ಸಾಮಾಜಿಕ ಪರಿವರ್ತನೆಯ ಮನ್ವಂತರಕ್ಕೆ ಸಾಕ್ಷಿಯಾದ ಕಾಲಮಾನವಾಗಿದೆ. ಹತ್ತು ಶತಮಾನಗಳು ಕಳೆದರೂ ವಚನಸಾಹಿತ್ಯವು ಹೊಸಗನ್ನಡದ ಸಂದರ್ಭದಲ್ಲಿಯೂ ಬೇರೆಬೇರೆ ಆಯಾಮಗಳ ಮೂಲಕ ತನ್ನ ಪ್ರಭಾವವನ್ನು ಉಳಿಸಿಕೊಂಡಷ್ಟು, ಪ್ರಾಯಶಃ ಬೇರಾವ ಸಾಹಿತ್ಯಪ್ರಕಾರವೂ ಪ್ರಭಾವಿಸಿಲ್ಲವೆಂದೇ ಹೇಳಬಹುದಾಗಿದೆ.

ವಚನಸಾಹಿತ್ಯವು ದೇಸೀ ಹಿನ್ನೆಲೆಯ ಸಾಹಿತ್ಯರೂಪವಾಗಿದೆ. ಕಾಯಕ–ದಾಸೋಹ ಎಂಬ ಪ್ರಮುಖ ಮೌಲ್ಯಗಳೊಂದಿಗೆ, ಸ್ತ್ರೀಸಮಾನತೆ, ಹೊಸ ಜೀವನದೃಷ್ಟಿ, ಜಾತಿಸಂಕರದ ಪರಿಕಲ್ಪನೆಗಳು ಇಂದಿಗೂ ಪ್ರಸ್ತುತವಾಗಿವೆ. ಆಧುನಿಕ ಸಾಹಿತ್ಯಘಟ್ಟದಲ್ಲಿಯೂ ಹಲವಾರು ಲೇಖಕರು ತಮ್ಮ ಕೃತಿಗಳಲ್ಲಿ, ಅಂದರೆ ಕಥೆ, ಕಾವ್ಯ, ಕಾದಂಬರಿ, ನಾಟಕ, ಪ್ರಬಂಧ ಮೊದಲಾದ ಪ್ರಕಾರಗಳನ್ನು ಬಳಸಿಕೊಂಡು, ವಚನಸಾಹಿತ್ಯದ ವಸ್ತುವನ್ನು ಪುನರ್ ರಚಿಸುತ್ತಲೇ ಬಂದಿದ್ದಾರೆ. ಅಂತಹ ಕೃತಿಗಳಲ್ಲಿ ಚಂದ್ರಶೇಖರ ಕಂಬಾರರ 'ಶಿವರಾತ್ರಿ' ನಾಟಕ ವಿಶೇಷವಾಗಿ ಗಮನ ಸೆಳೆಯುತ್ತದೆ. ಈ ಕೃತಿಯ ಮೇಲೆ ವಚನ ಸಾಹಿತ್ಯದ ದಟ್ಟ ಪ್ರಭಾವವನ್ನು ಕಾಣಬಹುದು.

ಚಂದ್ರಶೇಖರ ಕಂಬಾರರ 'ಶಿವರಾತ್ರಿ' ನಾಟಕ ನವ್ಯ ಸಾಹಿತ್ಯಪ್ರಕಾರದ ಲಕ್ಷಣವನ್ನು ಹೊಂದಿದೆ. ನವ್ಯ ಸಾಹಿತ್ಯದಲ್ಲಿ ವ್ಯಕ್ತಿಯನ್ನು ಆವರಿಸಿಕೊಂಡಿರುವ 'ಅನಾಥಪ್ರಜ್ಞೆ, ಸಿನಿಕತನ, ಒಂಟಿತನ, ದ್ವಂದ್ವ, ನೋವು–ಹತಾಶೆಗಳನ್ನು'[1] ನಾಟಕದಲ್ಲಿ ಸಮರ್ಥವಾಗಿ ಹಿಡಿದಿಡಲಾಗಿದೆ. ಬಿಜ್ಜಳನ ಪಾತ್ರದಲ್ಲಿ ನವ್ಯತೆಯ ಪರಿಕಲ್ಪನೆಯನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಅಲ್ಲದೆ ಬಸವಣ್ಣ, ಸಾವಂತ್ರಿ, ಕಾಮಾಕ್ಷಿ ಮೊದಲಾದ ಪಾತ್ರಗಳ ಆದರ್ಶಗಳನ್ನು ಇಂದಿನ ಕಾಲಕ್ಕೆ ಒಗ್ಗಿಸಿರುವ ಬಗೆಯನ್ನು ಹಾಗೂ ವಚನಸಾಹಿತ್ಯದ ಪ್ರಭಾವವನ್ನು 'ಶಿವರಾತ್ರಿ' ನಾಟಕದ ಹಿನ್ನೆಲೆಯಲ್ಲಿ ಗುರುತಿಸಬಹುದು.

ಮಾಂಡಳಿಕನಾಗಿದ್ದ ಬಿಜ್ಜಳನು ಚಾಲುಕ್ಯ ಸಾಮ್ರಾಜ್ಯವನ್ನು ಆಕ್ರಮಿಸಿ ಮಂಗಳವೇಡೆಯಿಂದ ಕಲ್ಯಾಣಕ್ಕೆ ಬಂದಂತಹ ವಿಚಾರವನ್ನು ಪ್ರಸ್ತಾಪಿಸುವ ಸೂತ್ರಧಾರನ

ಮಾತಿನೊಂದಿಗೆ 'ಶಿವರಾತ್ರಿ' ನಾಟಕ ಆರಂಭವಾಗುತ್ತದೆ. ಕಲ್ಯಾಣದ ಕ್ರಾಂತಿಯ ಮೂಲ ಬೀಜವಾದ ಹರಳಯ್ಯ–ಮಧುವರಸರನ್ನು ಶೂಲಕ್ಕೇರಿಸಿದ ವಿಚಾರ ಕಾಡ್ಗಿಚ್ಚಿನಂತೆ ಹಬ್ಬಿ, ಜನಸಾಮಾನ್ಯರ ಬಾಯಲ್ಲಿ ವಿಮರ್ಶೆಗೊಳ್ಳುತ್ತದೆ. ಮುಗ್ಧ ಸಂಗಯ್ಯ ಎಂಬ ಹುಡುಗ ಸಾವಂತ್ರಿಯ ಮನೆಯನ್ನು ಹುಡುಕಿಕೊಂಡು ಬಂದಾಗ ಕಲ್ಯಾಣದ ನಗರದೇವತೆಯಾದ ಹುಚ್ಚಿಯ ಮಾತುಕತೆಗಳು ನಾಟಕದಲ್ಲಿ ಸಾಂಕೇತಿಕವಾಗಿವೆ. ಬಸವಣ್ಣನವರನ್ನು ಕೊಲ್ಲಲು ಕಾಶ್ಮೀರದಿಂದ ಬಂದ ಕಳ್ಳ ಚಿಕ್ಕಯ್ಯನು ಅವರ ತತ್ತ್ವಗಳನ್ನು ಮೆಚ್ಚಿ ಶರಣನಾದ ಪ್ರಸಂಗ ಅದ್ಭುತವಾಗಿದೆ.

ಮಾರುವೇಷದಲ್ಲಿ ಬಂದ ಬಿಜ್ಜಳನು ಸಾವಂತ್ರಿಯ ಮನೆಯನ್ನು ಪ್ರವೇಶಿಸುತ್ತಾನೆ. ಆಗ ಸಾವಂತ್ರಿಯು ಕಾಮಾಕ್ಷಿ ಮುಗ್ಧ ಸಂಗಯ್ಯನ ಸೇವೆಯಲ್ಲಿರುವುದಾಗಿ ತಿಳಿಸಿದಾಗ, ಬಿಜ್ಜಳನ ಕೋಪ ನೆತ್ತಿಗೇರುತ್ತದೆ. ಮುಗ್ಧ ಸಂಗಯ್ಯನ ಲಿಂಗಪೂಜೆ ನೋಡಿದ ಮೇಲೆ ಬಿಜ್ಜಳನಲ್ಲಿ ಮುಗುಳುನಗೆ ಮೂಡುತ್ತದೆ. ಮುಗ್ಧ ಸಂಗಯ್ಯನು ಸಾವಂತ್ರಿಯ ಮನೆಯಲ್ಲಿರುವುದನ್ನು ತಿಳಿದ ಬಸವಣ್ಣನೂ ಅವನನ್ನು ಕರೆದೊಯ್ಯಲು ಬರುತ್ತಾನೆ. ಬಹಳ ದಿನಗಳಿಂದ ಭೇಟಿಯಾಗದಿದ್ದ ಬಿಜ್ಜಳ–ಬಸವಣ್ಣರು ಇಂಥದೊಂದು ವಿಚಿತ್ರ ಸನ್ನಿವೇಶದಲ್ಲಿ ಸಂಧಿಸಿ ಸಮಾಲೋಚಿಸುತ್ತಾರೆ. ಆಗಲೂ ಇಬ್ಬರ ವಿಚಾರಗಳಲ್ಲಿ ಸಾಮರಸ್ಯ ಸಾಧಿಸಲಾಗುವುದಿಲ್ಲ. ಬಸವಣ್ಣನು ಹರಳಯ್ಯನ ಮಗ ಶೀಲವಂತನ ರಕ್ಷಣೆ ಮಾಡುವಂತೆ ಬಿಜ್ಜಳನನ್ನು ಕೋರುತ್ತಾನೆ. ಆದರೆ ಕೈಮೀರಿದ ಸನ್ನಿವೇಶದಲ್ಲಿ ಶೀಲವಂತನ ಹತ್ಯೆಯಾದಾಗ ಮುಗ್ಧ ಸಂಗಯ್ಯ ಮತ್ತು ಬಸವಣ್ಣರು ಶರಣರೊಂದಿಗೆ ಕಲ್ಯಾಣವನ್ನು ತೊರೆಯುತ್ತಾರೆ. ಬಸವಣ್ಣನ ಕೊನೆಯ ಆಸೆಯನ್ನೂ ಈಡೇರಿಸಲಾಗದ್ದಕ್ಕೆ ಖೇದಗೊಂಡ ಬಿಜ್ಜಳನಿಗೆ ಮತ್ತೊಂದು ಆಘಾತ ಎದುರಾಗುತ್ತದೆ. ಚಾಲುಕ್ಯರ ಕಾಲದ ವೈರಿಗಳಾದ ಜಗದೇವ ಮತ್ತು ಮಲ್ಲಿಬೊಮ್ಮಣ್ಣರು ನಗರ ದೇವತೆಯ ಆಣತಿಯಂತೆ ಬಿಜ್ಜಳನನ್ನು ಕೊಲ್ಲುವರು. ತನ್ನಿಂದ ದೂರವಾಗಿ ಹೋದ ಬಸವಣ್ಣನ ಸ್ನೇಹ ಬಿಜ್ಜಳನ ಮನವನ್ನು ಇನ್ನಿಲ್ಲದಂತೆ ಕಾಡುತ್ತದೆ. "ಹೇಳಿ–ಕೇಳಿ ಭವಿ ನಾನು ಬಸವಣ್ಣ, ಕ್ಷಮಿಸು ನನ್ನ!" ಎಂಬ ಉದ್ಗಾರದ ಮೂಲಕ ಕಲ್ಯಾಣದ ಚರಿತ್ರೆ ಕೊನೆಗೊಳ್ಳುತ್ತದೆ.

'ತ್ರಿಭುವನಮಲ್ಲ'ನಾದ ಕಳಚೂರಿ ದೊರೆ ಬಿಜ್ಜಳನು ತನ್ನ ರಾಜ್ಯಾಪಹಾರಿ ವ್ಯಕ್ತಿತ್ವದಿಂದಾಗಿ ಮಾಂಡಳಿಕನಾಗಿದ್ದವನು ಬಹುಬೇಗ ಸಾಮ್ರಾಟನಾದನು.[2] ಬಿಜ್ಜಳನ ಮಗ ಸೋವಿದೇವನ ಶಾಸನಗಳಲ್ಲಿ ಬಿಜ್ಜಳ ಹಲವು ಚಾಲುಕ್ಯ ರಾಜವಂಶೀಯರನ್ನು ಕೊಂದು ಸಾಮ್ರಾಜ್ಯ ಪಡೆದನೆಂದು[3] ಹೇಳಿರುವುದರಿಂದ ಅವನ ರಕ್ತಸಿಕ್ತ ರಾಜಕಾರಣದ ಅರಿವಾಗುತ್ತದೆ. ಬಸವಣ್ಣನಂತಹ ಉನ್ನತ ವ್ಯಕ್ತಿತ್ವದ ಸಮಾಜಮುಖಿ ಕಾರ್ಯಗಳತ್ತ ಒಲವಿರುವ ಮಂತ್ರಿಯ ಬೆಂಬಲದಿಂದಾಗಿ ಬಿಜ್ಜಳನ ಆಡಳಿತ ಸುಭಿಕ್ಷದಿಂದ ಸಾಗುತ್ತಿತ್ತು. ಆದರೆ ಬಿಜ್ಜಳನು ಚಾಡಿಕೋರರ ಮಾತಿಗೆ ಬೆಲೆ ನೀಡಿದ ಪರಿಣಾಮವಾಗಿ ಸಮಾಜಸುಧಾರಕರೂ, ಶ್ರೇಷ್ಠ ಶಿವಶರಣರೂ ಮತ್ತು ತನ್ನ ಸ್ನೇಹಿತರೂ ಆಗಿದ್ದ

ಬಸವಣ್ಣನ ಉನ್ನತ ವ್ಯಕ್ತಿತ್ವ ಬಿಜ್ಜಳನಿಗೆ ಪ್ರಬಲ ಪ್ರತಿಸ್ಪರ್ಧಿಯಂತೆ ಕಾಣತೊಡಗಿತು. ಪರಿಣಾಮ ಬಸವಣ್ಣ ಮಂತ್ರಿಪದವಿಯನ್ನು ತೊರೆದನು. ಬಿಜ್ಜಳ ದುಷ್ಟಕೂಟದಲ್ಲಿ ಬಂದಿಯಾಗಿ ವಿವೇಕವನ್ನು ಕಳೆದುಕೊಂಡು ಕರ್ತವ್ಯ ಮರೆತನು. ಬಸವಣ್ಣನು ತನ್ನ ಎಂದಿನ ಕಾಯಕ, ದಾಸೋಹ, ಸಮಾಜಸುಧಾರಣೆಯಲ್ಲಿ ತೊಡಗಿಕೊಂಡನು. ಈ ಸಮಯದಲ್ಲಿ ವಚನಸಾಹಿತ್ಯದ ತತ್ತ್ವಗಳನ್ನು ಕಾರ್ಯರೂಪಕ್ಕೆ ತರಲು ಬಸವಣ್ಣ ಮುಂದಾದನು. ಅದಕ್ಕೆ ನಾಂದಿಯಾಗಿ ವರ್ಣಸಂಕರದ ಒಂದು ಘಟನೆ ಕಲ್ಯಾಣದಲ್ಲಿ ನಡೆಯಿತು. ಅದೇ 'ಕಲ್ಯಾಣದ ರಾಜಕೀಯವನ್ನು ಧರ್ಮವಿವೇಕ ಸಂಧಿಸಿದ'[4] ಘಟನೆಯಾದ ಹರಳಯ್ಯ–ಮಧುವರಸರ ಶರಣಸಂಬಂಧವು ಏರ್ಪಟ್ಟ ಸನ್ನಿವೇಶವಾಗಿದೆ.

ಹೀಗೆ ರಕ್ತಸಿಕ್ತ ರಾಜ್ಯಾಡಳಿತವನ್ನು ನಡೆಸಿಕೊಂಡು ಬಂದ ಬಿಜ್ಜಳನಿಗೆ ಬಸವಣ್ಣನು ಶೂದ್ರ ಹರಳಯ್ಯ ಮತ್ತು ವಿಪ್ರ ಮಧುವರಸರ ಮಕ್ಕಳಿಗೆ ಮದುವೆ ಮಾಡಿಸಿದುದನ್ನು ಅರಗಿಸಿಕೊಳ್ಳಲಾಗಲಿಲ್ಲ. ಏಕೆಂದರೆ ಏರುಗತಿಯಲ್ಲಿ ಬೆಳೆಯುತ್ತಿದ್ದ ಬಸವಣ್ಣನ ವರ್ಚಸ್ಸು ಅಧಿಕಾರದಾಹಿಯಾದ ಬಿಜ್ಜಳನ ನಿದ್ದೆಗೆಡಿಸಿತ್ತು. ಅಲ್ಲದೆ ಇದು ತನ್ನ ವಿರುದ್ಧದ ಸಂಚು ಎಂಬ ಭಾವನೆಯನ್ನು ಚಾಡಿಕೋರರು ಬಿಜ್ಜಳನ ಮನದಲ್ಲಿ ಆಳವಾಗಿ ಮೂಡಿಸಿದ್ದರು. ಇದರಿಂದ ವ್ಯಗ್ರನಾದ ಬಿಜ್ಜಳನು ಹರಳಯ್ಯ–ಮಧುವರಸರ ಕಣ್ಣು ಕೀಳಿಸಿ, ಎಳೆಹೂಟ ಎಳೆಸಿ ಶೂಲಕ್ಕೇರಿಸಿದನು. ಈ ಘಟನೆಯು ಬಸವಣ್ಣ ಮತ್ತು ಶರಣರ ನೋವಿಗೆ ಕಾರಣವಾಗಿ, ಕಲ್ಯಾಣದ ಕ್ಷಿಪ್ರಕ್ರಾಂತಿಗೆ ದಾರಿಮಾಡಿಕೊಟ್ಟಿತು. 'ಶಿವರಾತ್ರಿ' ನಾಟಕ ಈ ಸನ್ನಿವೇಶದಿಂದ ಆರಂಭವಾಗುತ್ತದೆ.

ಈ ನಾಟಕವು ಕೇವಲ ಒಂದು ರಾತ್ರಿಯ ಅವಧಿಯಲ್ಲಿ ನಡೆಯುವ ಘಟನೆಗಳ ಗುಚ್ಛವಾಗಿ ಮೂಡಿಬಂದಿದೆ. ಹರಳಯ್ಯ–ಮಧುವರಸರನ್ನು ಶೂಲಕ್ಕೇರಿಸಿದ ಮಾರನೆಯ ದಿನ 'ಶಿವರಾತ್ರಿ'ಯಂದು ನಡೆಯುವ ಸನ್ನಿವೇಶಗಳನ್ನು ಚಿತ್ರಿಸುತ್ತದೆ. ನಾಟಕದ ಕಾಲಮಿತಿ ಒಂದು ರಾತ್ರಿಯಾದರೂ ಬೇರೆಬೇರೆ ಸ್ಥಳಗಳು ಮತ್ತು ಪಾತ್ರಗಳು ಈ ನಾಟಕದಲ್ಲಿ ಅನಾವರಣಗೊಳ್ಳುತ್ತವೆ. ಇಲ್ಲಿನ ಪ್ರಮುಖ ಪಾತ್ರಗಳೆಂದರೆ ಬಸವಣ್ಣ, ಬಿಜ್ಜಳ, ಸಾವಂತ್ರಿ, ಕಾಮಾಕ್ಷಿ, ಹರಿಹರ, ದಾಮೋದರ, ಮಲ್ಲಿಬೊಮ್ಮಣ್ಣ, ಜಗದೇವ, ಕಾಶವ್ವ ಮೊದಲಾದವರು. ನವ್ಯದ ಲಕ್ಷಣವುಳ್ಳ ಈ ನಾಟಕದಲ್ಲಿ ಸಾಂಕೇತೀಕರಣದ ಮಾದರಿಯನ್ನು ಕಾಣಬಹುದು. ಅದಕ್ಕೆ ಮುಗ್ಧ ಸಂಗಯ್ಯ ಮತ್ತು ಹುಚ್ಚಿಯಾದ ಕಲ್ಯಾಣದ ನಗರದೇವತೆ ವಾಸ್ತವಿಕ ಸನ್ನಿವೇಶಗಳಲ್ಲಿದ್ದುಕೊಂಡೇ ಕಾರಣಿಕವನ್ನು ನುಡಿಯುವ ಮಾದರಿಗಳಾಗಿದ್ದಾರೆ. 'ಶಿವರಾತ್ರಿ' ನಾಟಕದಲ್ಲಿ ವಚನಸಾಹಿತ್ಯವು ಕೆಳವರ್ಗದ ಜನಸಾಮಾನ್ಯರನ್ನು ಪ್ರಭಾವಗೊಳಿಸಿದ ರೀತಿ ಮತ್ತು ಅವರು ತಮ್ಮ ಬದುಕಿಗೆ ಅಳವಡಿಸಿಕೊಂಡ ಮೌಲ್ಯಗಳ ಬಗೆಗೆ ಬೆಳಕು ಚೆಲ್ಲುತ್ತದೆ.

ಈ ನಾಟಕದ ಮತ್ತೊಂದು ಪ್ರಧಾನ ಆಶಯವೆಂದರೆ "ಬಸವಣ್ಣನವರು ಕಾಯಕ, ದಾಸೋಹ ಮುಂತಾದ ಮೌಲ್ಯಗಳೊಂದಿಗೆ ಕಲ್ಯಾಣದಲ್ಲಿ ಮಾಡುತ್ತಿದ್ದ ಪರಿವರ್ತನೆಯ

ಬಗ್ಗೆ ಅವನಿಗೆ (ಬಿಜ್ಜಳನಿಗೆ) ಅನುಮಾನ ಯಾಕೆ ಬಂತು?" ಎಂಬುದಾಗಿದೆ. ಈ ನಾಟಕದ ಬೇರೆಬೇರೆ ಆಯಾಮಗಳಲ್ಲಿ ವಚನಸಾಹಿತ್ಯದ ದಟ್ಟ ಪ್ರಭಾವ ಆಗಿರುವುದಕ್ಕೂ ಮತ್ತು ವಾಸ್ತವಿಕ ಬದುಕಿನ ಪ್ರಸ್ತುತತೆಗೂ ನಾಟಕದ ಹಲವು ಸನ್ನಿವೇಶಗಳಲ್ಲಿ ಹೋಲಿಕೆಯನ್ನು ಕಾಣಬಹುದಾಗಿದೆ. ಈ ನಿಟ್ಟಿನಲ್ಲಿ ಈ ನಾಟಕವು ಮೂರು ಘಟ್ಟ ಅಥವಾ ತಲೆಮಾರುಗಳ ಸಮಾಜವನ್ನು ಒಂದೇ ಎಳೆಯಲ್ಲಿ ಬಂಧಿಸಿರುವಂತೆ ಭಾಸವಾಗುತ್ತದೆ.

ನಾಟಕದ ಮೊದಲ ದೃಶ್ಯದಲ್ಲಿ ಬರುವ ಕಾಶವ್ವ, ಮುದುಕಪ್ಪ, ತುಂಗವ್ವರ ಸಂಭಾಷಣೆಯು ಯಾವುದೇ ಮಹತ್ತರ ಘಟನೆಗಳು ಮತ್ತು ಕ್ರಾಂತಿಯು ನಡೆಯುವಾಗಲೂ ಅದರ ಮಹತ್ವದ ಅರಿವಿರದ ಒಂದು ಸಮೂಹ ಇದ್ದೇ ಇರುತ್ತದೆ ಎಂಬುದನ್ನು ಸೂಚಿಸುತ್ತದೆ. ಆತ್ಮದ ವಿಚಾರ ಬಂದಾಗ ಕಲ್ಲಪ್ಪನು "ನಮಗೂ ಒಂದೊಂದು ಆತ್ಮ ಇದ್ದಿದ್ದರ ಎಷ್ಟು ಚಲೋ ಆಗುತ್ತಿತ್ತು!" ಎನ್ನುವ ಮಾತು ಅದಕ್ಕೊಂದು ಉದಾಹರಣೆ. ಹಾಗೆಯೇ ಇಷ್ಟಲಿಂಗದ ವಿಚಾರಕ್ಕೆ ಕಲ್ಲಪ್ಪ ಹೇಳುವ "ಪುಕ್ಕಟ ಅಂದರ ಒಂದೆರಡು ತರಬಾರದೇನವಾ ಅಕ್ಕಾ?" ಎಂಬ ಮಾತು ಸಾಮಾನ್ಯರ ದೃಷ್ಟಿಯಲ್ಲಿ ಕಲ್ಯಾಣದ ಕ್ರಾಂತಿಯ ಪ್ರಭಾವ ಹೇಗಿದೆ ಎಂಬುದನ್ನು ತೋರಿಸುತ್ತದೆ. ಅಂತ್ಯಜರು ಕೆಲವೊಮ್ಮೆ ಸಾಮಾಜಿಕ ಸೀಮಾರೇಖೆ ದಾಟಲು ಹಿಂತೆಗೆಯುವುದನ್ನು ಇದು ಧ್ವನಿಸುತ್ತದೆ. ಅಲ್ಲದೆ ಪ್ರಸ್ತುತ ರಾಜಕೀಯ ಸನ್ನಿವೇಶಕ್ಕೂ ಇದನ್ನು ಹೋಲಿಸಬಹುದಾಗಿದೆ. ಯಾವುದೋ 'ಉಚಿತ' ಯೋಜನೆಗಳು ರಾಜಕೀಯದ ಭವಿಷ್ಯವನ್ನೇ ಬದಲಾಯಿಸುತ್ತಿರುವುದನ್ನು ಗಮನಿಸಿದಾಗ, ಜನರಲ್ಲಿ ಬೇರೂರಿರುವ ಮೌಲ್ಯಗಳು ಕೆಲವೊಮ್ಮೆ ಆಮಿಷಕ್ಕೆ ಒಳಗಾಗಿ ನಿಷ್ಕ್ರಿಯಗೊಳ್ಳುವುದನ್ನು ಕಾಣಬಹುದಾಗಿದೆ. ಆದರೆ ಮತ್ತೊಂದು ಸನ್ನಿವೇಶದಲ್ಲಿ ದಾಮೋದರ ಅರಮನೆಯಿಂದ ಕದ್ದು ತಂದ 'ಚಂದ್ರಸರ' ಎಷ್ಟೇ ಬೆಲೆಯುಳ್ಳದ್ದಾದರೂ "ಅದು ನಮಗೆ ಬೇಡ. ನಾವದನ್ನೇನೂ ಕಾಯಕ ಮಾಡಿ ಗಳಿಸಿಲ್ಲ. ನಮಗದರ ಗರ್ಜೂ ಇಲ್ಲ" ಎನ್ನುವ ಕಾಶವ್ವನ ಮಾತು ವಚನಸಾಹಿತ್ಯದ 'ಕಾಯಕವೇ ಕೈಲಾಸ' ತತ್ತ್ವವು ಜನರಲ್ಲಿ ಬೇರೂರಿದ್ದ ಬಗೆಯನ್ನು ಮನದಟ್ಟು ಮಾಡುತ್ತದೆ. ಅಲ್ಲದೆ ಇದೇ ಸಾಮಾನ್ಯ ಜನರು, ಶರಣರನ್ನು ಸಾವಿನ ಕೂಪಕ್ಕೆ ತಳ್ಳುತ್ತಿದ್ದ ಬಿಜ್ಜಳನನ್ನು ನಿಂದಿಸುವುದೂ ಕೂಡ ಜನರ ಸತ್ಯ, ನ್ಯಾಯಪರತೆಗೆ ಸಾಕ್ಷಿಯಾಗಿವೆ.

ಈ ನಾಟಕದಲ್ಲಿ ಬರುವ ಸಾವಂತ್ರಿ–ಕಾಮಾಕ್ಷಿಯರು ತಮ್ಮ ವೃತ್ತಿ ಏನೇ ಇದ್ದರೂ ಅವರಲ್ಲಿದ್ದ ಕಾಯಕತತ್ತ್ವ ಮತ್ತು ಆತ್ಮಗೌರವ ಓದುಗರನ್ನು ಆಕರ್ಷಿಸುತ್ತದೆ. ದಾಮೋದರ ಕದ್ದು ತಂದ ಚಂದ್ರಸರವನ್ನು ಮುಗ್ಧ ಸಂಗಯ್ಯ ಸಾವಂತ್ರಿಗೆ ಕೊಡುತ್ತಾನೆ. ಸಾವಂತ್ರಿ, ಮುಗ್ಧ ಸಂಗಯ್ಯನ ಸೇವೆಗಾಗಿ ಚಂದ್ರಸರವನ್ನು ಕಾಮಾಕ್ಷಿಗೆ ಕೊಟ್ಟಾಗ "ಅಮ್ಮಾ ಈ ಸರದ ಬೆಲೆ ನನ್ನ ಬೆಲೆಗಿಂತ ಹೆಚ್ಚು. ನನಗಿದು ಬೇಡ" ಎನ್ನುತ್ತಾಳೆ. 'ಸಾವಂತ್ರಿಯು ನಮಗೂ ನಿಯಮಗಳಿವೆ, ಸ್ವಾಮಿ. ಸಂದರ್ಭಾನುಸಾರ ಮುಖ ನೋಡಿ ಮಣೆ

ಹಾಕುವ ನಿಯಮಗಳಲ್ಲ ಇವು' ಎಂದು ಬಿಜ್ಜಳನೊಂದಿಗೆ ತನ್ನ ವೃತ್ತಿಯನ್ನು ಸಮರ್ಥಿಸಿಕೊಳ್ಳುವ ಮಾತು ಪ್ರತಿಯೊಬ್ಬ ವ್ಯಕ್ತಿಗೂ ಇರಬೇಕಾದ ಆತ್ಮಗೌರವಕ್ಕೆ ಸಂಕೇತವಾಗಿದೆ. ಚಂದ್ರಸರವನ್ನು ಸಾವಂತ್ರಿಯು ವಾಪಸ್ಸು ಕೊಟ್ಟಾಗ ಬಿಜ್ಜಳ "ನಿನ್ನ ವೃತ್ತಿಯನ್ನು ಸಮರ್ಥಿಸಿಕೊಳ್ಳುತ್ತೀಯಲ್ಲೆ! ನಾಚಿಕೆಯಾಗೋದಿಲ್ಲ ನಿನಗೆ?" ಎನ್ನುತ್ತಾನೆ. ಆಗ ಸಾವಂತ್ರಿ " .......ಜನರನ್ನು ಕೊಂದು ರಾಜನಾದವನು, ತನ್ನ ವಿಜಯಗಳ ಬಗ್ಗೆ ಕೊಚ್ಚಿಕೊಂಡಾಗ ನಾಚಿಕೊಳ್ಳುವರೇ ಸ್ವಾಮಿ? ಇವರೇ ನಾಚಿಕೊಳ್ಳದಿರುವಾಗ ಪ್ರಾಮಾಣಿಕವಾಗಿ ಗಳಿಸಿದ ಹಣದಲ್ಲಿ ತೆರಿಗೆ ಕಟ್ಟುವ ನಾವು ಯಾಕೆ ನಾಚಿಕೊಳ್ಳಬೇಕು?" ಎನ್ನುವ ಮಾತು ಭ್ರಷ್ಟ ವ್ಯವಸ್ಥೆಗೆ ಸೆಡ್ಡು ಹೊಡೆದು ನಿಲ್ಲುವ ಪ್ರಾಮಾಣಿಕ ನಾಗರಿಕನ ಕೆಚ್ಚನ್ನು ಅನಾವರಣಗೊಳಿಸುತ್ತದೆ. ಅಲ್ಲದೆ ವಚನಸಾಹಿತ್ಯದ ಕಾಯಕನಿಷ್ಠೆಯ ಔನ್ನತ್ಯ ಸಾಮಾನ್ಯರಲ್ಲಿ ಬೇರೂರಿದ ಬಗೆಯನ್ನೂ ವಿವರಿಸುತ್ತದೆ. ವಚನಸಾಹಿತ್ಯ ಯುಗದ ಸಂಕವ್ವೆಯನ್ನು ಈ ಸಾವಂತ್ರಿ ಪ್ರತಿನಿಧಿಸುತ್ತಾಳೆ ಎನಿಸುತ್ತದೆ. ಅರಮನೆಯ ಕೆಲಸಗಾರನಾದ ಹರಿಹರನು, ಮಗನಾದ ದಾಮೋದರನಿಂದ ಚಂದ್ರಸರ ಕಳ್ಳತನ ಮಾಡಿಸುವ ಸಂದರ್ಭದಲ್ಲಿ, ಅಂತಸ್ತು, ಮೇಲು–ಕೀಳು ಎಂಬುದೆಲ್ಲಾ ಬಾಹ್ಯ ಆಡಂಬರದಲ್ಲಿಲ್ಲ, ಮನೋಗತವಾಗಿರುವ ಸತ್ಯ, ನಿಷ್ಠೆಗಳಲ್ಲಿದೆ ಎಂಬ ಅಂಶವನ್ನು ಈ ಪಾತ್ರದ ಮೂಲಕ ಮನಗಾಣಿಸಿದೆ.

ಮುಗ್ಧ ಸಂಗಯ್ಯನನ್ನು ಹುಡುಕಿಕೊಂಡು ಬಸವಣ್ಣ ಮತ್ತು ಅಂಗಸುಖಕ್ಕಾಗಿ ಸಾವಂತ್ರಿಯ ಮನೆಗೆ ಬರುವ ಬಿಜ್ಜಳ ಈ ನಾಟಕದ ಪ್ರಧಾನ ಪಾತ್ರಗಳು. ಈ ವಿಚಾರಗಳೇ 'ಮಹಾಮನೆ'ಯನ್ನು ಪ್ರತಿನಿಧಿಸುವ ಬಸವಣ್ಣ ಮತ್ತು ಅರಮನೆಯನ್ನು ಪ್ರತಿನಿಧಿಸುವ ಬಿಜ್ಜಳನ ಜೀವನ ಮೌಲ್ಯಗಳನ್ನು ಸಂಕೇತಿಸುತ್ತವೆ. ಆಪ್ತಸ್ನೇಹಿತನಾಗಿದ್ದ ಬಸವಣ್ಣ, ಬಿಜ್ಜಳನಿಂದ ದೂರಾಗಲು ಅವರಿಬ್ಬರ ನಡುವಿನ ವೈಚಾರಿಕ ಸಂಘರ್ಷ ಕಾರಣವಾಗುತ್ತದೆ. ನಮ್ಮ ಇಂದಿನ ರಾಜಕೀಯ ಶುದ್ಧವಾದುದನ್ನೆಲ್ಲ ಗುಮಾನಿಯಿಂದಲೇ ಕಾಣುವಂತೆ, ಬಿಜ್ಜಳನಲ್ಲಿಯೂ ಬಸವಣ್ಣನ ಮೇಲೆ ಬಹುಶಃ ಚಾಡಿಮಾತಿನ ಪ್ರಭಾವದಿಂದಾಗಿ, ನಂಬಿಕೆ ಇಲ್ಲದಾಗುತ್ತದೆ. ದಾಮೋದರನ ಕಳ್ಳತನದ ನ್ಯಾಯನಿರ್ಣಯದ ಸಮಯದಲ್ಲಿ ಬಿಜ್ಜಳನಿಗೆ ಸಾವಂತ್ರಿ "ಈಗ ಅಣ್ಣನವರನ್ನು ನೋಯಿಸಬ್ಯಾಡ್ರಿ. ಅವರೀಗ ಮೊದಲಿನ ಬಸವಣ್ಣನವರಾಗಿ ಉಳಿದಿಲ್ಲ....." ಎನ್ನುವ ಮಾತು ಬಸವಣ್ಣನ ಮನದಾಳದ ನೋವನ್ನು ತಿಳಿಸುತ್ತದೆ. ಆದರೆ ಬಿಜ್ಜಳನಿಗೆ ಈ ಸೂಕ್ಷ್ಮವನ್ನು ಅರಿಯುವ ಶಕ್ತಿಯಿಲ್ಲದಂತಾಗಿದೆ. ಬಿಜ್ಜಳನು "ತನ್ನ ವ್ಯವಸ್ಥೆಗೆ ಸಮಾನಾಂತರವಾದ ಇನ್ನೊಂದು ಅಧಿಕಾರವನ್ನು ಸಹಿಸಲಾರ"[5] ಇಲ್ಲದ "ವಿರೋಧ ಮತ್ತು ವೈರಿಯನ್ನು" ಇದೇ ಎಂದು ಭ್ರಮಿಸಿದ್ದಾನೆ.

ಬಸವಣ್ಣನವರ ಪ್ರಗತಿಪರ ವಿಚಾರಗಳನ್ನು ಒಪ್ಪಿಕೊಳ್ಳಲೂ ಆಗದೆ, ಅವರನ್ನು ಬಿಟ್ಟುಕೊಡಲೂ ಆಗದೆ ಸಂದಿಗ್ಧತೆಯ ಕೂಸಾಗುತ್ತಾನೆ ಬಿಜ್ಜಳ. ಬಸವಣ್ಣನು ಕೊನೆಯದಾಗಿ

ಬಿಜ್ಜಳನಲ್ಲಿ 'ಶೀಲವಂತನಿಗೆ ರಕ್ಷಣೆ'ಯನ್ನು ಕೋರುತ್ತಾನೆ. ಆದರೆ ಕೈಮೀರಿದ ಸನ್ನಿವೇಶದಿಂದಾದ ಶೀಲವಂತನ ಸಾವಿನಿಂದಾಗಿ ಬಸವಣ್ಣನ ಕೊನೆಯ ಆಸೆಯನ್ನೂ ಈಡೇರಿಸಲಾಗದ್ದಕ್ಕೆ ಬಿಜ್ಜಳ ಖಿನ್ನನಾಗುತ್ತಾನೆ. ಇದು ಬಿಜ್ಜಳನ ದ್ವಂದ್ವ ಮನಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ.

ಬಸವಣ್ಣನ ಅನುಭವಮಂಟಪ ಸಿದ್ಧಾಂತದ ಪ್ರಕಾರ ಹರಳಯ್ಯ – ಮಧುವರಸರ ಮಕ್ಕಳ ವಿವಾಹಸಂಬಂಧ ಸ್ವಜಾತಿಯ, ಸ್ವಧರ್ಮದ ವಿವಾಹವೇ ಎಂದಾಗ, ಬಿಜ್ಜಳನು "ನಿಮ್ಮ ಸಿದ್ಧಾಂತವನ್ನು ಜೀರ್ಣಿಸಿಕೊಂಬ ಶಕ್ತಿ ಸಮಾಜಕ್ಕಿಲ್ಲ ಬಸವಣ್ಣ" ಎನ್ನುತ್ತಾನೆ. ಈ ಮಾತು ಹನ್ನೆರಡನೇ ಶತಮಾನದ ವಚನಸಾಹಿತ್ಯದ ಕಾಲಕ್ಕೂ, 'ಶಿವರಾತ್ರಿ' ನಾಟಕದ ನವ್ಯ ಕಾಲಕ್ಕೂ ಹಾಗೂ ಪ್ರಸ್ತುತ ಸಂದರ್ಭಕ್ಕೂ ಸತ್ಯವಾಗಿಯೇ ಉಳಿದಿದೆ ಎನ್ನಬಹುದು. ಈ ನಾಟಕದಲ್ಲಿ ಬಳಕೆಯಾಗಿರುವ 'ಆಡುಮಾತು' ನಾಟಕಕ್ಕೆ ದೇಸೀಯ ಸೊಗಡನ್ನು ಮತ್ತು ಬಿಗಿತನವನ್ನು ತಂದುಕೊಟ್ಟಿದೆ.

ಒಟ್ಟಾರೆಯಾಗಿ 'ಶಿವರಾತ್ರಿ' ನಾಟಕವು ಕನ್ನಡ ಸಾಹಿತ್ಯದ ಒಂದು ನವೀನ ಪ್ರಯೋಗವಾಗಿದೆ. ವಚನಸಾಹಿತ್ಯದ ಪ್ರಭಾವದಿಂದ ಮೂಡಿಬಂದಿರುವ ಈ ನಾಟಕವು ಕಾಯಕನಿಷ್ಠೆ, ನಂಬಿಕೆ, ಸ್ನೇಹಶೀಲತೆ, ಆತ್ಮಗೌರವ, ಸಹೋದರತೆಗಳನ್ನು ಮೈಗೂಡಿಸಿಕೊಳ್ಳುವ ಚಂದದ ಬಾಳ್ವೆಯ ಅಗತ್ಯವನ್ನು ಒತ್ತಿಹೇಳುತ್ತದೆ. 'ರಾಜಕೀಯದ ತಳಹದಿ ಧರ್ಮವಾಗಿರಬೇಕು' ಎಂಬುದನ್ನು ಬಸವಣ್ಣನವರಿಂದ ಹೇಳಿಸಿ ಪ್ರಸ್ತುತ ರಾಜಕೀಯಕ್ಕೆ ಮಾರ್ಗದರ್ಶನ ಮಾಡುವಂತಿದೆ. ಪುರಾಣ ಮತ್ತು ಇತಿಹಾಸದ ವಸ್ತುಗಳನ್ನು ಇಂದಿಗೂ ಹಲವಾರು ಸಾಹಿತಿಗಳು ಬೇರೆಬೇರೆ ಆಯಾಮಗಳಲ್ಲಿ ಕೃತಿರೂಪಕ್ಕಿಳಿಸು ತ್ತಿರುವುದು ಮೌಲ್ಯಗಳ ಅಗತ್ಯ ಒಂದು ಸಾರ್ವಕಾಲಿಕ ಬಯಕೆ ಎಂಬುದನ್ನು ಮನದಟ್ಟು ಮಾಡುವಂತಿದೆ.

## ಟಿಪ್ಪಣಿಗಳು


1. ಸಮಗ್ರ ಕರ್ನಾಟಕ: ಲೇ. ಫಾಲಾಕ್ಷ: ಪ್ರ: ಶಶಿ ಪ್ರಕಾಶನ, ತುಮಕೂರು, ಪು.ಸಂ. 759, (2021)
2. ಸಮಗ್ರ ಕರ್ನಾಟಕ: ಲೇ. ಫಾಲಾಕ್ಷ: ಪ್ರ: ಶಶಿ ಪ್ರಕಾಶನ, ತುಮಕೂರು, ಪು.ಸಂ. 153, (2021)
3. ಕನ್ನಡ ವಿಷಯ ವಿಶ್ವಕೋಶ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಪು.ಸಂ. 439, (2007)
4. ಶಿವರಾತ್ರಿ (ನಾಟಕ): ಲೇ. ಚಂದ್ರಶೇಖರ ಕಂಬಾರ, ಪ್ರ: ಅಂಕಿತ ಪುಸ್ತಕ, ಬೆಂಗಳೂರು, ಪು.ಸಂ. 18, (2022)
5. ಶಿವರಾತ್ರಿ (ನಾಟಕ): ಲೇ. ಚಂದ್ರಶೇಖರ ಕಂಬಾರ, ಪ್ರ: ಅಂಕಿತ ಪುಸ್ತಕ, ಬೆಂಗಳೂರು, ಪು.ಸಂ. 63, (2022)


□

# ವಿದ್ಯೆ–ಅವಿದ್ಯೆ : ಸಿದ್ಧರಾಮನ ವಚನಾನುಸಂಧಾನ

ಡಾ. ಎನ್.ಎಂ. ಗಿರಿಜಾಪತಿ

ವಿದ್ಯೆಯನರಿದವ ಗುದ್ದಾಟಕ್ಕೊಳಗಾದ
ಅವಿದ್ಯೆಯನರಿದವ ಪ್ರಪಂಚವ ಒದ್ದುಬಿಟ್ಟ ನೋಡಾ
ಕಪಿಲ ಸಿದ್ಧಮಲ್ಲಿಕಾರ್ಜುನಾ ॥[೧]

ಶರಣ ಸಿದ್ಧರಾಮನ ವಚನಸಂಪುಟದಲ್ಲಿನ ಈ ವಚನ ಮೇಲ್ನೋಟಕ್ಕೆ ಸರಳವಿದೆ. ಆದರೆ ಇದು ಅತ್ಯಂತ ವಿರಳವಾದ, ಅಷ್ಟೇ ಗಂಭೀರವಾದ, ಗಾಢವಾದ ಮತ್ತು ಗೂಢವಾದ ಭಿನ್ನ ಅರ್ಥಚಹರೆಗಳನ್ನು ಹಿಡಿದಿಟ್ಟುಕೊಂಡಿದೆ. ವಿದ್ಯೆ ಹಾಗೂ ಅವಿದ್ಯೆಯ ಪರಿಕಲ್ಪನೆ, ಸ್ವರೂಪ, ಗುಣಲಕ್ಷಣ ಮತ್ತದರ ಕಾರ್ಯಕಾರಣಗಳು, ಪರಿಣಾಮಗಳು, ಪ್ರಯೋಜನಗಳು ಇತ್ಯಾದಿಗಳನ್ನು ಕುರಿತಂತೆ ಸಿದ್ಧರಾಮರ ಸುಮಾರು 12 ವಚನಗಳಿವೆ. ನಾವು ಈ ಮೂರು ಸಾಲಿನ ಒಂದು ವಚನವನ್ನು ಸಂಪೂರ್ಣವಾಗಿ ಅದರ ಹಿನ್ನೆಲೆ, ಮುನ್ನೆಲೆಗಳನ್ನು ಅರ್ಥೈಸಿಕೊಳ್ಳಬೇಕಾದಲ್ಲಿ ಉಳಿದ ವಚನಗಳನ್ನು ಸಹ ಓದಿ ಅರ್ಥೈಸಿಕೊಳ್ಳುವುದು ಅಗತ್ಯವೆನಿಸುತ್ತದೆ.

ಈ ವಚನದಲ್ಲಿನ ಮೊದಲ ಸಾಲಿನ 'ವಿದ್ಯೆಯನರಿದವ ಗುದ್ದಾಟಕ್ಕೊಳಗಾದ' ಎನ್ನುವ ಪ್ರಸ್ತಾವ ಉಪನಿಷತ್ಕಾರರ ನಡುವೆ ನಡೆದ ವಾಗ್ವಾದಗಳನ್ನು ಪ್ರತಿಮಿಸುವಂತೆ ತೋರುತ್ತದೆ. ಉಪನಿಷತ್ತುಗಳ ಪ್ರಕಾರ ಮೋಕ್ಷಕ್ಕೆ ಕಾರಣವಾಗುವ ಬ್ರಹ್ಮಜ್ಞಾನ ಮಾತ್ರ ವಿದ್ಯೆ, ಹಾಗಾಗಿ ವಿದ್ಯೆ ಎಂದರೆ ಬ್ರಹ್ಮವಿದ್ಯೆ (ಇದರ ಬಗ್ಗೆ ಅದ್ವೈತದಲ್ಲಿ ವಿಶೇಷ ವಾಗ್ವಾದಗಳು ಕಾಣಸಿಗುತ್ತವೆ). ಪಾರಲೌಕಿಕ ಜ್ಞಾನ, ಪರಿಶುದ್ಧ ಜ್ಞಾನ, ಅವಿದ್ಯೆ ಎನ್ನುವುದು ಬ್ರಹ್ಮವಿದ್ಯೆ ಅಲ್ಲದ್ದು, ವಿದ್ಯೆಯಿಂದ ಪ್ರೇಯಸ್ಸು (ಪ್ರಿಯವಾದದ್ದು, ಇಷ್ಟವಾದದ್ದು ಅಪೇಕ್ಷೆಗಳ ಬೆನ್ನತ್ತಿ ಹೋಗುವಂತಹುದು) ದೊರೆಯಬಹುದು.[2] ಆದರೆ ಬ್ರಹ್ಮಸಾಕ್ಷಾತ್ಕಾರ ಲಭಿಸಬೇಕಾದಲ್ಲಿ ವಿದ್ಯೆ ಬೇಕು ಎಂದು ಕಠೋಪನಿಷತ್ತು ತಿಳಿಸುತ್ತದೆ. ಈ ಪರಬ್ರಹ್ಮ ತತ್ವ ಮತ್ತು ಬ್ರಹ್ಮಜ್ಞಾನವನ್ನು ಕುರಿತಂತೆ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತಗಳಲ್ಲಿ ಏಕಾಭಿಪ್ರಾಯವಿಲ್ಲ? ಅದನ್ನೇ ಗುದ್ದಾಟ ಎಂದು ಸಿದ್ಧರಾಮ ಸೂಚಿಸಿದ್ದಾನೆ.

ಇನ್ನು ಅವಿದ್ಯೆ ಲೌಕಿಕ ಕೇಂದ್ರಿತವಾದದ್ದು, ಬ್ರಹ್ಮಜ್ಞಾನವಲ್ಲದ್ದು, ಲೌಕಿಕ ವ್ಯವಹಾರದಲ್ಲಿ ತಮ್ಮನ್ನು ತೊಡಗಿಸಿಕೊಂಡವರಿಗೆ ಅಂದರೆ ಭವಿಗಳಿಗೆ ಬ್ರಹ್ಮವಿದ್ಯೆಯ ಬಗ್ಗೆ ಒಲವು ಇರುವುದಿಲ್ಲ, ಹಾಗಾಗಿ ಅವರು ತಮ್ಮ ತಮ್ಮ ಇಚ್ಛಾನುಸಾರ ವರ್ತಿಸುತ್ತಾರೆ, ಆ

ಇರುವಿಕೆಯನ್ನು 'ಪ್ರಪಂಚವ ಒದ್ದುಬಿಟ್ಟ' ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದು ಸಿದ್ಧರಾಮ ತನ್ನ ಆರಾಧ್ಯದೈವಕ್ಕೆ ಹೇಳಿಕೊಳ್ಳುವ ಸನ್ನಿವೇಶ ಇಲ್ಲಿದೆ. ಇದರ ಧ್ವನ್ಯರ್ಥ ಲೌಕಿಕ ಜ್ಞಾನವಾಗಲಿ, ಅಲೌಕಿಕ ಜ್ಞಾನವಾಗಿರಲಿ ಕ್ರಿಯೆಯಲ್ಲಿ ಸಮನಿಸದಿದ್ದಲ್ಲಿ ನಿಷ್ಪ್ರಯೋಜಕವಾಗುತ್ತದೆ. ಹಾಗಾಗಿ ಈ ವಿದ್ಯೆ ಅವಿದ್ಯೆಯ ತರ್ಕಕ್ಕಿಂತ ನಡೆ–ನುಡಿಯನ್ನು ಏಕವಾಗಿ ಪ್ರತಿಪಾದಿಸಿಕೊಂಡು ಬಂದ, ಇಷ್ಟಲಿಂಗವನ್ನು ಕುರುಹಿನ ಮಾರ್ಗವಾಗಿ, ಶೂನ್ಯತತ್ವವನ್ನು ಅರುಹಿನ ಪಥವಾಗಿ, ಜಂಗಮವನ್ನು ಲೋಕದ ಚಲನಶೀಲ ಶಕ್ತಿಯನ್ನಾಗಿ ಪರಿಭಾವಿಸಿಕೊಂಡು ಬಂದ ಶರಣರ ಅನುಭಾವಮಾರ್ಗವೇ ಲೇಸು ಎಂಬಂತೆ ತೋರುತ್ತದೆ.

ಈ ಕುರಿತಂತೆ ಇಲ್ಲಿ ಮತ್ತಷ್ಟು ಸ್ಪಷ್ಟೀಕರಣದ ಅಗತ್ಯವಿದೆ, ವಾಸ್ತವದಲ್ಲಿ ಈ ವಿದ್ಯೆ ಮತ್ತು ಅವಿದ್ಯೆಗಳೆರಡೂ ಮನುಷ್ಯನೊಳಗೆ ಇರುವಂಥವು, ಮನುಷ್ಯನೊಳಗಿನ ಪುರುಷ ರೂಪ ಅಂದರೆ ಮನಸ್ಸು, ಬುದ್ಧಿಗಳು ವಿದ್ಯೆ, ಅಂದರೆ ಇದು ಮನುಷ್ಯನ ಒಳರೂಪ, ಆದರೆ ಹೊರರೂಪ ಅಂದರೆ ಶರೀರ ಅದು ಸ್ತ್ರೀಯಂತೆ ಏನೆಲ್ಲವನ್ನೂ ಅಪೇಕ್ಷಿಸುತ್ತಲೇ ಇರುವ ಆಸೆ ಆಮಿಷಗಳಿಗೆ ತನ್ನನ್ನು ತಾನು ಒಡ್ಡಿಕೊಳ್ಳುವಂತೆ ಮಾಡುವ ಘಟಕ. ಹಾಗಾಗಿ ಇದು ಮಾಯೆ. ಈ ಮಾಯೆಯೇ ಅವಿದ್ಯೆ. ಅಥವಾ ಮನುಷ್ಯನ ಮನಸ್ಸು ಮತ್ತು ಬುದ್ಧಿಗಳನ್ನು ಭ್ರಮೆಗೆ ಒಳಗಾಗುವಂತೆ ಮಾಡುವ ಕೂಟ.[3]

ಕೇನೋಪನಿಷತ್ತಿನಲ್ಲಿ ಇದೇ ರೀತಿಯ ಪ್ರಸ್ತಾವಗಳಿವೆ. ವಿದ್ಯೆ ಮತ್ತು ಅವಿದ್ಯೆಗಳು ಇವು ಪುರುಷ ಮತ್ತು ಸ್ತ್ರೀಸಂಯೋಗದಿಂದಾದ ಶರೀರದಲ್ಲಿನ ಸ್ಥಿತಿಗಳು, ಹಾಗೂ ಶರೀರವೇ ಆಗಿರುವಂಥವು. ಇಲ್ಲಿನ ಶರೀರವನ್ನು 'ಅಹಸ್' ಎಂದು ಹೆಸರಿಸಿದ್ದು ಅದನ್ನು ಸ್ತ್ರೀರೂಪವೆಂದು ಗುರುತಿಸಿದೆ. ಈ ಶರೀರದಲ್ಲಿನ ಮನಸ್ಸು, ಆತ್ಮ, ಬುದ್ಧಿ ಇವು ಪುರುಷರೂಪಗಳು, ಈ ಪುರುಷರೂಪವೇ ವಿದ್ಯೆ, ಅದನ್ನುಳಿದ ದೇಹಭಾಗವೆಲ್ಲ ಸ್ತ್ರೀರೂಪಗಳು ಅದೇ ಅವಿದ್ಯೆ. ಅಂದರೆ ಇದರಲ್ಲಿ ಶರೀರವನ್ನು 'ಅವಿದ್ಯೆ' ಎನ್ನಲಾಗಿದೆ. ವಸ್ತು ಹೇಗಿದೆಯೋ ಹಾಗೆಯೇ ನೋಡುವುದು ವಿದ್ಯೆ. ಅವಿದ್ಯೆ ನಿಜಸ್ಥಿತಿಗಿಂತ ಭಿನ್ನವಾದುದನ್ನು ನೋಡುವ ಮನಸ್ಥಿತಿ. ಉದಾ: ಶೂರ್ಪನಖಿ ವೇಷ ಮರೆಸಿಕೊಂಡು ರಾಮಲಕ್ಷ್ಮಣರನ್ನು ಕಂಡಂತೆ, ಚಿನ್ನದ ಜಿಂಕೆಯಾಗಿ ಬಂದ ಮಾರೀಚನ ಮಾಯಾ ವಿದ್ಯೆಯನ್ನು ಅರಿಯದೆ ಸೀತೆ ಜಿಂಕೆಯನ್ನು ತಂದುಕೊಡುವಂತೆ ರಾಮನಲ್ಲಿ ಹಟ ಮಾಡಿದಂತೆ ಇತ್ಯಾದಿ. ಈ ಎರಡೂ ಪರಸ್ಪರ ವಿರುದ್ಧ ಧ್ರುವಗಳು. ಆದರೆ ಈ ಪರಿಕಲ್ಪನೆಗಳನ್ನು ಒಪ್ಪದ ಸಿದ್ಧರಾಮ 'ವಿದ್ಯೆ ಎಂದಡೆ ಭಾರತ ರಾಮಾಯಣವಲ್ಲ' ಎಂದಿದ್ದಾನೆ.[4]

'ದೇಹವೆಂಬುದು ಅವಿದ್ಯೆ ಎಂಬುವರು ಅದೆಂತಯ್ಯಾ?' ಎಂದು ಪ್ರಶ್ನಿಸುತ್ತಾನೆ.[5] ಇಲ್ಲಿ ಆತನಿಗೆ ದೇಹವನ್ನು ಸ್ತ್ರೀಗೆ ಹೋಲಿಸುವ ಋಷಿಗಳಲ್ಲಿನ ಮಾಯೆ ಪರಿಕಲ್ಪನೆ ಬಗ್ಗೆ ಸಹಮತವಿಲ್ಲ, ಕಾರಣ ಆತನೇ 'ಹೆಣ್ಣು ಪ್ರತ್ಯಕ್ಷ ಕಪಿಲ ಸಿದ್ಧಮಲ್ಲಿಕಾರ್ಜುನ

ನೋಡಾ'[6] ಎಂದು ಹೇಳಿ ಶರಣೆ ಅಕ್ಕಮಹಾದೇವಿಯನ್ನು ಕುರಿಂತೆ 'ಮಹಾದೇವಿಯಕ್ಕನ ನಿಲವಿಂಗೆ ಶರಣೆಂದು ಶುದ್ಧನಾದೆ ಕಾಣಾ ಚೆನ್ನಬಸವಣ್ಣಾ' ಎಂದಿದ್ದಾನೆ.[7] ಈ ಅಭಿಮತಕ್ಕೆ ವ್ಯೋಮಮೂರುತಿ ಅಲ್ಲಮನ ಒಪ್ಪಿಗೆಯೂ ಇದೆ ಎನ್ನುವ ರೀತಿಯಲ್ಲಿ ಅಲ್ಲಮನೂ ಸಹ ಮಾಯೆಯನ್ನು ಹೆಣ್ಣಾಗಿ ಪರಿಭಾವಿಸಲು ನಿರಾಕರಿಸುತ್ತಾನೆ.[8] ಹಾಗಾಗಿ ಈ ವಿದ್ಯೆಯ ತಾತ್ವಿಕತೆಗಳನ್ನು ಅರಿಯದೆ, ಅವಿದ್ಯಾಮೂಲವನ್ನು ಹೆಣ್ಣೆಂದು ಅಥವಾ ಮಾಯೆಯೆಂದು ಬಗೆದವರು ಗುದ್ದಾಟಕ್ಕೆ ಒಳಗಾದವರಾಗಿ ಸಿದ್ಧರಾಮನಿಗೆ ಕಾಣುತ್ತಾರೆ.[9] ಹಾಗಾಗಿ ಆತ 'ಮಾಯೆಯಲ್ಲ ವಸ್ತುವೆಂಬುದೇ ವಿದ್ಯೆ' ಎಂದು ಖಚಿತವಾಗಿ ಹೇಳುತ್ತಾನೆ,[10] ಹಾಗೇ ಮುಂದುವರೆದು ವಿದ್ಯೆ ಎನ್ನುವುದು ಒಂದು ತತ್ವ, ಅದರಲ್ಲಿಯೂ ಶಿವತತ್ವವಿದೆ ಎನ್ನುವ ಈತ 'ಐದು ಶಿವತತ್ವಗಳಲ್ಲಿ ಒಂದು ಶುದ್ಧ ವಿದ್ಯೆ', ಮತ್ತು ಈ ತತ್ವಗಳಲ್ಲಿ ಕಲೆ, ರಾಗ, ನಿಯತಿ, ಪುರುಷ ಮತ್ತು ಪ್ರಕೃತಿಗಳೊಂದಿಗೆ ವಿದ್ಯೆಗೂ ಸ್ಥಾನವಿದೆ ಎಂದು ಪ್ರತಿಪಾದಿಸುತ್ತಾನೆ.[11] ಈ ಪ್ರತಿಪಾದನೆಯ ಮೂಲಕ ಸಿದ್ಧರಾಮ ಉಪನಿಷತ್ತುಗಳು ಬೇರೊಂದು ಕಡೆ ನಿರೂಪಿಸುವಂತೆ ಈಶ್ವರ ಮಾತ್ರ ಮಾಯೆಯನ್ನು ಬಲ್ಲವನೆಂದು, ಆತನಿಗೆ ಮಾಯೆಯ ಸೋಂಕುಗಳಿಲ್ಲ ಎನ್ನುವುದನ್ನು ದೃಢೀಕರಿಸಿದಂತೆ ತೋರುತ್ತದೆ.[12] ಜೊತೆಗೆ ಈ ವಿದ್ಯೆ ಎನ್ನುವುದು ಸಾಧಕರ ಸ್ವತ್ತು, ಅದನ್ನು ಆತ ವಿದ್ಯೆಯೆಂಬುದು ಅಭ್ಯಾಸಿಕನ ಕೈವಶ, ವಿದ್ಯಾವಿದ್ಯೆಯನರಿತು ಜಗದ್ವೇದ್ಯನಾಗಬಲ್ಲಡೆ ಮಹಾಪಂಡಿತ ನೋಡಾ ಎಂದು ಅಭಿಮಾನದಿಂದ ಪ್ರಚುರಪಡಿಸುತ್ತಾನೆ.[13] ಇಲ್ಲಿ ಜ್ಞಾನವನ್ನು ಮೇಲ್ವರ್ಗದವರು ಆನುವಂಶೀಯವಾಗಿ ಮತ್ತು ಪಾರಂಪರಿಕವಾಗಿ ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದನ್ನು ಬಿಡುಗಡೆಗೊಳಿಸುವ ಛಾತಿಯಿದೆ. ಹಾಗೆ ನೋಡಿದರೆ ವಚನಕಾರರು ವಿದ್ಯೆ ಅಥವಾ ಅವಿದ್ಯೆಯನ್ನು (ಅಲೌಕಿಕ ಜ್ಞಾನ ಮತ್ತು ಲೌಕಿಕ ಜ್ಞಾನ) ಅಕ್ಷರಪ್ರಜ್ಞೆಯ ಪ್ರತೀಕವಾಗಿ ಕಾಣುವುದರ ಬದಲಿಗೆ ಆನುಭಾವಿಕ ನೆಲೆಯಲ್ಲಿ ಆಗುಮಾಡಿಕೊಳ್ಳಲು ಸಮುದಾಯಗಳಿಗೆ ಮುಕ್ತ ಅವಕಾಶ ತೆರೆದಿಟ್ಟವರು. ಅವರ ಮೂಲೋದ್ದೇಶವೇ ಸಮುದಾಯಗಳಲ್ಲಿನ ಅಜ್ಞಾನವನ್ನು, ಕೀಳರಿಮೆಯನ್ನು, ಮೌಢ್ಯಗಳನ್ನು ತೊಡೆದುಹಾಕುವುದಾಗಿತ್ತು. ಜೊತೆಗೆ ಪಾರಮಾರ್ಥಿಕ ಜ್ಞಾನವೇ ಮೋಕ್ಷದ ಹಾದಿ ಎನ್ನುವುದನ್ನು ನಿರಾಕರಿಸಿದ ವಚನಕಾರರು ಜ್ಞಾನದ ಜೊತೆಗೆ ಕ್ರಿಯೆಯನ್ನು ಅಂದರೆ ನುಡಿ ಮತ್ತು ನಡೆಗಳನ್ನು ಸಮನ್ವಯಗೊಳಿಸಿ ಆ ಮೂಲಕ ವ್ಯಕ್ತಿತ್ವದ ಪರಿಶುದ್ಧತೆಗೆ ಆದ್ಯತೆ ನೀಡಿದವರು. ಸಿದ್ಧರಾಮನ ಹಾಗೆ ಪರಿಶುದ್ಧನಾದ ಅಭ್ಯಾಸಿಕನೇ ಜಗದ್ವೇದ್ಯ ಎನ್ನುವುದು ಈ ಕಾರಣಗಳಿಗಾಗಿ ಎಂದು ತೋರುತ್ತದೆ. ಜೊತೆಗೆ ಈ 'ವಿದ್ಯೆಯ ಸಾಧಿಸುವೊಡೆ ಅನ್ಯ ಆಸೆಯ ಮರೆದಿರಬೇಕು' ಎಂದೂ ಸಿದ್ಧರಾಮ ಎಚ್ಚರಿಸುತ್ತಾನೆ.[14]

ಅನಂತರದ ಸಾಲು 'ಅವಿದ್ಯೆಯನರಿದವ ಪ್ರಪಂಚವ ಒದ್ದುಬಿಟ್ಟ ನೋಡಾ' ಎನ್ನುವಲ್ಲಿ ಯಾವುದನ್ನು ಅವಿದ್ಯೆ ಎಂದು ತಿಳಿವನ್ನು ಈ 'ಪ್ರಪಂಚವನ್ನೇ ಒದ್ದುಬಿಟ್ಟ' ಎನ್ನುವಲ್ಲಿ

ಪ್ರಾಪಂಚಿಕ ಭ್ರಮೆಗಳಿಂದ ದೂರ ಉಳಿದವನು, ಅಲ್ಲಮ ಹೇಳುವಂತೆ ಮನದ ಮುಂದಣ ಆಶೆಗಳನ್ನು ಮೀರಿದವನು ಅಥವಾ ಆಶಾಪಾಶಗಳಿಗೆ ಸಿಲುಕದವನು ಎಂಬ ಧ್ವನಿಯಿದೆ. ಈ 'ಅವಿದ್ಯೆ ಎಂಬುದು ಸರ್ವರಲ್ಲಿ ವಶ'[15] ಎನ್ನುವಲ್ಲಿ ಅವಿದ್ಯೆ ಅಥವಾ ಭ್ರಮೆ ಸಾಮಾನ್ಯವಾಗಿ ಎಲ್ಲರಲ್ಲಿಯೂ ಕಂಡುಬರುವ ಸಾಮಾನ್ಯ ತಿಳಿವಳಿಕೆ. ಹಾಗಾಗಿ ಇಲ್ಲಿ ಭ್ರಮೆಗಳಿಂದ ಕೂಡಿರುವುದೇ ಅವಿದ್ಯೆ, 'ರಜ್ಜು ಸರ್ಪ ನ್ಯಾಯದಂತೆ ಅಧ್ಯಾರೋಪವಾದ ಅವಿದ್ಯೆಯಲ್ಲಿ ಲೇಸುಂಟೇ?[16] ಅಂದರೆ ಹಗ್ಗವನ್ನು ಹಾವೆಂದು ತಿಳಿದು ಹೆದರುವ ಮನಸ್ಥಿತಿಯಿಂದ ವ್ಯಕ್ತಿಗಾಗಲಿ, ಸಮಾಜಕ್ಕಾಗಲಿ ಯಾವ ಪ್ರಯೋಜನವೂ ಇಲ್ಲ. ವಿದ್ಯೆಯನ್ನು ಕೇವಲ ಜ್ಞಾನಮಾರ್ಗವಾಗಿ ನಡೆಸಿದ ವಾಗ್ವಾದಗಳಾಗಲಿ, ಹಾಗೆಯೇ ಅವಿದ್ಯೆಯನ್ನು ಮಾಯೆಯೆಂದು ಹಿಂದಿಕ್ಕುವ ಒಣ ಚರ್ಚೆಗಳಾಗಲಿ ನಿಜವಾದ ವಿಶ್ಲೇಷಣೆಗಳಾಗಲಾರವು. ತತ್ವಾಧಾರಿತ ಮತ್ತು ಕ್ರಿಯಾ ಸಹಿತ ಚಿಂತನಾನುಷ್ಠಾನಗಳು ಶರಣಮಾರ್ಗದ ದೃಕ್ಪಥಗಳೆಂಬುದನ್ನು ಸಿದ್ಧರಾಮನ ಪ್ರತಿಪಾದನೆಯಲ್ಲಿ ಕಾಣಬಹುದಾಗಿದೆ.

ಇಲ್ಲಿ ಅಧ್ಯಾತ್ಮದ ಸ್ಪರ್ಶವಿಲ್ಲದ ಕೇವಲ ಲೌಕಿಕಜ್ಞಾನ ನಿಷ್ಪ್ರಯೋಜಕ. ಇದಕ್ಕೆ ನಿದರ್ಶನವಾಗಿ ನಮ್ಮ ಆಧುನಿಕ ಶಿಕ್ಷಣ ವ್ಯವಸ್ಥೆಗಳಿಂದ ವ್ಯವಹಾರ, ವಿಜ್ಞಾನ, ತಂತ್ರಜ್ಞಾನದ ವೈಪರೀತ್ಯಗಳಿಂದಾಗಿ ಭೋಗಜೀವನಪ್ರಜ್ಞೆಗಳೇ ಮೇಲೇರಿ ಮಾನವ ಸಂಬಂಧಗಳು ನಶಿಸುವಂತೆ ಮಾಡುತ್ತಿರುವುದು, ಮಾನವಾಂತಃಕರಣವು ಕಾಣದಾಗಿ ಜೀವನ ಬರಡಾಗುತ್ತಿರುವುದು ನಮ್ಮ ಕಣ್ಣ ಮುಂದೆಯೇ ಇದೆ. ಈಗಲೂ ನಾವು ಸರಿಯಾಗಿ ಎಚ್ಚತ್ತುಕೊಳ್ಳದಿದ್ದಲ್ಲಿ ನಮ್ಮ ಈ ಸಹಸ್ರ ಸಹಸ್ರಮಾನಗಳ ಪರಂಪರೆಗಳನ್ನುಳ್ಳ ಸಮಾಜೋದ್ಧಾರ್ಮಿಕ, ಸಮಾಜೋಮಾನವಿಕ, ಸಮಾಜೋಸಾಂಸ್ಕೃತಿಕ ಜೀವನಕ್ರಮಗಳು, ದರ್ಶನಗಳು, ತತ್ವಾದರ್ಶಗಳು. ಮೌಲ್ಯಗಳು ತಮ್ಮ ನೆಲೆ ಕಳೆದುಕೊಳ್ಳುತ್ತವೆ.

**ಟಿಪ್ಪಣಿ**

1. ಸಿದ್ಧರಾಮನ ವಚನ ಸಂಪುಟ : ವಸಂ: 1629
2. ಆದಿಕವಿ ಪಂಪ ಹೇಳಿರುವಂತೆ ಕವಿತೆಯೊಳ್ ಆಸೆಗೆಯ್ವ ಫಲಮಾವುದೋ ಪೂಜೆ, ನೆಗೞ್ತೆ, ಲಾಭಮೆಂಬಿವು...
3. ಋತಂ ಪಿಬಂತೌ ಸುಕೃತಸ್ಯ ಲೋಕೇ । ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧೇ ಛಾಯಾ ತಪೌ ಬ್ರಹ್ಮವಿದೋ ವದಂತಿ । ಪಂಚಾಗ್ನಯೋ ಯೇಚ ತ್ರಿಣಾಚಿಕೇತಾ ॥ ಇಲ್ಲಿ ಸ್ತ್ರೀರೂಪಿಯಾದ ಶರೀರ, ಇದರಲ್ಲಿ ಪುರುಷರೂಪಿಯಾದ ಋತ ಎಂಬ ಆತ್ಮ ರೂಪಿ ಬ್ರಹ್ಮ, ಶರೀರದೊಳಗಿನ ಪ್ರಜ್ಞಾನ ಎಂಬ ಗುಹೆಯಲ್ಲಿ ನೆಲೆಸಿದ್ದಾನೆ. ಶರೀರದ ಈ ಸ್ತ್ರೀ ಮತ್ತು ಪುರುಷ ರೂಪಿ ಶಕ್ತಿಗಳನ್ನು ಛಾಯೆ ಮತ್ತು ತಪವೆಂದು ಹೆಸರಿಸಲಾಗುತ್ತಿದೆ. ಪ್ರಜ್ಞಾನಗುಹೆಯಲ್ಲಿನ ಪರಮಪುರುಷನನ್ನು ಕಾಣುವುದು ಸುಲಭವಲ್ಲ. 'ಏಷ ಸರ್ವೇಷು ಭೂತೇಷು ಗೂಢೋತ್ಮಾನ ಪ್ರಕಾಶತೇ ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ' ಎಂದು ಕೇನೋಪನಿಷತ್ತಿನಲ್ಲಿ ನಚಿಕೇತನಿಗೆ ಯಮ ಹೇಳುವ ಸಂದರ್ಭವಿದೆ.

4. ಸಿದ್ಧರಾಮನ ವಚನ ಸಂಪುಟ : ವ.ಸಂ. 1638
5. ಸಿದ್ಧರಾಮನ ವಚನ ಸಂಪುಟ : ವ.ಸಂ. 1683
6. ಸಿದ್ಧರಾಮನ ವಚನ ಸಂಪುಟ : ವ.ಸಂ. 77
7. ಸಿದ್ಧರಾಮನ ವಚನ ಸಂಪುಟ : ವ.ಸಂ. 15
8. ಅಲ್ಲಮಪ್ರಭು: ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ/ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರಾ
9. ಉಪನಿಷತ್ಕಾರರ ಪ್ರಕಾರ ಈ ವಿಶ್ವ ನಿತ್ಯವೂ ಬದಲಾಗುತ್ತಿರುವ ಪ್ರಾಕೃತಿಕ ಸನ್ನಿವೇಶಗಳು (ಪ್ರಳಯ, ಭೂಕಂಪ, ಭೂಕುಸಿತ, ಅಗ್ನಿ ದುರಂತ ಇತ್ಯಾದಿಗಳಿಂದಾಗುವ ಪಲ್ಲಟಗಳು) ಮತ್ತು ಹುಟ್ಟಿನೊಂದಿಗೆ ಸಾವನ್ನು ಬೆನ್ನಿಗೇರಿಸಿಕೊಂಡು ಹುಟ್ಟುವ ಮನುಷ್ಯ ತಾನು ವಾಸಿಸುತ್ತಿರುವ ಪ್ರಕೃತಿ (ಮಣ್ಣು, ಇಲ್ಲಿನ ತನ್ನ ಸಂಪತ್ತು) ಮತ್ತು ತಾನು ಎರಡೂ ಶಾಶ್ವತವೆಂದು ತಿಳಿದು, ಅದಕ್ಕಾಗಿ ಏನೆಲ್ಲ ಹುಚ್ಚು ಸಾಹಸಗಳಿಗೆ ಮುಂದಾಗಲು ಮುಖ್ಯ ಕಾರಣ 'ಮಾಯೆ'. ಮನುಷ್ಯರದು ಲೌಕಿಕ ಕೇಂದ್ರಿತ ಪ್ರಜ್ಞೆ, ಅವರಿಗೆ ಅಧ್ಯಾತ್ಮಜ್ಞಾನಕ್ಕಿಂತ ಲೌಕಿಕ ಜ್ಞಾನಾಸಕ್ತಿಗಳತ್ತಲೇ ಒಲವು, ಈ ಜ್ಞಾನದ ಪರಿಮಿತಿಗಳನ್ನು ಭಗವದ್ಗೀತೆಯಲ್ಲಿ ಕರ್ಮ ಎಂದು ಹೇಳಲಾಗಿದೆ. ಲೌಕಿಕರು ಈ ವಿದ್ಯೆ ಮತ್ತು ಅವಿದ್ಯೆ ಅಂದರೆ ಜ್ಞಾನ ಮತ್ತು ಕರ್ಮ ಎರಡನ್ನೂ ವಾಸ್ತವಿಕ ನೆಲೆಗಳಲ್ಲಿ ಗ್ರಹಿಸಿ ನಿಷ್ಕಾಮಭಾವಗಳಿಂದ ಮತ್ತು ನಿಷ್ಕಾಮಕರ್ಮಗಳಿಂದ ಸಾಧಕರಾಗಿ ಮೃತ್ಯುವನ್ನು ದಾಟಿ ಅಮೃತತ್ವವನ್ನು ಪಡೆಯುತ್ತಾರೆಂದು ಈಶಾವಾಸ್ಯೋಪನಿಷತ್ತಿನಲ್ಲಿ ತಿಳಿಸಲಾಗಿದೆ. ವಿದ್ಯೆ ಮತ್ತು ಅವಿದ್ಯೆಗಳ ನಿಜಸ್ವರೂಪವನ್ನು ಅರಿತವರು ನಿಷ್ಕಾಮಕರ್ಮಗಳನ್ನು ಅನುಸರಿಸಿ ರಾಗದ್ವೇಷಾದಿಗಳಿಂದ ಬಿಡುಗಡೆಗೊಂಡು ಯಾವುದೇ ಫಲಾಪೇಕ್ಷೆಗಳಿಲ್ಲದೆ ತಮ್ಮ ಜೀವನವನ್ನು ನಡೆಸುತ್ತಾರೆ. ಇಲ್ಲದೆ ಹೋದಲ್ಲಿ ಜ್ಞಾನವೂ ಸಹ ಭಾರವಾಗುತ್ತದೆ. ಅದನ್ನು ಸಾ ವಿದ್ಯಾ ಯಾ ವಿಮುಕ್ತಯೇ, ಅವಿದ್ಯಾಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತ ಮಶ್ನುತೇ ಎಂದು ವ್ಯಾಖ್ಯಾನಿಸಿದೆ.
10. ಸಿದ್ಧರಾಮನ ವಚನ ಸಂಪುಟ: ವ.ಸಂ. 1515
11. ಸಿದ್ಧರಾಮನ ವಚನ ಸಂಪುಟ: ವ,ಸಂ. 1005
12. ಈ ಮಾಯೆಯ ಅಧಿಪತಿ ಈಶ್ವರ, ಈತನೇ ಜಗತ್ ಸೃಷ್ಟಿಕರ್ತ, ಈತನಿಗೆ ಮಾಯೆಯ ಸಂಪೂರ್ಣ ಅರಿವಿದೆ. ಹಾಗಾಗಿ ಈತನನ್ನು ಮಾತ್ರ ಮಾಯೆ ಎಂದೂ ಮೋಸಗೊಳಿಸಲು ಸಾಧ್ಯವಾಗದು, ಆದರೆ ಮನುಷ್ಯರು ಮಾಯಾಪಾಶದಿಂದ ಬಿಡುಗಡೆಗೊಳ್ಳುವುದು ಅಷ್ಟು ಸುಲಭವಲ್ಲ, ಆ ಬಿಡುಗಡೆಗೆ ಅವರು ಈಶ್ವರನನ್ನೇ ಆಶ್ರಯಿಸಬೇಕು. ಈಶ್ವರನನ್ನು ಆಶ್ರಯಿಸಿದಂಥವರಿಗೆ ಮಾತ್ರ ಮಾಯೆಯ ಸ್ವರೂಪ ತಿಳಿಯುತ್ತದೆ.
13. ಸಿದ್ಧರಾಮನ ವಚನ ಸಂಪುಟ: ವ.ಸಂ. 1615
14. ಸಿದ್ಧರಾಮನ ವಚನ ಸಂಪುಟ: ವ.ಸಂ. 1978
15. ಸಿದ್ಧರಾಮನ ವಚನ ಸಂಪುಟ: ವ.ಸಂ. 1615
16. ಸಿದ್ಧರಾಮನ ವಚನ ಸಂಪುಟ: ವ.ಸಂ. 1514

□

# ಶಿವಶರಣ ಮಡಿವಾಳ ಮಾಚಯ್ಯನವರ ಕೊಡುಗೆಗಳು

ಡಾ. ಎ.ವಿ. ನರಸಿಂಹಮೂರ್ತಿ

ಮಾಚಯ್ಯನವರು ಹನ್ನೆರಡನೆಯ ಶತಮಾನದ ಬಸವಣ್ಣನವರ ಸಮಕಾಲೀನರು ಹಾಗೂ ನಿಷ್ಠಾವಂತ ಭಕ್ತರು ಮತ್ತು ಶಿವಶರಣರು. ಮಾಚಯ್ಯನವರನ್ನು ವೀರಭದ್ರನ ಅವತಾರವೆಂದೂ ಹೇಳುತ್ತಾರೆ. ಶರಣರ ಬಟ್ಟೆಗಳನ್ನು ಮಡಿ ಮಾಡುವುದು ಮಾಚಯ್ಯನವರ ನಿತ್ಯ ಕಾಯಕ. ಮಾಚಯ್ಯನವರ ಶಿವಭಕ್ತಿ ಅತ್ಯಂತ ದೊಡ್ಡಮಟ್ಟದ್ದಾಗಿತ್ತು. ಹೆಗಲ ಮೇಲೆ ಮೂಟೆ ಹೊತ್ತು, ಗಂಟೆ ಬಾರಿಸುತ್ತ ಆಚೆಗೆ ತೊಲಗಿರಿ, ಶರಣರನ್ನು ಮುಟ್ಟಬೇಡಿ ಎಂದು ಮಾಚಯ್ಯನವರು ಹೇಳುತ್ತಿದ್ದರು.

ಬಿಜಾಪುರ ಜಿಲ್ಲೆಯ ಹಿಪ್ಪರಗಿ ಮಾಚಯ್ಯನವರು ಹುಟ್ಟಿದ ಊರು. ಮಾಚಯ್ಯನವರ ತಂದೆ ಪರ್ವತಯ್ಯ. ಬಟ್ಟೆಗಳನ್ನು ತೊಳೆದು ಮಡಿ ಮಾಡುವುದು ಇವರ ಕರ್ತವ್ಯವಾಗಿತ್ತು. ಮಾಚಿದೇವರಿಗೆ ಈ ಉದ್ಯೋಗ ಹಿಡಿಸಲಿಲ್ಲ ಮತ್ತು ಮನಸ್ಸು ಶಿವಶರಣರ ಬೆನ್ನು ಹತ್ತಿತು. ಮಾಚಿದೇವರು ಪ್ರತಿನಿತ್ಯ ತನ್ನ ಊರಿನ ಕಲ್ಲಿನಾಥದೇವರನ್ನು ಪೂಜೆ ಮಾಡುತ್ತಿದ್ದರು.

ಮಾಚಯ್ಯನವರ ಒಂದು ಕಥೆಯಿದೆ. ಒಂದು ಸಂಜೆ ಮಾಚಯ್ಯನವರು ನಿತ್ಯದಂತೆ ಕಲ್ಯಾಣದ ಬೀದಿಯಲ್ಲಿ ಬರುತ್ತಿದ್ದರು. ಹಲವರು ಮಾಚಯ್ಯನವರ ವಿರುದ್ಧ ಬಿಜ್ಜಳ ಭೂಪತಿಗೆ ದೂರು ನೀಡಿದರು. ಮಾಚಯ್ಯನವರನ್ನು ಹಿಡಿದುತರಲು ಬಿಜ್ಜಳದೊರೆ ಆಜ್ಞೆ ಮಾಡಿದನು. ಅದನ್ನು ಕೇಳಿದ ಬಸವಣ್ಣನವರು ದೊರೆಗಳೇ, ತಪ್ಪು ಯಾರದೆಂದು ನಿಶ್ಚಯಿಸದೆ ಈ ರೀತಿ ದುಡುಕಬೇಡಿ. ಮಡಿವಾಳ ಮಾಚಯ್ಯನವರು ಸಾಮಾನ್ಯ ಭಕ್ತರಲ್ಲ. ಅವರದ್ದು ವೀರಭದ್ರನ ಅವತಾರ. ಮೊರೆಹೊಕ್ಕವರನ್ನು ರಕ್ಷಿಸುವ ಹಾಗೂ ಕೆಟ್ಟವರನ್ನು ಶಿಕ್ಷಿಸುವ ನಿಷ್ಠೆ ಮಾಚಯ್ಯನವರದ್ದು. ಶರಣರ ಮಡಿ ಬಟ್ಟೆಗಳನ್ನು ಇತರರಿಗೆ ಮುಟ್ಟಿಸಬಾರದು ಎಂಬುದೇ ಮಾಚಯ್ಯನವರ ವ್ರತ. ಆದುದರಿಂದ ಮಾಡಿರಿ ಎಂದು ಹೇಳಿದರು.

ನಿತ್ಯದಂತೆ ಮಾಚಯ್ಯನವರು ಮಡಿಬಟ್ಟೆ ಹೊತ್ತು ತರುತ್ತಿದ್ದಾಗ ಕೆಟ್ಟವರು ಪಟ್ಟದ ಆನೆಯನ್ನು ಮಾಚಯ್ಯನವರ ಮೇಲೆ ಬಿಟ್ಟರು. ಆನೆಯು ಮಾಚಯ್ಯನವರಿಗೆ ಹಾರವನ್ನು ಹಾಕಿ ಗೌರವಿಸಿತು.

ನಂತರ, ಕಲ್ಯಾಣದ ಶಿವಶರಣರಿಗೆ ಅಗ್ನಿಪರೀಕ್ಷೆಗಳು ಮೇಲಿಂದ ಮೇಲೆ ಬಂದವು. ಹರಳಯ್ಯ ಹಾಗೂ ಮಧುವಯ್ಯರಿಗೆ ಬಂದ ತೊಂದರೆಗಳು ಶರಣ ಸಮಾಜವನ್ನೇ

ರೊಚ್ಚಿಗೆಬ್ಬಿಸಿತು. ಶರಣರಿಗೂ ಮತ್ತು ಕೆಟ್ಟವರಿಗೂ ತಿಕ್ಕಾಟ ಆರಂಭವಾಯಿತು. ಬಿಜ್ಜಳದೇವನ ಅಳಿಯ ಶರಣರನ್ನು ಕಲ್ಯಾಣದಿಂದ ಹೊರಡಲು ಸೈನ್ಯವನ್ನು ಸಿದ್ಧಪಡಿಸಿದನು. ಕಲ್ಯಾಣದ ಶಾಂತಿ ಕದಡಿತು. ಅಲ್ಲಿರುವುದೇ ಉಚಿತವಲ್ಲವೆಂದು ಭಾವಿಸಿ ಬಸವಣ್ಣ ಶರಣರು ಉಳವಿಯ ಗೊಂಡಾರಣ್ಯಕ್ಕೆ ಹೋಗುವ ನಿರ್ಧಾರ ಮಾಡಿದರು. ಬಸವಣ್ಣರೊಡನೆ ಹೊರಟರು. ಮಾಚಯ್ಯನವರು ಹೊರಟ ಶರಣರ ತಂಡದಲ್ಲಿ ಅಕ್ಕನಾಗಮ್ಮ, ಮಡಿವಾಳ ಮಾಚಯ್ಯ, ಕಿನ್ನರಿ ಬೊಮ್ಮಯ್ಯ, ಕೂಗಿನ ಮಾರಿತಂದೆ, ರುದ್ರಮುನಿ ಪಡಿಹಾರ ಉತ್ತಣ್ಣ, ಹಡಪದ ರೇಚಣ್ಣ ಮೊದಲಾದ ಶಿವಶರಣೆಯರು ಪ್ರಮುಖರಾಗಿದ್ದರು.

ನಂತರ, ಕಲ್ಯಾಣದ ಶರಣರಿಗೆ ಅಗ್ನಿಪರೀಕ್ಷೆಗಳು ಮೇಲಿಂದ ಮೇಲೆ ಬರತೊಡಗಿದವು. ಈ ಶರಣರ ಸೇನೆಗೆ ಅಧಿಪತಿಯಾಗಿ ಬಿಜ್ಜಳನ ಸೈನ್ಯದೊಡನೆ ಕಂದುತ್ತ ಬಂದ ಶ್ರೇಯಸ್ಸು ಮಾಚಯ್ಯನವರಿಗೆ ಸಲ್ಲುತ್ತದೆ. ಮುರಗೋಡದಲ್ಲಿ ನಡೆದ ಕಾಳಗ ಭಯಂಕರವಾಗಿತ್ತು. ಮಡಿವಾಳ ಮಾಚಯ್ಯ ಅಳಿಯ ಬಿಜ್ಜಳನ ಮಾತಿನಂತೆ ಆತನಿಗೆ ಜೀವದಾನ ನೀಡಿದನು. ಶರಣರು ಹೋರಾಡಿ, ವಿಜಯಗಳಿಸಿದ ಸ್ಥಳಗಳಲ್ಲಿ ವೀರಭದ್ರನನ್ನು ಸ್ಥಾಪಿಸುತ್ತಿದ್ದರು. ಕಲ್ಯಾಣದಿಂದ ಉಳವಿಯವರೆಗೆ, ಶರಣರು ನಡೆದ ಮಾರ್ಗದಲ್ಲೆಲ್ಲ ವೀರಭದ್ರದೇವರ ಗುಡಿಗಳಿದ್ದುದು ಗಮನಾರ್ಹ ಸಂಗತಿ. ಅಂತಹವರಲ್ಲಿ ಗೊಡಚಿಯ ವೀರಭದ್ರನದು ಉತ್ತಮ ಪಾತ್ರ. ಮುರಗೋಡದಿಂದ ಮಾಚಯ್ಯನವರು ತಮ್ಮ ಇಷ್ಟದೇವತೆಯನ್ನು ನೆನೆದು ಹಿಪ್ಪರಗಿಗೆ ಹೋದರು. ಮಾಚಯ್ಯನವರ ಗದ್ದುಗೆ ಈಗ ಹಿಪ್ಪರಿಗೆಯಲ್ಲಿದೆ.

ಮಡಿವಾಳ ಮಾಚಯ್ಯನವರು ಕಾಯಕನಿಷ್ಠರು. ಮಾಚಯ್ಯನವರು ಹಿರಿಯ ಶರಣರ ಸೇವೆಯನ್ನು ಮಾಡಿ ಆ ಪದವಿಗೆ ಏರಿದರು. ಮಾಚಿದೇವರು ಕವಿಯೂ ಆಗಿದ್ದರು. ಇವರು ರಚಿಸಿದ ವಚನಗಳು ಪ್ರಸಿದ್ಧವಾಗಿವೆ. ಕಲ್ಲಿನಾಥ ಎಂಬುದು ಮಾಚಯ್ಯನವರ ಅಂಕಿತ. ಭಾವಕ್ಕೆ ಅನುಗುಣವಾದ ಭಾಷೆಯನ್ನು ಉಪಯೋಗಿಸುವ ಶಕ್ತಿ ಮಾಚಯ್ಯನವರದ್ದು. ನ್ಯಾಯ ಹಾಗೂ ನಿಷ್ಠುರ ಮತ್ತು ನಿರ್ದಾಕ್ಷಿಣ್ಯಪರವಾದ ವಚನಗಳು ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಗಳಾಗಿವೆ.

ಮಾಚಯ್ಯನವರ ನಡಿಗೆಯಲ್ಲಿ ನಡೆದರೆ ಎಲ್ಲರ ಬಾಳು ಹಸನಾಗಿರುತ್ತದೆ ಮತ್ತು ಲೋಕಕ್ಕೆ ಉಪಕಾರವಾಗುತ್ತದೆ.

□

# ಭೈರವೇಶ್ವರಕಾವ್ಯದ 'ಕಥಾಮಣಿಸೂತ್ರರತ್ನಾಕರ' ಅಂತ್ಯದಲ್ಲಿ ವೀರಶೈವ ಧರ್ಮದ ಧರ್ಮಗ್ರಂಥಗಳ ವಿವರ

ಡಾ. ಬಿ. ನಂಜುಂಡಸ್ವಾಮಿ

ಶಾಂತಲಿಂಗದೇಶಿಕ ಕೃತ "ಭೈರವೇಶ್ವರ ಕಥಾಮಣಿಸೂತ್ರ ರತ್ನಾಕರ" ಕೃತಿಯ ಪ್ರಥಮ ಭಾಗ ಈ ಹಿಂದೆ ಶರಣಸಾಹಿತ್ಯ ಗ್ರಂಥಮಾಲೆಯಲ್ಲಿ ಮುದ್ರಣವಾಗಿತ್ತು. ಪಂಡಿತರತ್ನ ಬಿ. ಶಿವಮೂರ್ತಿಶಾಸ್ತ್ರಿಗಳು ಈ ಕೃತಿಯ ಸಂಪಾದಕರು. ವೀರಶೈವ ಕವಿಗಳ ಸಾಹಿತ್ಯರಚನೆಗೆ ಈ ಪುಸ್ತಕವನ್ನು ಕವಿಚರಿತೆಗಾರರು ಬಳಸಿರುವುದು ವಿದ್ವದ್ವಲಯಕ್ಕೆ ತಿಳಿದಿರುವಂತಹದು. ಕರ್ನಾಟಕ ವಿಶ್ವವಿದ್ಯಾಲಯದಿಂದ ೧೯೬೪ರಲ್ಲಿ ಪ್ರಥಮ ಭಾಗ, ೧೯೬೮ರಲ್ಲಿ ದ್ವಿತೀಯ ಭಾಗ ಪ್ರಕಟವಾಗಿದ್ದು ಎರಡು ಸಂಪುಟಗಳ ಸಂಪಾದಕರು ಅನುಕ್ರಮವಾಗಿ ಡಾ. ಆರ್.ಸಿ. ಹಿರೇಮಠ ಮತ್ತು ಡಾ. ಎಂ.ಎಸ್. ಸುಂಕಾಪುರ. ಅವರು ಶಾಂತಲಿಂಗದೇಶಿಕನ ಕಾಲ ಈಗ ನಮಗೆ ತಿಳಿದಿರುವಂತೆ ಸು. ಹದಿನಾರನೇ ಶತಮಾನ. ಈತ ಕೃತಿ ರಚಿಸಿದ್ದು ಕ್ರಿ.ಶ. ೧೬೭೨ರಲ್ಲಿ.

ಮದ್ರಾಸ್ ಸರ್ಕಾರಿ ಹಸ್ತಪ್ರತಿ ಭಂಡಾರ (G.O.M.L) ಸಂಪುಟ IV, ೧೯೪೬ ಪುಟ ೮೩೫ರಲ್ಲಿ ಭೈರವೇಶ್ವರ ಕಾವ್ಯದ "ಕಥಾಮಣಿಸೂತ್ರ ರತ್ನಾಕರ"ದ ಕಾಗದದ ಹಸ್ತಪ್ರತಿ ವಿವರ ಪ್ರಕಟವಾಗಿದ್ದು (ಸಂ. ೫೧೧, ೯" 'x೬", ಪುಟ ೫೫೬) ಕೃತಿಯ ಅಂತ್ಯದಲ್ಲಿ ಈ ಪುಷ್ಪಿಕೆ ಇದೆ.

"ಈ ಕಥಾಗರ್ಭವನ್ನು ಬರೆದವನು ಕಲ್ಯಾಣದ ಕಲಬುರ್ಗಿಯ ನಡುಮಧ್ಯದ ಗ್ರಾಮವಾದ ಗೌಡನಹಳ್ಳಿಯ ಕಿನ್ನರಿ ಬ್ರಹ್ಮಯ್ಯನ ಸಾಂಪ್ರದಾಯಕರಾದ ಮಲ್ಲಪ್ಪನವರ ಪುತ್ರನಾದ ಬಸವಪ್ಪನು ಬರೆದ ಹಸ್ತಾಕ್ಷರದಲ್ಲಿ ಅಪ್ಪು ತಪ್ಪಿದ್ದರೆ ನಿಮ್ಮ ಕಂದನು ಬರೆದಿರುವನೆಂದು ಬಲ್ಲ ಮಹಾತ್ಮರು ಬಯ್ಯಲಾಗದು ತಿದ್ದಿ ಓದುವುದು ಮಂಗಳಂ ಮಹಾಶ್ರೀ" ಎಂದಿದೆ. ಈ ಕಥಾಗರ್ಭವು ಮುಗಿದ ಪ್ರಮಾಣ – ಶಾಲಿವಾಹನ ಶಕ ೧೭೩೯ರಲ್ಲಿ ಈಶ್ವರನಾಮ ಸಂವತ್ಸರದ ಶ್ರಾವಣ ಶುದ್ಧ ಏಕಾದಶಿ ಶುಕ್ರವಾರ ಮೂ.ನ॥೨.ಯೋ॥.... ಪ್ರಹರದಲ್ಲಿ ಮುಗಿಯಿತು. ಚಂದ್ರಹೋರಾದಲ್ಲಿ ಸಂಪೂರ್ಣಂ ಸ್ವಭಾರಸತ್ತಾವೀಸು ೧೨೨೩ ಮಾಯೆ ಕೌವಲ ಕಿಟ೨(?) ತಾರೀಕಿನಲ್ಲಿ ಸಂಪೂರ್ಣಂ.

ಮೇಲಿನ ಮಾಹಿತಿಯಿಂದ ಈ ಹಸ್ತಪ್ರತಿ ರಚನೆಯಾಗಿದ್ದು ಕ್ರಿ.ಶ. ೧೮೮೦೭ರ ಈಶ್ವರನಾಮ ಸಂವತ್ಸರದ ಶ್ರಾವಣ ಶುದ್ಧ ಏಕಾದಶಿ ಶುಕ್ರವಾರ ಕೃತಿ ಸಮಾಪ್ತಿಯಾಗಿದ್ದು ಮುಂದೆ ಕಲಬುರ್ಗಿ ಭಾಗದಲ್ಲಿದ್ದ ನಿಜಾಂ ಪದ್ಧತಿಯ ಕಾಲಗಣತಿಯ ವಿವರವನ್ನು ನೀಡಿದ್ದಾರೆ.

ಕೃತಿಯ ಅಂತ್ಯದ ಗದ್ಯವನ್ನು ಯಥಾವತ್ತಾಗಿ ಕೊಡಲಾಗಿದೆ.

"ಶ್ರೀಮದನೇಕಲೋಕಾಧಿನಾಯನಪ್ಪ ಪರಶಿವನ ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣನೆ ಬಹಿಷ್ಕರಿಸಿದ ನಿತ್ಯ ನಿಃಪ್ರತ್ಯ ಮಂಜುಳ ನಿರಂಜನ ನಿರ್ಗುಣ ನಿರಾವರಣ ನಿಶ್ಚಲ ನಿರ್ಮಳ ನಿರವಯ ನಿರಾಮಯ ಸಕಲ ಶ್ರುತಿ ಸ್ಮೃತಿ ಪುರಾಣಾಗಮ ಇತಿಹಾಸಾದಿಗಳಿಗೆ ಉಪಮಾತೀತವಾದ ನಿಃಕಲ ಪರಶಿವನ ಕರುಣಾಮೃತಸಿಂಧುವೆ ಒಂದು ರೂಪಾದ ನಂದೀಶ್ವರನ ಚಿದಂಶವೇ ಧರೆಗೆಯ್ತುಂದು ಭಕ್ತಿ ಜ್ಞಾನ ವೈರಾಗ್ಯವೆ ರೂಪುವೆತ್ತ ಷಟ್ಸ್ಥಲಾಚಾರ್ಯ ವಿರಕ್ತ ನಮಃಶಿವಾಯ ದೇವರೆಂಬ ಸದ್ಗುರುಮೂರ್ತಿಯಲ್ಲಿ ಅವರ ಮಹಾನುಭಾವವಾಕ್ಯಪ್ರಸನ್ನ ಪ್ರಸಾದಾಮೃತಮಂ ಸ್ವೀಕರಿಸಿ ತೃಪ್ತವಾದ ಶಾಂತಲಿಂಗ ದೇಶಿಕನು, ಸಕಲ ವೀರಮಾಹೇಶ್ವರರುಗಳ ನಿರೂಪದಿಂ ಭೈರವದೇವನ ಕಾವ್ಯದಲ್ಲಿ ಸೂಚನೆಯಾಗಿರ್ದ ಕಥೆಗಳನು ವಿಶಾಲವಾಗಿ ಬರೆದು ಸಂಗ್ರಹಿಸೆಂದು ನಿರೂಪಿಸೆ, ಅವರ ಮಹಾನುಭಾವ ನಿರೂಪವಿಡಿದು ಮೂಲದರಿಷ್ಟವಾದ ಕಥೆಗಳಿಗೆ ದೃಷ್ಟವಾದ ಉಪಕಥೆಗಳನ್ನು ಸಂಗ್ರಹಿಸುವುದಕ್ಕೆ ಸಕಲ ವೇದಾಗಮ ಪುರಾಣ ಇತಿಹಾಸಂಗಳಲ್ಲಿ ಹದಿನೆಂಟು ಶೃಂಗಾರ ನವರಸಾರ್ಥ ಲಕ್ಷಣಶುದ್ಧವಾಗಿ ಪೇಳುವ ಛಂದಸ್ಸು ಧಾತು ಭರತ ವಾಕ್ಯಾರ್ಥ ಕವಿಕಂಠಾಭರಣ ದಶನಿಘಂಟು ಕರೋಕ್ತಿಗಳಲ್ಲಿ ತರ್ಕವರದ ಭಟ್ಟಿ ಚಿಂತಾಮಣಿ ಶಬ್ದಮಣಿಸೂತ್ರ ವ್ಯಾಕರಣದಿಂದ ಲಕ್ಷಣಶುದ್ಧವಾಗಿ ಪೇಳಲುಪಟ್ಟ ವೀರಮಾಹೇಶ್ವರರ ಸಿದ್ಧಾಂತ ವೀರಮಾಹೇಶ್ವರ ತಂತ್ರ ವೀರಮಾಹೇಶ್ವರರಾಚಾರ ಸಂಗ್ರಹ, ಸೋಮನಾಥ ಭಾಷ್ಯ, ವಿವೇಕಚಿಂತಾಮಣಿ ವೀರಶೈವ ಸುಧಾರ್ಣವ ಗಣಭಾಷ್ಯರತ್ನಮಾಲೆ ಮೊದಲಾದವು. ಸಂಸ್ಕೃತ ಕನ್ನಡ ಅರೆಭಾಷೆ, ಆಂಧ್ರಭಾಷೆ, ದ್ರಾವಿಡಭಾಷೆ ಪ್ರಾಕೃತ ಇಂತೀ ಭಾಷೆಗಳಿಂದ ಸಂಗ್ರಹಿಸಿದ ಪ್ರಕರಣಗಳಲ್ಲಿ ಪೇಳೂತಿರ್ದ ಕಥೆಗಳನು ಭಾರತ ಮಹಾಭಾರತ ರಾಮಾಯಣ ಮಹಾಭಾಷ್ಯ ಪಂಚಕಾವ್ಯ ಪಂಚತಂತ್ರ ಬತ್ತೀಸ ಪುತ್ಥಳಿ ಬೇತಾಳನ ಕಥೆಗಳಲ್ಲಿಯು ಸೂಪ ಶಿಲ್ಪಕೋಕ ವೈದ್ಯಮಂತ್ರ ಗಾರುಡಯಂತ್ರ ಶಕುನಶಾಸ್ತ್ರ ಷಡುದರುಶನಶಾಸ್ತ್ರ ಹದಿನೆಂಟು ಮತತಂತ್ರ ಹತ್ತೊಂಬತ್ತು ಧರ್ಮಶಾಸ್ತ್ರ ಎಂಟು ವೇದ ಹದಿನೆಂಟು ಪುರಾಣ ಇಪ್ಪತ್ತೆಂಟು ಆಗಮ ಮೂವತ್ತೆರಡು ಉಪನಿಷತ್ತುಗಳಲ್ಲಿ ಹೇಳುವ ಕಥೆಗಳನೊಳಕೊಂಡು ಒಪ್ಪುತ್ತಿರ್ಪ ಬಸವೇಶ್ವರ ಪುರಾಣ, ಗಿರಿಜೆಯ ಕಲ್ಯಾಣ, ವೀರಶೈವಾಮೃತ ಪುರಾಣ, ಆರಾಧ್ಯಚಾರಿತ್ರ, ನನ್ನಯ್ಯನ ಕಾವ್ಯ, ಬಸವಚಾರಿತ್ರ, ಸಿಂಗಿರಾಜನ ಕೃತಿ, ಮೊದಲಾದ ಸಮಸ್ತ ಸಾಂಗತ್ಯ ಚಾರಿತ್ರದ ಕಥೆಗಳಿಗೆ ಮಾತೃಸ್ಥಾನವಾಗಿಪ್ಪುದು. ಬಸವಾದಿ ಪುರಾತನರು ನಿರೂಪಿಸಿದ ಶೂನ್ಯಸಂಪಾದನೆ

ಮೊದಲಾದ ವಚನಾಮೃತ ಸಾಗರದಲ್ಲಿ ಪೇಳುತ್ತಿರ್ದ ಕಂದ, ವೃತ್ತ, ಗ್ರಂಥ, ಶ್ರುತಿ, ಸ್ಮೃತಿ, ಪದ, ಪದ್ಯ, ವಚನ, ರಗಳೆ, ಷಟ್ಪದ, ತ್ರಿವಿದಿ, ಚೌಪದ, ದ್ವಿಪದ, ದಂಡಕ, ಅಷ್ಟಕ, ವಿಷಮಪದ, ಪ್ರಬಂಧ, ಉದ್ದಂಡ ಷಟ್ಪದ, ಪಂಚರತ್ನ, ಸ್ವರಪದ, ತಾರಾವಳಿಗಳು ಮೊದಲಾದವರಲ್ಲಿ ಹೇಳಲ್ಪಟ್ಟ ಕಥೆಗಳಂ ನೋಡಿ, ಪುರಾತರ ವಚನದ ಮೇಲೆ ಸಂಧಿವಿಡಿದು ಕಾವ್ಯದ ಕಥೆ ಸಂಗ್ರಹಕ್ಕೆ ಬೇಕಾದವಂ ತೆಗೆದುಕೊಂಡು ಸಂಗ್ರಹಿಸಿದೆನು. ಇದು ಶರಣಸತಿಯ ರತಿಸಂಯೋಗಕ್ಕೆ ಪತಿ ಶಿವಲಿಂಗವೆಂಬ ಅಪ್ರತಿಮ ಕಂದರ್ಪನೆಸೆವ ಚತುರ ಸೂತನ ಬಾಣವಿದುವಾಗಿ ಸಂದ ಶಕವರುಷ ಶಾಲಿವಾಹನ ಶಕ ೧೫೬೪ ನೆಯ ಪರೀದಾವಿ ಸಂವತ್ಸರದ ಮಾರ್ಗಶಿರ ಮಾಸ ಶುದ್ಧ ೧೦ ಉತ್ತರಾಭಾದ್ರ ನಕ್ಷತ್ರ ಶನಿವಾರದಲ್ಲಿ ಬರದು ಸಂಪೂರ್ಣವಾಯಿತು.

ಇದನ್ನು ಬರದೋದಿ ಪಠಿಸಿ ಲಾಲಿಸಿ ರಚಿಸಿರುವ ಮಹಾನೂಭಾವಿಗಳಾದ ಸಕಲ ಸದ್ಭಕ್ತ ವೀರಮಾಹೇಶ್ವರರುಗಳ ಶ್ರೀಪಾದಕಮಲಯುಗಳಕ್ಕೆ ಕಾವ್ಯದ ಕಥಾಮಣಿ ಸೂತ್ರರತ್ನಾಕರವೆಂಬ ಪುಷ್ಪವಂ ಸಮರ್ಪಿಸಿ ನಮಿಸುತ್ತ, ಜಯ ಜಯ ಜಯತು ಶುಭಮಂಗಳವೆಂದು ಕೊಂಡಾಡಿ ಪಾಡಿ ಕೀರ್ತಿಸಿ, ಲಿಂಗಾಂಗಸಮರಸಾನಂದ ದೊಳೋಲಾಡುತ್ತಂ, ದಶಗಣ, ತೆರಸಗಣ, ಶೋಡಶಗಣ, ಅರವತ್ತುಮೂರು ಪುರಾತನರು, ಏಳನೊರೆಪ್ಪತ್ತು ಅಮರಗಣಂಗಳು ವೃಷಭಯೋಗಾಚಾರ್ಯರು ರುದ್ರಗಣ ಪ್ರಮಥಗಣ ಅಮರಗಣ ಭಕ್ತಮಹಾಗಣ ಅಸಂಖ್ಯಾತ ಮಹಾಪ್ರಮಥರು ನೂತನ ಪುರಾತನರು ನೂರೊಂದು ವಿರಕ್ತರು ಮೊದಲಾದ ಆದ್ಯರು ವೇದ್ಯರು ಸಾಧ್ಯರು ಗಣಂಗಳಿಗೆ ನಮಿಸುತ್ತ ತ್ರೈಭುವನಪಾವನವಾಗಿ ಚರಿಸುವ ಸದ್ಭಕ್ತ ವೀರಮಾಹೇಶ್ವರರುಗಳ ಶ್ರೀಪಾದ ಕಮಲಕ್ಕೆ ನಮೋ ನಮೋ ಎನುತ್ತಂ, ಭೈರವೇಶ್ವರನ ಕಾವ್ಯದ ಕಥಾಮಣಿಸೂತ್ರ ರತ್ನಾಕರಂ ಶಾಲಿವಾಹನ ಶಕದಂದು ಚಿತ್ರಭಾನು ಸಂವತ್ಸರದ ಮಾರ್ಗಶಿರ ಮಾಸ ಬಹುಳ ಕೃಷ್ಣಪಕ್ಷ ೪ ಆದಿತ್ಯವಾರ ಪುನರ್ವಸು ನಕ್ಷತ್ರ ಶುಭಯೋಗದಲ್ಲಿ ಕಥಾಮಣಿಸೂತ್ರ ರತ್ನಾಕರ ಸಂಪೂರ್ಣ ಮಂಗಳಮಹಾ ಶ್ರೀ ಶ್ರೀ ಶ್ರೀ ಸಂಪೂರ್ಣಂ".

ಈ ಮೇಲಿನ ಗದ್ಯದ ಅಧ್ಯಯನದಿಂದ ಈ ಹಿಂದೆ ವೀರಶೈವ ಮಠಗಳಲ್ಲಿ, ವೀರಶೈವ ಗುರುಕುಲಗಳಲ್ಲಿ, ಮಹತ್ತ್ವಾದ ವೀರಶೈವ ಗ್ರಂಥಗಳ ಅಧ್ಯಯನ ನಡೆಯುತ್ತಾ ಇದ್ದ ವಿವರ ತಿಳಿದುಬರುತ್ತದೆ. ವೀರಶೈವ ಅಥವಾ ಲಿಂಗವಂತ ಅಥವಾ ಶಿವಾಚಾರ ಮಠಗಳಲ್ಲಿ ಬಹಳ ಮಹತ್ವದ ನೂರಾರು ಹಸ್ತಪ್ರತಿಗಳ ಭಂಡಾರಗಳು ಇದ್ದವು. ಅಂದಿನ ಹಿರಿಯ ಕಿರಿಯ ಸಾಧಕರು, ವಿರಕ್ತಮೂರ್ತಿಗಳು, ಪಟ್ಟದ ದೇವರುಗಳು ಮೂಲ ಹಸ್ತಪ್ರತಿಯಲ್ಲಿಯೇ ಅಧ್ಯಯನ ಮಾಡುತ್ತಾ ಇದ್ದರು. ಪ್ರಕಟಿತ ಗ್ರಂಥಗಳ ಅಧ್ಯಯನವನ್ನು ಯುವ ವಿದ್ವಾಂಸರು ತಲಸ್ಪರ್ಶಿಯಾಗಿ ಓದಬೇಕು. ಆಗ ಹೊಸ ಹೊಸ ವಿಷಯಗಳು ಅನಾವರಣಗೊಳ್ಳುತ್ತವೆ.

□

## ಗ್ರಂಥ ಪರಾಮರ್ಶೆ

ಮಾನ್ಯ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿಯವರ 'ಗ.ಹು. ಹೊನ್ನಾಪುರಮಠ ದರ್ಶನ' ಕೃತಿಯು ಸಾಹಿತ್ಯ, ಪತ್ರಿಕೋದ್ಯಮ, ಮುದ್ರಣ ವ್ಯವಸಾಯ ಹಾಗೂ ಸಾರ್ವಜನಿಕ ಸೇವೆಯಲ್ಲಿ ಶ್ರೀಗಂಧದಂತೆ ಬದುಕನ್ನು ಸವೆಸಿದ ಸಾಧಕವರೇಣ್ಯರ ಜೀವನ ಚಿತ್ರಣವನ್ನು ಒಳಗೊಂಡಿದೆ. ಶ್ರೀ ಗದಿಗೆಯ್ಯನವರು ಅವರ ತಂದೆಯವರಿಂದಲೇ ಈ ಎಲ್ಲವನ್ನೂ ಬಳುವಳಿ ಪಡೆದುಕೊಂಡರೇನೋ ಎಂಬಂತೆ ಬಾಳಿದವರು. ಸಮಾಜಸಂಘಟನೆ, ಕರ್ನಾಟಕ ಏಕೀಕರಣ, ರಾಷ್ಟ್ರನಿರ್ಮಾಣ ಇವುಗಳೆಲ್ಲವನ್ನೂ ಪರಸ್ಪರ ಪೂರಕವೆಂದು ಭಾವಿಸಿ ದುಡಿದವರು. 'ಚಂದ್ರೋದಯ' ವಾರಪತ್ರಿಕೆ, 'ವಾಗ್ದೇವಿ' ಮಾಸಪತ್ರಿಕೆಗಳ ಸಂಪಾದಕರಾಗಿ ಕಾರ್ಯ ನಿರ್ವಹಿಸಿದವರು. ಮೂವತ್ತಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ರಚಿಸಿದವರು. ಹೊನ್ನಾಪುರಮಠರವರ ಈ ಎಲ್ಲ ಸಾಧನೆಗಳನ್ನೂ ಡಾ. ಬಿ.ಕೆ. ಹೊಸಮಠರವರು ಈ ಕೃತಿಯಲ್ಲಿ ಪ್ರಾಂಜಲವಾಗಿ ಚಿತ್ರಿಸಿದ್ದಾರೆ. 1981ರಲ್ಲಿ ಗದಗ ತೋಂಟದಾರ್ಯ ಮಠದ 'ವೀರಶೈವ ಪುಣ್ಯಪುರುಷರ ಸಾಹಿತ್ಯರತ್ನ ಮಾಲೆ'ಯಲ್ಲಿ ಪ್ರಕಟವಾದ ಈ ಕೃತಿಯ ಪರಿಷ್ಕೃತ ಆವೃತ್ತಿಯನ್ನು ಪರಿಷ್ಕರಿಸಿ ಅನನ್ಯ ಪ್ರಕಾಶನದಿಂದ ಪ್ರಕಟಿಸಿರುವುದು ಶ್ಲಾಘನೀಯ.

* * *

ಡಾ. ಉಮಾಶಂಕರ್‌ರವರ "ಲೋಲಿಂಬರಾಜಕೃತ ವೈದ್ಯಜೀವನ" ಕೃತಿ ಅತ್ಯಂತ ಅರ್ಥಪೂರ್ಣವಾಗಿ ಮೂಡಿ ಬಂದಿದೆ.

ಕ್ರಿ.ಶ. 16ನೆಯ ಶತಮಾನದಲ್ಲಿದ್ದ ಲೋಲಿಂಬರಾಜನೆಂಬ ಕವಿಯು ಎಲ್ಲ ರೀತಿಯ ರೋಗಗಳಿಗೆ ನೀಡಬೇಕಾದ ಚಿಕಿತ್ಸೆಗಳನ್ನು ಐದು ಅಧ್ಯಾಯಗಳಲ್ಲಿ ಸುಮಾರು 220 ಶ್ಲೋಕಗಳಲ್ಲಿ ವಿವರಿಸಿರುವ ಈ ಮೂಲ ಗ್ರಂಥ ಸಂಸ್ಕೃತದಲ್ಲಿದೆ. ಕವಿಯು ಒಬ್ಬ ಮುಸಲ್ಮಾನ ರಾಜನ ಮಗಳನ್ನು ವಿವಾಹವಾದ ಐತಿಹ್ಯ, ಶಾಸ್ತ್ರಗ್ರಂಥವೊಂದು ಶೃಂಗಾರರಸ ಸಮ್ಮಿಶ್ರವಾದ ಕಾವ್ಯಗ್ರಂಥವಾಗಿ ರೂಪುಗೊಂಡಿರುವ ಐತಿಹ್ಯಗಳು ಕುತೂಹಲಕರ. ಸಂಸ್ಕೃತ ಭಾಷೆಯಲ್ಲಿರುವ ಇಂಥ ಜ್ಞಾನಪ್ರಸಾರಕ ಗ್ರಂಥಗಳು ಪ್ರಾದೇಶಿಕ ಭಾಷೆಗೆ ಅನುವಾದವಾಗಬೇಕಾದ ಅಗತ್ಯವನ್ನು ಮನಗಂಡು ಅದರಲ್ಲಿ ಕೃತಕೃತ್ಯರಾಗಿರುವುದು ಅನನ್ಯ ಸಾಧನೆ. ಅಪಾರ ಪರಿಶ್ರಮ, ವಿದ್ವತ್ತುಗಳಿಲ್ಲದೆ, ಇಂಥ ಉತ್ಕೃಷ್ಟ ಕೆಲಸ ಸಾಧ್ಯವಾಗುವುದಿಲ್ಲ. ಈ ಸಾರಸ್ವತ ಸಾಹಸ ಅಭಿನಂದನೀಯವಾದುದು.

□

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

## ಸ್ವಯಂಪ್ರಕಾಶದ ಮೂಲಕ ಜ್ಞಾನದ ಬೆಳಕು ಬೀರಿದವರು ಸಿದ್ಧೇಶ್ವರ ಶ್ರೀಗಳು

ಸ್ವಯಂಪ್ರಕಾಶದ ಮೂಲಕ ಆಧ್ಯಾತ್ಮ ಮತ್ತು ಜ್ಞಾನದ ಬೆಳಕನ್ನು ಸಿದ್ಧೇಶ್ವರ ಶ್ರೀಗಳು ಬೀರಿದರು ಎಂದು ಪರಮಪೂಜ್ಯ ಜಗದ್ಗುರುಗಳವರು ಜನವರಿ 2ರಂದು ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ಗುರುನಮನ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತ ತಿಳಿಸಿದರು. ಜನರಲ್ಲಿನ ಲೌಕಿಕ ವಿಷಯಗಳ ಜೊತೆಗೆ ಅವರ ಸಂಪರ್ಕಕ್ಕೆ ಬಂದವರ ಮನದಲ್ಲಿ ಆಧ್ಯಾತ್ಮಿಕ ಬೀಜಗಳನ್ನು ಶ್ರೀಗಳು ಬಿತ್ತಿದರು. ಅವರು ಭೌತಿಕವಾಗಿ ಮರೆಯಾದರೂ ಜನಮಾನಸದಲ್ಲಿ ಸ್ಥಿರವಾಗಿದ್ದಾರೆ. ಅವರ ಸಂದೇಶಗಳು ಜಗತ್ತಿನ ಎಲ್ಲ ಜನರಿಗೂ ಸಂಜೀವಿನಿಯಾಗಿವೆ. ಪೌರ್ವಾತ್ಯ ಮತ್ತು ಪಾಶ್ಚಾತ್ಯ ದೇಶಗಳ ತತ್ತ್ವಶಾಸ್ತ್ರವನ್ನು ಬಲ್ಲವರಾಗಿದ್ದರು. ರಕ್ತದ ಕಣಕಣದಲ್ಲಿಯೂ ವೈರಾಗ್ಯದ ಭಾವನೆಗಳನ್ನು ತುಂಬಿಕೊಂಡಿದ್ದವರು. ಅವರ ಪರಮಪ್ರೇಮ ಸಂದೇಶವನ್ನು ಎಲ್ಲರೂ ಜೀವನದಲ್ಲಿ ಪಾಲಿಸಬೇಕು. ಎಲ್ಲರನ್ನೂ ಪ್ರೀತಿ, ಗೌರವಾದರಗಳಿಂದ ಕಾಣಬೇಕು. ಗಿಡ ಮರ ಬೆಳೆದರೆ ಅದು ಸಿರಿಸಂಪತ್ತು ಎಂದು ಸಾರಿದವರು ಎಂದು ಹೇಳಿದರು.

ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಸಿದ್ಧೇಶ್ವರ ಶ್ರೀಗಳ ಬದುಕು ನಮಗೆ ಆದರ್ಶ. ಅವರ ಆಶಯದಂತೆ ಬದುಕುವುದೇ ಅವರಿಗೆ ಸಲ್ಲಿಸುವ ದೊಡ್ಡ ಗೌರವ. ಅವರು ಜಾತಿ, ಧರ್ಮದ ಮೈಲಿಗೆಯನ್ನು ಸೋಂಕಿಸಿಕೊಳ್ಳದ ಶ್ರೇಷ್ಠ ಸಂತರು. ಹೀಗಾಗಿ ಅವರು ದಾರ್ಶನಿಕರು.  ಶ್ರೀಗಳ ಹೆಸರಿನಲ್ಲಿ ಅರಣ್ಯ ಅಭಿವೃದ್ಧಿ ಸೇರಿದಂತೆ ಭಕ್ತರ ಆಶಯ ಈಡೇರಿಸುವ ಪ್ರಯತ್ನ ಮಾಡಲಾಗುವುದು. ಶ್ರೀಗಳು ಜ್ಞಾನವನ್ನು ಸಂಪಾದಿಸಿ ಜನಮಾನಸಕ್ಕೆ ಹಂಚಿದರು. ದ್ವೇಷ, ಅಹಂಕಾರದಿಂದ ಬಿಡುಗಡೆ ಹೊಂದಿದ ಅತ್ಯುನ್ನತ ಮನುಷ್ಯತ್ವದ ಸೃಷ್ಟಿಗೆ ಶ್ರಮಿಸಿದರು ಎಂದು ತಿಳಿಸಿದರು.

ತರಳುಬಾಳು ಮತ್ತು ಕನ್ನೇರಿ ಜಗದ್ಗುರುಗಳು ಸಾನ್ನಿಧ್ಯ ವಹಿಸಿದ್ದರು. ಭಾಲ್ಕಿ ಪಟ್ಟದ್ದೇವರು, ಶ್ರೀ ಬಸವಲಿಂಗ ಸ್ವಾಮಿಗಳು, ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿ, ಸಚಿವರುಗಳಾದ ಶ್ರೀ ಎಂ.ಬಿ. ಪಾಟೀಲ್, ಶ್ರೀ ಹೆಚ್.ಕೆ. ಪಾಟೀಲ್, ಶ್ರೀ ಶಿವಾನಂದ ಪಾಟೀಲ್ ಮಾತನಾಡಿದರು. ಶಾಸಕರುಗಳಾದ ಶ್ರೀ ಯಶವಂತರಾಯಗೌಡ ಪಾಟೀಲ್, ಶ್ರೀ ವಿನಯ್ ಕುಲಕರ್ಣಿ, ಶ್ರೀ ಸಿ.ಎಸ್. ನಾಡಗೌಡ, ಶ್ರೀ ವಿಠ್ಠಲ ಕಟಕದೊಂಡ,

ಶ್ರೀ ಸಿ.ಎಸ್. ನಾಡಗೌಡ, ಶ್ರೀ ಅಶೋಕ್ ಮನಗೂಳಿ ಮತ್ತು ಸಂಸದರಾದ ಶ್ರೀ ಪಿ.ಸಿ. ಗದ್ದಿಗೌಡರ್ ಉಪಸ್ಥಿತರಿದ್ದರು. ಶ್ರೀ ಹರ್ಷಾನಂದ ಸ್ವಾಮಿಗಳು ಕಾರ್ಯಕ್ರಮ ನಿರೂಪಿಸಿದರು.

**ಮಠಗಳಲ್ಲಿ ಸಿಗುವ ಸಂಸ್ಕಾರ ಬದುಕಿಗೆ ದಿವ್ಯ ಸೂತ್ರ**

ಮಠಗಳಲ್ಲಿ ಸಿಗುವ ಸಂಸ್ಕಾರ ಬದುಕಿಗೆ ದಿವ್ಯ ಸೂತ್ರವಿದ್ದಂತೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜನವರಿ 4ರಂದು ಧಾರವಾಡ ಶ್ರೀ ಮುರುಘಾಮಠದ ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಪ್ರಸಾದನಿಲಯದ ಹಿಂದಿನ ವಿದ್ಯಾರ್ಥಿಗಳ ಸಂಘದ ರಜತ ಮಹೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಶ್ರೀಮಠದ ಪ್ರಸಾದನಿಲಯದಲ್ಲಿ ವಿದ್ಯಾಭ್ಯಾಸ ಮಾಡಿದವರು ಮೊದಲು ಇದ್ದ ಹಾಗೆ ಇಂದು ಇರಲಾರರು. ಅವರು ಖಂಡಿತವಾಗಿ ಪರಿವರ್ತಿತರಾಗುತ್ತಾರೆ. ಕಾರಣ ಮಠಗಳಲ್ಲಿ ದೊರೆಯುವ ಸಂಸ್ಕಾರ ಮತ್ತು ಸಂಸ್ಕೃತಿಯ ಪಾಠ. 1997ರಂದು ಆರಂಭಗೊಂಡ ಈ ಸಂಘವು ಈಗ 25 ವರ್ಷಗಳನ್ನು ಪೂರೈಸಿದೆ. ಉತ್ತರ ಕರ್ನಾಟಕದ ಪ್ರತಿಷ್ಠಿತ ಮಠಗಳಲ್ಲಿ ಒಂದಾದ ಮುರುಘಾಮಠದ ಉಚಿತ ಪ್ರಸಾದನಿಲಯದಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ಆಶ್ರಯ ಪಡೆದು ಕಲಿತು, ದೇಶವಿದೇಶಗಳಲ್ಲಿ ವಿವಿಧ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮಠದ ಸಂಸ್ಕಾರ ಪಡೆದವರು ನಿತ್ಯದಲ್ಲಿ ತಮ್ಮ ಮನಸ್ಸನ್ನು ಘನಮನವಾಗಿ ಮಾಡಿಕೊಂಡು ಸಾತ್ವಿಕತೆ, ವಿಚಾರದ ಜ್ಞಾನಭಂಡಾರ ತುಂಬಿಕೊಂಡು ಅತ್ಯುತ್ತಮ ಜೀವನ ಸಾಗಿಸಬೇಕು. ವಿದ್ಯಾರ್ಥಿಗಳು ಚಿಂತನ ಮಂಥನದಲ್ಲಿ ಪರಿಶುದ್ಧಗೊಂಡು ಗುರುಗಳ ಮಾರ್ಗದರ್ಶನದಂತೆ ನಡೆದರೆ ಅವರ ಜೀವನ ದೈವತ್ವದ ಬೆಳಕಿನೆಡೆಗೆ ಸಾಗುತ್ತದೆ ಎಂಬುದನ್ನು ಅರಿಯಬೇಕು ಎಂದು ಹೇಳಿದರು.

ಶ್ರೀ ಮುರುಘಾಮಠದ ಡಾ. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ತಾಯಿ ಋಣ ಹಾಗೂ ಗುರುವಿನ ಋಣ ತೀರಿಸಲು ಸಾಧ್ಯವಿಲ್ಲ. ತಾಯಿಯಂತೆ ಮತ್ತೊಬ್ಬರು ಆಗಲು ಸಾಧ್ಯವೇ ಇಲ್ಲ. ತಾಯಿ ಮನೆಯ ಮೊದಲ ಪಾಠಶಾಲೆಯ ಶಿಕ್ಷಕಿಯಾದರೆ ಗುರು ಜ್ಞಾನ, ಸಂಸ್ಕೃತಿ ಹಾಗೂ ಆಧ್ಯಾತ್ಮದ ಸವಿಯನ್ನು ಉಣಬಡಿಸುತ್ತಾನೆ. ಹೀಗಾಗಿ ಮಠದ ಸಂಸ್ಕೃತಿಯಲ್ಲಿ ಬೆಳೆದ ವಿದ್ಯಾರ್ಥಿಗಳು ಅತ್ಯುತ್ತಮ ಪ್ರಜೆಗಳಾಗುತ್ತಾರೆ ಎಂದು ತಿಳಿಸಿದರು.

ಸೇಡಂನ ಶ್ರೀ ಸದಾಶಿವ ಸ್ವಾಮಿಗಳು, ನಂದಿಪುರದ ಡಾ. ಶ್ರೀ ಮಹೇಶ್ವರ ಸ್ವಾಮಿಗಳು, ಹುಲಿಯೂರುದುರ್ಗದ ಶ್ರೀ ಸಿದ್ಧಲಿಂಗ ಶಿವಾನಂದ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ಹಿರಿಯ ಸಂಶೋಧಕರಾದ ಡಾ. ಎಸ್.ಆರ್. ಗುಂಜಾಳರವರು 'ಪ್ರಸಾದ ಬೆಳೆ' ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಶ್ರೀಮತಿ ಶಿವಲೀಲಾ ವಿನಯ ಕುಲಕರ್ಣಿ, ಮೈಸೂರು ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎಂ.ಎಸ್. ಪಾಟೀಲ, ಹಾಸನ ವಿವಿ

ಕುಲಪತಿಗಳಾದ ಪ್ರೊ. ಟಿ.ಸಿ. ತಾರಾನಾಥ, ವಿಶ್ರಾಂತ ಕುಲಪತಿಗಳಾದ ಡಾ ಎಂ.ಎನ್. ಶೀಲವಂತರ, ಡಾ. ಸಂಗಮನಾಥ ಲೋಕಾಪುರ, ಡಾ. ಡಿ.ಎಂ. ಹಿರೇಮಠ, ಶ್ರೀ ಎ.ಸಿ. ಚಾಕಲಬ್ಬಿ, ಶ್ರೀ ಡಿ.ಬಿ. ಲಕಮನಹಳ್ಳಿ ಉಪಸ್ಥಿತರಿದ್ದರು. ಸಮಾರಂಭದಲ್ಲಿ ಹಿರಿಯ ವಿದ್ಯಾರ್ಥಿಗಳು, ಪ್ರತಿಭಾವಂತ ವಿದ್ಯಾರ್ಥಿಗಳು, ನಿವೃತ್ತ ನೌಕರರನ್ನು ಸನ್ಮಾನಿಸಲಾಯಿತು. ಶ್ರೀಮಠದ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಕು. ಜಯಮ್ಮ ದಾನಪ್ಪನವರ ವಚನ ಸಂಗೀತ ಪ್ರಸ್ತುತಿಪಡಿಸಿದರು. ಶ್ರೀ ಎನ್.ಆರ್. ಬಾಳಿಕಾಯಿ ಸ್ವಾಗತಿಸಿದರು. ಶ್ರೀ ಸಿ.ಕೆ. ಹೆರಕಲ್ಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಕೆ.ಎ. ಸುರಪುರಮಠ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಡಿ.ಬಿ. ಪಾಟೀಲ ವಂದಿಸಿದರು.

**ಸಮಾಜಕ್ಕೆ ಬೆಳಕು ನೀಡುವ ಸಾಹಿತ್ಯ ರಚನೆ**

ಸಮಾಜಕ್ಕೆ ಬೆಳಕು ನೀಡುವ ಸಾಹಿತ್ಯವನ್ನು ನಿಜಗುಣದೇವರು ರಚಿಸಿದ್ದಾರೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜನವರಿ 3ರಂದು ಬೆಳಗಾವಿ ಜಿಲ್ಲೆ ಹುಣಶ್ಯಾಳದ ಶ್ರೀ ಸಿದ್ಧಲಿಂಗ ಕೈವಲ್ಯಾಶ್ರಮದಲ್ಲಿ ಆಯೋಜಿಸಿದ್ದ ಶ್ರೀ ನಿಜಗುಣ ದೇವರ ಷಷ್ಟ್ಯಬ್ಧಿ ಸಂಭ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ನಿಜಗುಣದೇವರು ರಚಿಸಿರುವ ಸಾಹಿತ್ಯವು ಅನುಭಾವದ ಸಾಹಿತ್ಯವಾಗಿದೆ. ಎಲ್ಲವೂ ಸತ್ವಯುತವಾದ ಮತ್ತು ಶಾಶ್ವತವಾಗಿ ಉಳಿಯುವಂತಹ ಬರಹಗಳಾಗಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ 'ಪೂಜ್ಯ ಶ್ರೀ ನಿಜಗುಣ ದೇವರು ಬದುಕು–ಬರಹ' ಕೃತಿಯನ್ನು ಬಿಡುಗಡೆ ಮಾಡಲಾಯಿತು. ಹುಕ್ಕೇರಿ ಶ್ರೀಗಳು, ಚಿತ್ರದುರ್ಗದ ಶ್ರೀ ಮಾದಾರ ಚನ್ನಯ್ಯ ಸ್ವಾಮಿಗಳು, ಕಬೀರಾನಂದಾಶ್ರಮ ಶ್ರೀಗಳು, ಬೀದರ್ ಶ್ರೀ ಗಣೇಶಾನಂದ ಮಹಾರಾಜರು ಉಪಸ್ಥಿತರಿದ್ದರು.

**ಸುತ್ತೂರು ಶ್ರೀಮಠ ಮೌಲ್ಯಾಧಾರಿತ ಶಿಕ್ಷಣ ನೀಡುತ್ತಿದೆ**

ಸಹಸ್ರಾರು ವಿದ್ಯಾರ್ಥಿಗಳಿಗೆ ಮೌಲ್ಯಾಧಾರಿತ ಶಿಕ್ಷಣ ನೀಡುವ ಮೂಲಕ ಸುತ್ತೂರು ಶ್ರೀಮಠವು ಸದೃಢ ದೇಶ ಕಟ್ಟುವ ಕಾಯಕ ಮಾಡುತ್ತಿದೆ ಎಂದು ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀಮತಿ ಸುಧಾಮೂರ್ತಿಯವರು ಜನವರಿ 10ರಂದು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಸತಿ ಶಾಲೆಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ತಿಳಿಸಿದರು. ಜೀವನದಲ್ಲಿ ಗುರುವಿನ ಮಾರ್ಗದರ್ಶನ ತುಂಬಾ ಅವಶ್ಯಕ. ಗುರುವನ್ನು ಆಚಾರ್ಯದೇವೋಭವ ಎಂದು ದೇವರಿಗೆ ಹೋಲಿಸುತ್ತಾರೆ. ಶ್ರೀಕ್ಷೇತ್ರದ ಪುಣ್ಯಭೂಮಿಯಲ್ಲಿ ಸಹಸ್ರಾರು ವಿದ್ಯಾರ್ಥಿಗಳನ್ನು ಯಾವುದೇ ಭೇದಭಾವವಿಲ್ಲದೆ ಎಲ್ಲರನ್ನೂ ಸಮಾನವಾಗಿ ಬೆಳೆಸುತ್ತಿರುವುದು ಸಾಮಾನ್ಯ ಸಂಗತಿಯಲ್ಲ. ವಿದ್ಯಾರ್ಥಿಗಳು ಶ್ರದ್ಧೆಯಿಂದ ಓದಿ, ಉತ್ತಮ

ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ದೊಡ್ಡವರಾದ ಮೇಲೆ ಗುರುಗಳನ್ನು ಮರೆಯದೆ ಸ್ಮರಿಸಬೇಕು. ಅವಶ್ಯಕತೆ ಇರುವವರಿಗೆ ನಮ್ಮ ಕೈಲಾದ ಸಹಾಯ ಮಾಡಬೇಕು. ಇಂತಹ ಮಾನವೀಯ ಮೌಲ್ಯಗಳನ್ನೆ ಶರಣರ ವಚನಗಳಲ್ಲೂ ಕಾಣಬಹುದು. ಬಿಡುವಿನ ಸಮಯದಲ್ಲಿ ವಚನಗಳನ್ನು ಅಭ್ಯಾಸ ಮಾಡುವ ಮೂಲಕ ನಮ್ಮ ಜೀವನದಲ್ಲೂ ಅವುಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಅನಿವಾಸಿ ಭಾರತೀಯರಾದ ಡಾ. ಪೂರ್ಣಿಮಾ ಮದಿವನ್ನನ್‌ರವರು ಶ್ರೀಕ್ಷೇತ್ರದ ಭಕ್ತಿ, ಶಿಸ್ತು ನೋಡಿ ಅತ್ಯಂತ ಸಂತೋಷವಾಯಿತು. ಇಲ್ಲಿನ ವಿದ್ಯಾರ್ಥಿಗಳನ್ನು ನೋಡಿ ಉತ್ಸಾಹ ಇಮ್ಮಡಿಯಾಯಿತು. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆತ್ತವರು ಎಷ್ಟೊಂದು ಕಷ್ಟಪಡುತ್ತಾರೆ ಎಂಬುದನ್ನು ನಾವು ಅರಿತುಕೊಳ್ಳಬೇಕು. ನಮ್ಮ ಪೂರ್ವಿಕರು ನಮಗಾಗಿ ಕಷ್ಟಪಡುವುದರಿಂದ ಅವರನ್ನು ಸದಾ ಸ್ಮರಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಆರೋಗ್ಯ, ಸ್ವಚ್ಛ ಮನಸ್ಸು ಮತ್ತು ಹೃದಯ ಶುದ್ಧತೆಯನ್ನು ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು.

ಬಂಡೀಪುರದ ಬುಡಕಟ್ಟು ಮಹಿಳೆ ಡಾ. ರತ್ನಮ್ಮನವರು ಹುಟ್ಟು ಅಂಧರಾಗಿದ್ದ ತಂದೆ, ಸಂಕಷ್ಟಗಳ ನಡುವೆ ನಮ್ಮನ್ನು ಸಾಕಲು ನಮ್ಮ ತಾಯಿ ಪಡುತ್ತಿದ್ದ ಕಷ್ಟ ಅಷ್ಟಿಷ್ಟಲ್ಲ. ಬಾಲ್ಯದಲ್ಲಿ ಅರಣ್ಯ ಪ್ರದೇಶದಲ್ಲಿ ಸಿಗುವ ನೆಲ್ಲಿಕಾಯಿ ಸಂಗ್ರಹಿಸಿ ಅವುಗಳನ್ನು ಮಾರಾಟ ಮಾಡಿ ಜೀವನ ಮಾಡಿದೆ. ಶಾಲೆಗೆ ನಾನು ಹೋಗುತ್ತಿದ್ದುದು ವಿದ್ಯೆಗಿಂತ ಹೆಚ್ಚಾಗಿ ನನ್ನ ಹಸಿವಿಗೆ ಆಶ್ರಮ ಶಾಲೆಯಲ್ಲಿ ಕೊಡುತ್ತಿದ್ದ ಗಂಜಿ ಮತ್ತು ಊಟಕ್ಕಾಗಿ ಎಂದು ಸ್ಮರಿಸಿಕೊಂಡ ಅವರು, ವಿದ್ಯಾರ್ಥಿಗಳು ಸಿಗುವ ಅವಕಾಶಗಳನ್ನು ಜ್ಞಾನಾರ್ಜನೆಗೆ ಬಳಸಿಕೊಳ್ಳುವ ಮೂಲಕ ಸ್ವಾವಲಂಬಿ ಜೀವನವನ್ನು ರೂಪಿಸಿಕೊಳ್ಳಿ ಎಂದು ತಿಳಿಸಿದರು.

**ಸಾತ್ವಿಕ ಮತ್ತು ಸಮತೋಲಿತ ಆಹಾರ ಸೇವಿಸಬೇಕು**

ಸಾತ್ವಿಕ ಮತ್ತು ಸಮತೋಲಿತ ಆಹಾರ ಸೇವನೆಯಿಂದ ಆರೋಗ್ಯವನ್ನು ಉತ್ತಮವಾಗಿಟ್ಟುಕೊಳ್ಳಬಹುದು ಎಂದು ಪರಮಪೂಜ್ಯ ಜಗದ್ಗುರುಗಳವರು ಜನವರಿ 8ರಂದು ಜೆಎಸ್‌ಎಸ್ ಆಸ್ಪತ್ರೆ, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ, ಸಂಘಸಂಸ್ಥೆಗಳು ಹಾಗೂ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ವತಿಯಿಂದ ಸರಗೂರಿನ ಒಂದು ವರ್ಷಕಾಲ ಜರುಗಿದ ಉಚಿತ ಆರೋಗ್ಯ ತಪಾಸಣ ಶಿಬಿರದ ಸಮಾರೋಪದಲ್ಲಿ ಮಾತನಾಡುತ್ತಾ ತಿಳಿಸಿದರು. ಸರಗೂರಿನಲ್ಲಿ ಕಳೆದ 13 ತಿಂಗಳಿಂದ ಉಚಿತ ಆರೋಗ್ಯ ತಪಾಸಣ ಶಿಬಿರ ನಡೆಯುತ್ತಾ ಬಂದಿದೆ. ಇದರಿಂದ ಗ್ರಾಮೀಣ ಭಾಗದ ಜನರಿಗೆ ಬಹಳಷ್ಟು ಉಪಯೋಗವಾಗಿದೆ. ರೋಗ ಬಂದಾಗ ಎಚ್ಚೆತ್ತುಕೊಂಡು ತೊಂದರೆ ಪಡುವ ಬದಲು ರೋಗ ಬರದಂತೆ ಮುನ್ನೆಚ್ಚರಿಕೆ ವಹಿಸಬೇಕು. ಮನುಷ್ಯನಿಗೆ ಕಾಯಿಲೆ ಬಂದರೆ ಧೃತಿಗೆಡದೆ ಧೈರ್ಯದಿಂದ ಪರಿಹಾರ ಕಂಡುಕೊಳ್ಳಬೇಕು. ಆಹಾರ ವಿಹಾರವನ್ನು ಸಮ ಪ್ರಮಾಣದಲ್ಲಿ ಮಾಡಿಕೊಂಡು ಉತ್ತಮ ಆರೋಗ್ಯವನ್ನು ಕಾಪಾಡಿಕೊಂಡು

ಹೋಗಬೇಕು. ರೋಗ ಬರುವ ಮುನ್ನವೇ ಆಸ್ಪತ್ರೆಗಳಿಗೆ ತೆರಳಿ ತಪಾಸಣೆಗೊಳಪಡಬೇಕು. ಭಯಪಟ್ಟು ಆಸ್ಪತ್ರೆಯಿಂದ ದೂರ ಉಳಿಯುವುದು ತರವಲ್ಲ. ರೋಗ ಬರದಂತೆ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಿದರು.

ಶಾಸಕರಾದ ಶ್ರೀ ಅನಿಲ್‌ಕುಮಾರ್ ಚಿಕ್ಕಮಾದುರವರು ಜೆಎಸ್ಎಸ್ ಮಹಾವಿದ್ಯಾಪೀಠವು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ನಿರಂತರ ಸೇವೆ ಮಾಡಿಕೊಂಡು ಬರುತ್ತಿದೆ. ಇಂತಹ ಸಂಸ್ಥೆ ಇರುವುದರಿಂದಲೇ ಬಡ ಜನರು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಪ್ರಗತಿ ಹೊಂದುವಂತಾಗಿದೆ ಎಂದರು.

ತಹಶೀಲ್ದಾರರಾದ ಶ್ರೀಮತಿ ರುಕಿಯಾ ಬೇಗಂರವರು ಹೋಬಳಿಗೊಂದು ಉತ್ತಮ ಸೌಲಭ್ಯಗಳುಳ್ಳ ಆಸ್ಪತ್ರೆಯಿರಬೇಕು. ಹೋಬಳಿ ಮಟ್ಟದಲ್ಲೂ ಸಹ ಇಂತಹ ಶಿಬಿರಗಳ ಆಯೋಜನೆಯಾಗಬೇಕೆಂದು ಹೇಳಿದರು.

ಹಂಚಿಪುರ, ದಡದಹಳ್ಳಿ ಹಾಗೂ ಪಡುವಲು ಮಠದ ಶ್ರೀಗಳು, ಸಮಾಜ ಸೇವಕರಾದ ಶ್ರೀಮತಿ ಸುಧಾ ಮೃತ್ಯುಂಜಯಪ್ಪನವರು, ವೀರಶೈವ ಲಿಂಗಾಯತ ಮಹಾಸಭಾ ತಾಲ್ಲೂಕು ಘಟಕದ ಅಧ್ಯಕ್ಷರಾದ ಶ್ರೀ ಡಿ.ಜಿ. ಶಿವರಾಜು ಮಾತನಾಡಿದರು. ಆಸ್ಪತ್ರೆಯ ಪ್ರಭಾರ ನಿರ್ದೇಶಕರಾದ ಡಾ. ಸಿ.ಪಿ. ಮಧುರವರು ಶಿಬಿರದ ವರದಿಯನ್ನು ಮಂಡಿಸಿದರು. ಪ್ರಾಂಶುಪಾಲರಾದ ಡಾ. ಬಸವವನಗೌಡಪ್ಪನವರು ಶಿಬಿರದ ಉದ್ದೇಶದ ಬಗ್ಗೆ ತಿಳಿಸಿದರು. ಶ್ರೀಮತಿ ಮಂಜುಳ ಮತ್ತು ಶ್ರೀಮತಿ ರಜಿನಿ ಆದೀಶ್ ಪ್ರಾರ್ಥಿಸಿದರು. ಶ್ರೀ ಮಹಮದ್ ಅಂಜುಮ್ ಪಾಷ ಸ್ವಾಗತಿಸಿದರು. ಶ್ರೀ ಸಿದ್ದಪ್ಪ ವಂದಿಸಿದರು. ಶ್ರೀಮತಿ ಶ್ವೇತ ಕಾರ್ಯಕ್ರಮ ನಿರೂಪಿಸಿದರು.

## ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು ವಿದ್ವತ್ ವಲಯದಲ್ಲಿ ಚಿರಪರಿಚಿತರಾಗಿದ್ದರು

ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು ವಿದ್ವತ್ ವಲಯದಲ್ಲಿ ಬಹಳ ಚಿರಪರಿಚಿತರಾಗಿದ್ದವರು ಎಂದು ಪರಮಪೂಜ್ಯ ಜಗದ್ಗುರುಗಳವರು ಜನವರಿ 7ರಂದು ಮೈಸೂರು ಶ್ರೀ ಕುಂದೂರು ಮಠದ ಪೂಜ್ಯ ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳವರ 85ನೇ ಜಯಂತಿ ಸಂಸ್ಮರಣೋತ್ಸವ, ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳವರ ಪಟ್ಟಾಧಿಕಾರ ರಜತ ಮಹೋತ್ಸವ, ವಿದ್ಯಾರ್ಥಿನಿಲಯ, ಗ್ರಂಥಾಲಯ ಕಟ್ಟಡಗಳ ಭೂಮಿಪೂಜೆ ಹಾಗೂ ಗ್ರಂಥಗಳ ಲೋಕಾರ್ಪಣೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು ಸರ್ವದರ್ಶನ ಸಂಗ್ರಹ ಕೃತಿಯಿಂದ ಎಲ್ಲರೂ ಅವರತ್ತ ತಿರುಗಿ ನೋಡುವಂತೆ ಮಾಡಿದ್ದರು. ಧರ್ಮಾಸಕ್ತರಿಗೆ, ಶಾಸ್ತ್ರಾಧ್ಯಯನ ಮಾಡುವವರಿಗೆ ಅದು ಸಾರ್ವಕಾಲಿಕ ಕೈಪಿಡಿಯಾಗಿದೆ. ಅವರು ಅನೇಕ ವಿದ್ವತ್‌ಪೂರ್ಣ ಕೃತಿಗಳನ್ನು ರಚಿಸಿದ್ದಾರೆ. ಯಾವುದೇ ಕೃತಿ ರಚನೆಗೆ ಮೊದಲು ಕೂಲಂಕಷವಾಗಿ ಅಧ್ಯಯನ ಮಾಡಿ, ವಿಮರ್ಶಾತ್ಮಕವಾಗಿ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು.

ಸಾಹಿತ್ಯ ಸೇವೆಯ ಜೊತೆಗೆ ಮಠವನ್ನೂ ಸಹ ಅಭಿವೃದ್ಧಿಗೊಳಿಸಿ, ವಿದ್ಯಾರ್ಥಿನಿಲಯ ಸ್ಥಾಪಿಸಿದರು. ವಿದ್ಯಾರ್ಥಿಗಳನ್ನು ಸಂಸ್ಕಾರಯುತ ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುತ್ತಿದ್ದರು ಎಂದು ಹೇಳಿದರು.

ಸಾಹಿತಿಗಳಾದ ಶ್ರೀ ಗೊ.ರು. ಚನ್ನಬಸಪ್ಪನವರು ಭೌತಿಕ ಅಭಿವೃದ್ಧಿ ಕಾರ್ಯಗಳನ್ನು ಸರ್ಕಾರ ಮಾಡಿದರೂ, ಸಮಾಜದ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಡಲು ಅವುಗಳಿಗೆ ಸಾಧ್ಯವಾಗಲಾರದು. ಆ ಕಾರ್ಯವನ್ನು ಮಾಡಲು ಮಠಗಳಿಗೆ ಹಾಗೂ ಧರ್ಮಗುರುಗಳಿಗೆ ಸಾಧ್ಯ. ಯಾವುದೋ ಒಂದು ಮಠ ಅಥವಾ ಮಠಾಧಿಪತಿ ಎಲ್ಲೋ ಮಾಡಿದ ತಪ್ಪುಗಳನ್ನು ಸಾರ್ವತ್ರಿಕವಾಗಿ ಎಲ್ಲ ಮಠಗಳಿಗೂ ಅನ್ವಯಿಸುವುದು ಸರಿಯಲ್ಲ. ಧರ್ಮಗುರುಗಳಾದವರು ಹೆಚ್ಚು ಅಧ್ಯಯನಶೀಲರಾಗಬೇಕು. ನಡೆ–ನುಡಿ ಸಾತ್ವಿಕವಾಗಿರಬೇಕು. ಅಗಾಧ ಮಾನಸಿಕ ಸಿದ್ಧತೆ ಮತ್ತು ಸೇವಾಬದ್ಧತೆ ಇರಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ 'ಇಮ್ಮಡಿ ದೀಪ್ತಿ' ಚಿತ್ರಸಂಪುಟ, 'ದ ರಿಯಲ್ ಸ್ಟ್ಯಾಂಡ್', 'ಮಿಲಿಂದ ಪ್ರಶ್ನೆ' ಹಾಗೂ 'ಸಂಸ್ಕೃತ ಸಾಹಿತ್ಯಕ್ಕೆ ಕರ್ನಾಟಕದ ಕೊಡುಗೆ' ಕೃತಿಗಳು ಮತ್ತು ಶ್ರೀಮಠದ ಆ್ಯಪ್‌ನ್ನು ಬಿಡುಗಡೆ ಮಾಡಲಾಯಿತು.

ಗದಗ ಶ್ರೀ ತೋಂಟದಾರ್ಯ ಮಠದ ಜಗದ್ಗುರುಗಳು, ಸಿದ್ಧಗಂಗಾ ಶ್ರೀಗಳು, ಕನಕಪುರ ಶ್ರೀಗಳು ಆಶೀರ್ವಚನ ನೀಡಿದರು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಪ್ರೊ. ಶ್ರೀನಿವಾಸ ವರಖೇಡಿಯವರು ಕೃತಿಗಳ ಕುರಿತು ಮಾತನಾಡಿದರು. ಶ್ರೀ ಆನಂದಕುಮಾರ ಮತ್ತು ತಂಡದವರು ಪ್ರಾರ್ಥಿಸಿದರು. ಡಾ. ಡಿ.ಬಿ. ನಟೇಶ್ ಸ್ವಾಗತಿಸಿದರು. ಪ್ರೊ. ಡಿ.ಎಸ್. ಗುರು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಶಿವಸ್ವಾಮಿ ವಂದಿಸಿದರು. ಶ್ರೀ ಜಿ.ಎಲ್. ತ್ರಿಪುರಾಂತಕ ಕಾರ್ಯಕ್ರಮ ನಿರೂಪಿಸಿದರು.

**ಮಾನವ ಸನ್ಮಾರ್ಗದಲ್ಲಿ ನಡೆಯಬೇಕೆಂಬುದೇ ಎಲ್ಲ ಧರ್ಮಗಳ ಉದ್ದೇಶ**

ಮಾನವ ಸನ್ಮಾರ್ಗದಲ್ಲಿ ನಡೆಯಬೇಕೆಂಬುದೇ ಎಲ್ಲ ಧರ್ಮಗಳ ಮೂಲ ಉದ್ದೇಶ ಎಂದು ಪರಮಪೂಜ್ಯ ಜಗದ್ಗುರುಗಳವರು ಜನವರಿ 12ರಂದು ಮುಡುಕುತೊರೆಯ ಶ್ರೀ ತೋಪಿನ ಮಠದಲ್ಲಿ ನಡೆದ ಶ್ರೀ ಮಹಾಲಿಂಗ ಸ್ವಾಮಿಗಳವರ 3ನೇ ವರ್ಷದ ಪುಣ್ಯಸ್ಮರಣೋತ್ಸವ ಹಾಗೂ ಧಾರ್ಮಿಕ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮನುಷ್ಯ ಧರ್ಮದ ಸೂಕ್ಷ್ಮತೆಗಳನ್ನು ಅರಿತು ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಬೇಕು. ದೇವರ ಸ್ಮರಣೆ ತಪ್ಪು ಮಾಡದಂತೆ ಸದಾ ಎಚ್ಚರಿಸುತ್ತದೆ. ಮಂದಿರ, ಮಸೀದಿ ಮತ್ತು ಚರ್ಚುಗಳಲ್ಲಿ ಎಲ್ಲರೂ ಪ್ರಾರ್ಥನೆ ಮಾಡುವುದು ಜೀವನದಲ್ಲಿ ತಪ್ಪು ಹೆಜ್ಜೆ ಇಡದಂತೆ ಸನ್ಮಾರ್ಗದಲ್ಲಿ ನಡೆಯಲು ಆಗಿದೆ. ಮುಡುಕುತೊರೆ ಮತ್ತು ತಲಕಾಡು ಅವಳಿ ಶ್ರದ್ಧಾಭಕ್ತಿಯ ಪುಣ್ಯಕ್ಷೇತ್ರಗಳಾಗಿ ಜನಮಾನಸದಲ್ಲಿ ನೆಲೆಗೊಂಡಿವೆ ಎಂದು ಹೇಳಿದರು.

ಶ್ರೀಶೈಲ ಪೀಠದ ಜಗದ್ಗುರು ಡಾ. ಶ್ರೀ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರು ಧರ್ಮದ ಹಾದಿಯಲ್ಲಿ ಸಾಗಿದರೆ ಮನುಷ್ಯನ ಕಷ್ಟಗಳು ದೂರವಾಗುತ್ತವೆ. ಜೀವನದಲ್ಲಿ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಅವೆಲ್ಲಕ್ಕೂ ಧರ್ಮದಲ್ಲಿ ಪರಿಹಾರವಿದೆ. ಒಳ್ಳೆಯದನ್ನು ಮಾಡಿದಾಗ ಮಾತ್ರ ಒಳ್ಳೆಯದನ್ನು ಪಡೆಯಬಹುದಾಗಿದೆ. ಸತ್ಯಕ್ಕೆ ಸಮಾನವಾದ ತಪಸ್ಸು ಮತ್ತೊಂದಿಲ್ಲ, ಸುಳ್ಳಿಗೆ ಸಮನಾದ ಪಾಪ ಯಾವುದು ಇಲ್ಲ ಎಂದು ತಿಳಿಸಿದರು.

ಕನಕಪುರದ ಮರಳೇಗವಿ ಮಠ, ತೋಪಿನ ಮಠ, ಚಂದೂಪುರ, ಧನಗೂರು ಮಠಗಳ ಶ್ರೀಗಳು ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸ ಉಪಸ್ಥಿತರಿದ್ದರು.

**ಭೂತಾಯಿಯನ್ನು ಪ್ರತಿಯೊಬ್ಬರು ಪೂಜಿಸಬೇಕು**

ಭೂಮಿತಾಯಿಯನ್ನು ಪ್ರತಿಯೊಬ್ಬರು ಪೂಜಿಸಬೇಕು ಎಂದು ಅಮೆರಿಕದಲ್ಲಿ ನೆಲೆಸಿರುವ ಮಂಡ್ಯದ ಡಾ. ಎಚ್.ಎನ್. ಲಕ್ಷ್ಮೀನರಸಿಂಹಮೂರ್ತಿಯವರು ಜನವರಿ 17ರಂದು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಸತಿ ಶಾಲೆಯ ಸಹಸ್ರಾರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ತಿಳಿಸಿದರು. ಭೂಮಿತಾಯಿಯು ಎಲ್ಲರಿಗೂ ದೇವತೆಯಂತೆ. ನಮಗೆ ಎಲ್ಲವನ್ನೂ ಕರುಣಿಸಿದ್ದಾಳೆ ಆದ್ದರಿಂದ ಸದಾಕಾಲ ನಾವು ಸ್ಮರಿಸಿಕೊಳ್ಳಬೇಕು. ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಶಿಸ್ತು, ಸಂಯಮ, ಮಾನವೀಯ ಮೌಲ್ಯಗಳು, ಭಾರತೀಯ ಸಂಸ್ಕೃತಿಯನ್ನು ಅಳವಡಿಸಿ ಕೊಳ್ಳಬೇಕು. ಪ್ರಾರ್ಥನೆ, ಯೋಗ ಮತ್ತು ಧ್ಯಾನವನ್ನು ಅಳವಡಿಸಿಕೊಳ್ಳುವುದರಿಂದ ಏಕಾಗ್ರತೆ, ಲವಲವಿಕೆ, ಓದಿನ ಕಡೆ ಹೆಚ್ಚಿನ ಆಸಕ್ತಿ ಉಂಟಾಗಲು ಸಹಕಾರಿಯಾಗುತ್ತದೆ ಎಂದರು. ನಿಮ್ಮೆಲ್ಲರ ಚಿತ್ತ ಅದರತ್ತ ಸದಾ ಇರಲಿ ಎಂದು ಹೇಳಿದರು.

ಡಾ. ಎಚ್.ಎನ್. ಲಕ್ಷ್ಮೀನರಸಿಂಹಮೂರ್ತಿಯವರ ಪುತ್ರರಾದ ಡಾ. ವಿವೇಕ್‌ಮೂರ್ತಿ ರವರು ಅಮೆರಿಕದ ವೈದ್ಯಕೀಯ ಕ್ಷೇತ್ರದ ಮಹೋನ್ನತ ಸರ್ಕಾರದ ಹುದ್ದೆಯಾದ ಸರ್ಜನ್ ಜನರಲ್‌ರಾಗಿ ಮೊದಲ ಭಾರತೀಯ ಮೂಲದ ವ್ಯಕ್ತಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಾರ್ಯಕ್ರಮದಲ್ಲಿ ಶ್ರೀಮತಿ ಮೈತ್ರೇಯಿ ಲಕ್ಷ್ಮೀನರಸಿಂಹಮೂರ್ತಿಯವರು ಉಪಸ್ಥಿತರಿದ್ದರು.

**ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಯಂತಿ**

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜನವರಿ 10ರಂದು ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1064ನೆಯ ಜಯಂತಿ ಮಹೋತ್ಸವವು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಹಾಗೂ ಮಠಾಧೀಶರುಗಳ ಸಮ್ಮುಖದಲ್ಲಿ ನೆರವೇರಿತು.

ಪ್ರಾತಃಕಾಲ 3.00 ಗಂಟೆಗೆ ಕರ್ತೃಗದ್ದುಗೆಯಲ್ಲಿ ರುದ್ರಾಭಿಷೇಕ, ಸಹಸ್ರನಾಮಾವಳಿ, ಶಿವಾಷ್ಟೋತ್ತರ, ಶಿವರಾತ್ರೀಶ್ವರ ಅಷ್ಟೋತ್ತರ ಇತ್ಯಾದಿ ವಿಶೇಷ ಪೂಜೆಗಳು ಹಾಗೂ ಆದಿ ಜಗದ್ಗುರುಗಳವರ ಉತ್ಸವಮೂರ್ತಿಗೆ ಷೋಡಶೋಪಚಾರ ಪೂಜೆಗಳು ನೆರವೇರಿದವು. ಆದಿ ಜಗದ್ಗುರುಗಳ ಉತ್ಸವಮೂರ್ತಿಯ ಮೆರವಣಿಗೆಯು ಶ್ರೀಮಠದ ಬಿರುದುಬಾವಲಿಗಳು, ಮಂಗಳವಾದ್ಯ, ಎನ್‌ಸಿಸಿ, ವೀರಗಾಸೆ ಹಾಗೂ ಜನಪದ ಕಲಾತಂಡಗಳೊಂದಿಗೆ ಸುತ್ತೂರಿನ ಪ್ರಮುಖ ಬೀದಿಗಳಲ್ಲಿ ನೆರವೇರಿತು.

ಇದೇ ಸಂದರ್ಭದಲ್ಲಿ ವಿವಿಧ ಪ್ರಶಸ್ತಿಗಳ ಪುರಸ್ಕೃತರಿಗೆ ಸನ್ಮಾನ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಮುಂಡರಗಿ ಶ್ರೀ ತೋಂಟದಾರ್ಯ ಶಾಖಾ ಮಠದ ಶ್ರೀ ನಿಜಗುಣಪ್ರಭು ತೋಂಟದಾರ್ಯ ಸ್ವಾಮಿಗಳು ಕರ್ನಾಟಕ ರಾಜ್ಯವು ಉಳಿದ ರಾಜ್ಯಗಳಿಗಿಂತ ವಿಭಿನ್ನವಾಗಿದೆ. ಶರಣರ ತತ್ವಗಳಿಗನುಗುಣವಾಗಿ ಸ್ಥಾಪಿತವಾದ ಮಠಗಳು ಸಮಾಜಕ್ಕೆ ಅಪಾರ ಸೇವೆಯನ್ನು ನೀಡುತ್ತಿವೆ. ಲಕ್ಷಾಂತರ ವಿದ್ಯಾರ್ಥಿಗಳ ಪಾಲಿಗೆ ಕಾಮಧೇನುವಾಗಿದ್ದು, ಅಕ್ಷರ, ಆಶ್ರಯ, ಅನ್ನ ನೀಡಿ ಅವರ ಬದುಕಿಗೆ ದಾರಿದೀಪವಾಗಿವೆ. ಬಸವಣ್ಣನವರು ಬೇರೆ ಬೇರೆ ರಾಜ್ಯಗಳಿಂದ ಬಂದಂತಹ ಶರಣರಿಗೆ ಕನ್ನಡವನ್ನು ಕಲಿಸಿ, ಕನ್ನಡದಲ್ಲೇ ವಚನಗಳನ್ನು ಬರೆಸುತ್ತಿದ್ದರು. ಇಂದಿಗೂ ಮಠಗಳು ಶರಣರ ತತ್ವಗಳನ್ನು ನಿರಂತರವಾಗಿ ಪಾಲಿಸಿಕೊಂಡು ಬರುತ್ತಿವೆ ಎಂದು ಹೇಳಿದರು.

ಸ್ಟಾರ್ ಆಫ್ ಮೈಸೂರು ಹಾಗೂ ಮೈಸೂರು ಮಿತ್ರ ದಿನಪತ್ರಿಕೆಯ ಪ್ರಧಾನ ಸಂಪಾದಕರಾದ ಡಾ. ಕೆ.ಬಿ. ಗಣಪತಿಯವರು ಸುತ್ತೂರು ಶ್ರೀಕ್ಷೇತ್ರವು ಸಾಧು, ಸಂತರು ಮತ್ತು ಋಷಿಮುನಿಗಳ ತಪೋಭೂಮಿ. ಶ್ರೀಮಠವು ರಾಜ್ಯವು ಅತಿವೃಷ್ಟಿ, ಅನಾವೃಷ್ಟಿ ಹಾಗೂ ಪ್ರಕೃತಿ ವಿಕೋಪದಂತಹ ಸಂಕಷ್ಟದ ಸಂದರ್ಭಗಳಲ್ಲಿ ನಿರಂತರವಾಗಿ ನೆರವಿನ ಹಸ್ತ ನೀಡುತ್ತ ಬಂದಿರುವುದು ಶ್ಲಾಘನೀಯವಾಗಿದೆ ಎಂದರು. ಮತ್ತೊಬ್ಬ ಪ್ರಶಸ್ತಿ ಪುರಸ್ಕೃತರಾದ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್‌ರವರು ಸುತ್ತೂರು ಮಠವು ನಮ್ಮನ್ನು ಸನ್ಮಾನಿಸಿ ಆಶೀರ್ವದಿಸಿರುವುದರಿಂದ ಸಮಾಜಕ್ಕೆ ಇನ್ನೂ ಹೆಚ್ಚಿನ ಸೇವೆಯನ್ನು ನೀಡುವ ಜವಾಬ್ದಾರಿ ನಮ್ಮ ಮೇಲಿದೆ ಎಂದರು.

ಶ್ರೀ ವೂಡೇ ಪಿ. ಕೃಷ್ಣ, ಪ್ರೊ. ಸಿ. ನಾಗಣ್ಣ, ಶ್ರೀ ಅರವಿಂದ ಜತ್ತಿ, ಶ್ರೀ ಜಾವಗಲ್ ಶ್ರೀನಾಥ್, ಶ್ರೀ ಎಸ್. ಷಡಕ್ಷರಿ, ಬೆಂಗಳೂರಿನ ಮಿಥಿಕ್ ಸೊಸೈಟಿಯ ಶ್ರೀ ನಾಗರಾಜುರವರು ಮಾತನಾಡಿದರು. ಡಾ. ಸಿ. ರಾಮಚಂದ್ರ, ಶ್ರೀ ಕೆ.ಟಿ. ಚಂದು, ಶ್ರೀ ಪಿ. ಗಂಗಾಧರಸ್ವಾಮಿ, ಶ್ರೀ ಮಹದೇವು, ಶ್ರೀ ಗೌರಯ್ಯ ಹಾಗೂ ಶ್ರೀ ಜವರಪ್ಪ ಇವರುಗಳನ್ನು ಸನ್ಮಾನಿಸಲಾಯಿತು.

ಜ್ಯೋತಿಷ ಮಹಾಮಹೋಪಾಧ್ಯಾಯ ಡಾ. ಕೆ.ಜಿ. ಪುಟ್ಟಹೊನ್ನಯ್ಯನವರು ಸಿದ್ಧಪಡಿಸಿ, ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರದಿಂದ ಪ್ರಕಟಿಸಿರುವ ಶ್ರೀ ಕ್ರೋಧಿ ಸಂವತ್ಸರದ 'ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗ' ಮತ್ತು 2024ನೇ ಇಸವಿಯ ಜೆಎಸ್‌ಎಸ್ ಮಹಾವಿದ್ಯಾಪೀಠ ಹೊರತಂದಿರುವ ಕನ್ನಡ ಮತ್ತು ಇಂಗ್ಲಿಷ್ ಟೇಬಲ್ ಕ್ಯಾಲೆಂಡರ್‌ಗಳನ್ನು ಹಾಗೂ ಬೆಂಗಳೂರು ಚೈತನ್ಯ ಶಾಲೆಯ ವಿದ್ಯಾರ್ಥಿನಿ ಹಾಗೂ ಕವಿಯಿತ್ರಿಯಾದ ಕು. ನೇತ್ರಾ ಕೆ. ಪರ್ಲ್‌ಸನ್‌ರವರು ರಚಿಸಿರುವ 'ಒನ್ ಮೈಂಡ್ ಗೇಮ್' ಕೃತಿಯನ್ನು ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ವಾಟಾಳು, ಬೆಟ್ಟದಪುರ, ಪಡಗೂರು, ಸೋಮಳ್ಳಿ, ಪಡುವಲು, ಮಲ್ಲನಮೂಲೆ, ದೇವನೂರು, ಹೊಸಮಠ, ಕುದೇರು, ಚಿಕ್ಕತುಪ್ಪೂರು, ಕುಂದೂರು, ಬರಡನಪುರ, ಗೌಡಹಳ್ಳಿ, ಮಾದಳ್ಳಿ, ದಂಡಿಕೆರೆ, ಮುಡಿಗುಂಡ, ಸೋಮಹಳ್ಳಿ, ನೀಲಕಂಠಸ್ವಾಮಿ ಮಠ, ಗಾವಡಗೆರೆ, ಹಾಲಹಳ್ಳಿ, ರಾಮಾಪುರ, ಚುಂಚನಹಳ್ಳಿ, ಹಂಗಳ, ಕಸುವಿನಹಳ್ಳಿ, ಶಿರಮಳ್ಳಿ, ಮಾದಾಪುರ, ನಂಜನಗೂಡು ಹಾಗೂ ನವಿಲೂರು ಮಠಗಳ ಶ್ರೀಗಳು ಹಾಗೂ ಹರಗುರುಚರಮೂರ್ತಿಗಳು, ಮಾಜಿ ಸಂಸದರಾದ ಶ್ರೀ ಎಂ. ಶಿವಣ್ಣ, ಮಾಜಿ ಶಾಸಕರಾದ ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ಎಸ್. ಬಾಲರಾಜು, ಸಹಸ್ರಾರು ಭಕ್ತಾದಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

ಜೆಎಸ್‌ಎಸ್ ಕಲಾಮಂಟಪ ಹಾಗೂ ಶ್ರೀಕ್ಷೇತ್ರದ ಜೆಎಸ್‌ಎಸ್ ವಸತಿ ಶಾಲೆಯ ಸಂಗೀತ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ಪ್ರೊ. ಮೊರಬದ ಮಲ್ಲಿಕಾರ್ಜುನ ಸ್ವಾಗತಿಸಿದರು. ಶ್ರೀ ಬಿ. ನಿರಂಜನಮೂರ್ತಿ ನಿರೂಪಿಸಿ, ವಂದಿಸಿದರು.

**ಬಾಲರಾಮ ದೇಶದ ಸಂಸ್ಕೃತಿಯ ಪ್ರತೀಕ**

ಅಯೋಧ್ಯೆಯ ಬಾಲರಾಮ ದೇಶದ ಸಂಸ್ಕೃತಿಯ ಪ್ರತೀಕ ಎಂದು ಪರಮಪೂಜ್ಯ ಜಗದ್ಗುರುಗಳವರು ಜನವರಿ 22ರಂದು ಅಯೋಧ್ಯೆಯಲ್ಲಿ ನಡೆದ ಶ್ರೀರಾಮ ಪ್ರಾಣಪ್ರತಿಷ್ಠಾಪನೆ ಹಾಗೂ ಮಂದಿರ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡುತ್ತಾ ತಿಳಿಸಿದರು. ಶ್ರೀರಾಮನದು ಎಲ್ಲರೂ ಪೂಜಿಸುವ, ಎಲ್ಲರೂ ಒಪ್ಪುವ ವ್ಯಕ್ತಿತ್ವ. ಬೇರೆ ಬೇರೆ ಕಾರಣಗಳಿಂದ ತಡವಾಗಿದ್ದರೂ ಭವ್ಯವಾದ ಶ್ರೀರಾಮನ ಮಂದಿರ ನಿರ್ಮಾಣವಾಗಿದೆ. ಪ್ರತಿ ಹಳ್ಳಿಗಳಲ್ಲೂ ಶ್ರೀರಾಮಮಂದಿರಗಳಿವೆ. ಅಲ್ಲಿ ನಿತ್ಯ ಭಜನೆ, ಗಾಯನ ಹಾಗೂ ಊರಿನ ವ್ಯಾಜ್ಯಗಳ ನ್ಯಾಯ ಪಂಚಾಯ್ತಿಗಳು ನಡೆಯುತ್ತಿರುತ್ತವೆ. ಏಕೆಂದರೆ ಶ್ರೀರಾಮಮಂದಿರದಲ್ಲಿ ರಾಜೀ ಪಂಚಾಯ್ತಿಗಳು ನಡೆದರೆ ನ್ಯಾಯ ದೊರಕುತ್ತದೆ ಎಂಬ ಭಾವನೆ ಜನರ ಮನಸ್ಸಿನಲ್ಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕರ್ನಾಟಕದಿಂದ ಆಗಮಿಸಿದ ಆದಿಚುಂಚನಗಿರಿ ಶ್ರೀಗಳು, ಡಾ. ಡಿ. ವೀರೇಂದ್ರ ಹೆಗ್ಗಡೆ, ಶ್ರೀ ರವಿಶಂಕರ್ ಗುರೂಜಿ, ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳು, ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು, ಶ್ರೀ ವಚನಾನಂದ ಸ್ವಾಮಿಗಳು, ಶ್ರೀ ಶಾಂತವೀರ ಸ್ವಾಮಿಗಳು, ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮಿಗಳು ಮೊದಲಾದವರು ಭಾಗವಹಿಸಿದ್ದರು.

**ಉತ್ತಮ ಭವಿಷ್ಯಕ್ಕೆ ಶಿಕ್ಷಣ ಬಹಳ ಮುಖ್ಯ**

ಉತ್ತಮ ಭವಿಷ್ಯಕ್ಕೆ ಶಿಕ್ಷಣ ಬಹಳ ಮುಖ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಜನವರಿ 26ರಂದು ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಸಿಬಿಎಸ್‌ಇ, ಐಸಿಎಸ್‌ಇ ಮತ್ತು ರಾಜ್ಯ ಖಾಸಗಿ ಶಾಲೆಗಳ ಆಡಳಿತ ಸಂಸ್ಥೆಗಳ ಒಕ್ಕೂಟ ಹಾಗೂ ಚಿರಾಗ್ ಆ್ಯಡ್ಸ್ ಸಹಯೋಗದಲ್ಲಿ ಆಯೋಜಿಸಿದ್ದ ಮೈಸೂರು ಶೈಕ್ಷಣಿಕ ಮೇಳ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಪ್ರತಿಯೊಬ್ಬರಿಗೂ ಶಿಕ್ಷಣ ಬಹಳ ಮುಖ್ಯ. ಶಿಕ್ಷಣವು ವಿದ್ಯಾರ್ಥಿಗಳ ಉತ್ತಮ ಭವಿಷ್ಯವನ್ನು ರೂಪಿಸಿ ಅವರನ್ನು ಸತ್ಪ್ರಜೆಗಳನ್ನಾಗಿ ಮಾಡುತ್ತದೆ. ಪ್ರತಿಯೊಬ್ಬರೂ ಜ್ಞಾನ ಸಂಪಾದನೆ ಮಾಡಬೇಕು. ಅದಕ್ಕೆ ಯಾವುದೇ ಮಿತಿ ಮತ್ತು ಕೊನೆ ಇರುವುದಿಲ್ಲ. ಎಲ್ಲರೂ ಜ್ಞಾನ, ಅರಿವು, ಶಿಕ್ಷಣ ಸಂಪಾದನೆಗಾಗಿ ಮಾಡಲು ಹೆಚ್ಚಿನ ಆಸಕ್ತಿ ತೋರಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶ್ರೀ ಸುಧಾಕರ ಎಸ್. ಶೆಟ್ಟಿ, ಶ್ರೀ ವಿ. ವೆಂಕಟೇಶ್, ಶ್ರೀ ಎಂ.ಎಸ್. ರವೀಂದ್ರಸ್ವಾಮಿ, ಶ್ರೀ ಎಂ. ಅಮೀನ್, ಶ್ರೀ ಎಸ್. ರಾಧಾಕೃಷ್ಣ, ಶ್ರೀ ಮಂಜುನಾಥ್ ಶ್ರೀವತ್ಸ, ಶ್ರೀ ಕೆ.ಎಸ್. ಸ್ವರೂಪಿನಿ ಸಂದೇಶ್, ಶ್ರೀ ಎಸ್. ವಿವೇಕ್ ಮೊದಲಾದವರುಗಳು ಉಪಸ್ಥಿತರಿದ್ದರು.

**ಶರಣರ ವಚನಗಳಿಂದ ಸಾರ್ಥಕತೆ ಸಾಧ್ಯ**

ಶರಣರ ವಚನಗಳನ್ನು ಅರ್ಥೈಸಿಕೊಂಡರೆ ಬದುಕಿನಲ್ಲಿ ಸಾರ್ಥಕತೆ ಸಾಧ್ಯವಾಗುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜನವರಿ 26ರಂದು ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಜಿಲ್ಲಾ ಮತ್ತು ನಗರ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ವೇದಿಕೆ ವತಿಯಿಂದ ಆಯೋಜಿಸಿದ್ದ ಕದಳಿ ಪ್ರಶಸ್ತಿ ಪ್ರದಾನ ಹಾಗೂ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ವಚನಗಳು ಎಲ್ಲ ಕಾಲಕ್ಕೂ ಪ್ರಸ್ತುತವಾಗಿವೆ. ಬಸವಾದಿ ಶರಣರು ನಾಡಿಗೆ ಕೊಟ್ಟ ಕೊಡುಗೆ ಅಪಾರವಾದುದು. ಅವರು ರಚಿಸಿದ ವಚನಗಳ ತಾತ್ಪರ್ಯ ಎಲ್ಲ ಕಾಲಕ್ಕೂ ಸಲ್ಲುತ್ತದೆ ಎಂದು ಹೇಳಿದರು.

ರಂಗಭೂಮಿ ಕಲಾವಿದರಾದ ಶ್ರೀಮತಿ ಬಿ. ಜಯಶ್ರೀಯವರಿಗೆ ಕದಳಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಬಾಲಸಾಹಿತಿ ಕು. ರಿಷಿ ಶಿವಪ್ರಸನ್ನರವರ ಐದು ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು.

ಶ್ರೀ ಅರವಿಂದ ಜತ್ತಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಡಾ. ಗೊ.ರು. ಚನ್ನಬಸಪ್ಪನವರು ಕೃತಿಗಳನ್ನು ಕುರಿತು ಮಾತನಾಡಿದರು. ಡಾ. ಸಿ. ಸೋಮಶೇಖರ್, ಶ್ರೀ ಮ.ಗು. ಸದಾನಂದಯ್ಯ, ಶ್ರೀ ಹೆಳವರಹುಂಡಿ ಸಿದ್ದಪ್ಪನವರುಗಳು ಉಪಸ್ಥಿತರಿದ್ದರು. ಕು. ಮಧುರ ಪ್ರಾರ್ಥಿಸಿದರು. ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ ಸ್ವಾಗತಿಸಿದರು. ಶ್ರೀಮತಿ ಸುಧಾ ಮೃತ್ಯುಂಜಯಪ್ಪ ಪ್ರಶಸ್ತಿಪತ್ರ ವಾಚನ ಮಾಡಿದರು. ಶ್ರೀಮತಿ ವಾಗ್ದೇವಿ ವರದಿ ವಾಚಿಸಿದರು. ಶ್ರೀಮತಿ ರಾಜೇಶ್ವರಿ ಮಲ್ಲಿಕಾರ್ಜುನಪ್ಪ ವಂದಿಸಿದರು. ಡಾ. ಹೆಚ್.ಟಿ. ಶೈಲಜ ಕಾರ್ಯಕ್ರಮ ನಿರೂಪಿಸಿದರು.

## ಸ್ತ್ರೀಯರಿಗೆ ಶಿಕ್ಷಣ ನೀಡಿದರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ

ಸ್ತ್ರೀಯರಿಗೆ ಶಿಕ್ಷಣ ನೀಡಿದರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಜನವರಿ 25ರಂದು ಜ್ಯೋತಿರ್ಗಮಯ ಸೇವಾ ಟ್ರಸ್ಟ್‌ನ ಹೆಣ್ಣುಮಕ್ಕಳ ಉಚಿತ ವಿದ್ಯಾರ್ಥಿನಿಲಯದ ನೂತನ ಕಟ್ಟಡದ ಭೂಮಿಪೂಜೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತ ತಿಳಿಸಿದರು. ಈ ಸಂಸ್ಥೆಯ ವಿದ್ಯಾರ್ಥಿನಿಲಯದಿಂದ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳಿಗೆ ತುಂಬಾ ಅನುಕೂಲವಾಗುತ್ತದೆ. ಇದು ಹೆಣ್ಣುಮಕ್ಕಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಉತ್ತಮ ಅವಕಾಶ ಕಲ್ಪಿಸಲಿದೆ ಎಂದರು.

ಕುದೇರು ಮಠದ ಶ್ರೀಗಳು, ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸ, ಶ್ರೀ ಹೆಚ್.ಎಂ. ಗಣೇಶ್ ಪ್ರಸಾದ್, ಶ್ರೀ ಧರ್ಮಪ್ರಸಾದ್, ಶ್ರೀ ಎಂ. ಪ್ರದೀಪ್‌ಕುಮಾರ್, ಶ್ರೀ ಬಿ.ವಿ. ಮಂಜುನಾಥ್, ಶ್ರೀ ಕಾನ್ಯ ಶಿವಮೂರ್ತಿ, ಶ್ರೀ ಹಿನಕಲ್ ಬಸವರಾಜು, ಶ್ರೀ ಜಯಪ್ರಕಾಶ್, ಶ್ರೀ ರವಿಶಂಕರ್‌ರವರುಗಳು ಉಪಸ್ಥಿತರಿದ್ದರು. ಕು. ಪಲ್ಲವಿ ಸ್ವಾಗತಿಸಿದರು. ಶ್ರೀ ಅಶೋಕ್ ವಂದಿಸಿದರು. ಕು. ಚಂದನ ಕಾರ್ಯಕ್ರಮ ನಿರೂಪಿಸಿದರು.

## ಜನಮಾನಸದಲ್ಲಿ ಭಕ್ತಿಯೆಂಬ ಪ್ರೀತಿ ಬಿತ್ತಿರುವ ಗವಿಮಠ

ಜನಮಾನಸದಲ್ಲಿ ಭಕ್ತಿಯೆಂಬ ಪ್ರೀತಿಯನ್ನು ಬಿತ್ತುವ ಕಾರ್ಯವನ್ನು ಗವಿಮಠ ಮಾಡುತ್ತಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜನವರಿ 27ರಂದು ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವದಲ್ಲಿ ಮಹಾರಥೋತ್ಸವಕ್ಕೆ ಚಾಲನೆ ನೀಡಿ ಮಾತನಾಡುತ್ತಾ ತಿಳಿಸಿದರು. ಗವಿಮಠ ಈ ಭಾಗದ ಕಾಮಧೇನುವಾಗಿದೆ. ಇದು ಶ್ರೀಮಠದ ಪೂಜ್ಯರ ತಪಸ್ಸಿನ ಫಲ. ಪ್ರತಿ ವರ್ಷ ಜರುಗುವ ಈ ರಥೋತ್ಸವದಲ್ಲಿ

ಪಾಲ್ಗೊಳ್ಳುವ ನಿಮ್ಮೆಲ್ಲರ ಭಕ್ತಿ ಶ್ರೇಷ್ಠವಾದುದು. ಅಭಿನವ ಗವಿಸಿದೇಶ್ವರ ಶ್ರೀಗಳು ತಪೋನಿಷ್ಠರು, ಜನಮಾನಸದ ಏಳ್ಗೆಗಾಗಿ ತಮ್ಮ ಬದುಕನ್ನು ಅರ್ಪಿಸಿಕೊಂಡಿದ್ದಾರೆ. ಅವರ ಆಳವಾದ ಚಿಂತನೆ, ಸುಮಧುರವಾದ ಮಾತುಗಳು ಅವರ ವ್ಯಕ್ತಿತ್ವದ ಪ್ರತಿಬಿಂಬ. ಗುರುಗಳು ಮತ್ತು ಭಕ್ತರ ನಡುವಿನ ಬಾಂಧವ್ಯ ಎಷ್ಟು ಅಗಾಧವಾಗಿದೆ ಎಂಬುದಕ್ಕೆ ಈ ಜಾತ್ರೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಕೊಪ್ಪಳದ ಜಗದ್ಗುರು ಶ್ರೀ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮಿಗಳು, ತಿಕೋಟ ಮತ್ತು ಹಿರೇಸಿಂದೋಗಿ ಮಠಗಳ ಶ್ರೀಗಳು, ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್, ಸಚಿವರುಗಳಾದ ಶ್ರೀ ಭಗವಂತ್ ಖೂಬಾ, ಶ್ರೀ ಶಿವರಾಜ್ ತಂಗಡಗಿ, ನಿವೃತ್ತ ಐಎಎಸ್ ಅಧಿಕಾರಿಗಳಾದ ಶ್ರೀ ಚಿರಂಜೀವಿ ಸಿಂಗ್, ಇಸ್ರೋ ವಿಜ್ಞಾನಿಗಳಾದ ಶ್ರೀ ಪಿ. ವೀರಮುತ್ತುವೇಲ್, ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮೊದಲಾದವರುಗಳು ಉಪಸ್ಥಿತರಿದ್ದರು.


**ಕವಟಗಿಮಠರವರ ಸಾಮಾಜಿಕ ಸೇವೆ ಅನನ್ಯವಾದುದು**

ಕವಟಗಿಮಠರವರ ಸಾಮಾಜಿಕ ಸೇವೆ ಅನನ್ಯವಾದುದು ಎಂದು ಪರಮಪೂಜ್ಯ ಜಗದ್ಗುರುಗಳವರು ಜನವರಿ 16ರಂದು ಸವದತ್ತಿಯಲ್ಲಿ ಶ್ರೀ ಮಹಾಂತೇಶ ಕವಟಗಿಮಠರವರ 58ನೇ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ ಹಾಗೂ ಮಹಾಂತೇಶ ಕವಟಗಿಮಠ ಫೌಂಡೇಷನ್‌ನ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತ ತಿಳಿಸಿದರು. ಮನುಷ್ಯ ಬದುಕಿನಲ್ಲಿ ಸಾಮಾಜಿಕ ಸೇವಾಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು ಬಹಳ ಮುಖ್ಯ. ಜಗತ್ತಿನಲ್ಲಿ ದೊಡ್ಡ ಧರ್ಮ ಯಾವುದೆಂದರೆ ಸೇವಾಧರ್ಮ. ಬಸವಣ್ಣನವರು ಹೇಳುವಂತೆ ದಯವೇ ಧರ್ಮದ ಮೂಲ. ಅದು ಭಾರತೀಯರಲ್ಲಿ ರಕ್ತಗತವಾಗಿ ಬಂದಿರುವಂಥದ್ದು. ಹೀಗೆ ಎಲ್ಲಾ ಸೇವಾಕಾರ್ಯಗಳಲ್ಲೂ ಶ್ರೀ ಮಹಾಂತೇಶ ಕವಟಗಿಮಠ ಹಾಗೂ ಅವರ ಕುಟುಂಬ ತೊಡಗಿಕೊಂಡು ಬಂದಿದೆ ಎಂದು ಹೇಳಿದರು.

ಹುಬ್ಬಳ್ಳಿ, ಗದಗ, ನಿಡಸೋಸಿ, ಜಗದ್ಗುರುಗಳು, ಸಿದ್ಧಗಂಗಾ ಶ್ರೀಗಳು, ಇಂಚಲದ ಶ್ರೀಗಳು, ಕೂಡಲಸಂಗಮ, ಮುರಗೋಡ, ಧಾರವಾಡ, ಹುಕ್ಕೇರಿ, ನಾಗನೂರು, ಸವದತ್ತಿ, ಶೇಗುಣಸಿ ಮಠಗಳ ಶ್ರೀಗಳು, ಶ್ರೀ ಬಿ.ಎಸ್. ಯಡಿಯೂರಪ್ಪನವರು, ಶ್ರೀ ಪ್ರಲ್ಹಾದ್ ಜೋಷಿ, ಶ್ರೀ ಪ್ರಭಾಕರ್ ಕೋರೆ, ಮೊದಲಾದವರುಗಳು ಉಪಸ್ಥಿತರಿದ್ದರು.

□

# ಪ್ರಸಾದ



**ಕೃತಿ-ಸ್ವೀಕೃತಿ**

---

**ಕೊಡಗಿನ ಲಿಂಗರಾಜ (ಐತಿಹಾಸಿಕ ಕಾದಂಬರಿ)**
ಡಾ. ಬಿ. ಪ್ರಭಾಕರ ಶಿಶಿಲ
ಪ್ರ.: ವಸಂತ ಪ್ರಕಾಶನ
ಜಯನಗರ, ಬೆಂಗಳೂರು
ಪು: 184, ಬೆಲೆ: 175/–

**Veerashaiva Lingayats Contribution to Eucation and Dasoha Culture**
Sri B.A. Sharanegowda
Pub: Dr. Basavaraj Patil and his Brothers, Sisters
J.P. Nagar, Bengaluru
P: 80, Price: 45/–

**ಹದಿಹರೆಯದ ಹಾದಿ (ನಾಲ್ಕರಿಂದ ಹದಿನೆಂಟರವರೆಗಿನ ನೆನಪುಗಳು)**
ಡಾ. ಬಿ. ಪ್ರಭಾಕರ ಶಿಶಿಲ
ಪ್ರ.: ವಸಂತ ಪ್ರಕಾಶನ
ಜಯನಗರ, ಬೆಂಗಳೂರು
ಪು: 200, ಬೆಲೆ: 180/–

**Sharan Jeevan Darshan (Khand-I)**
Sri Raju B. Jubare
Pub: Hiremath Samsthan Trust, Maharashtra
Basava Parishad
Bhalki, Bidar
P: 624, Price: 400/–

**ಒಳದನಿ (ಕವಿತೆ)**
ಶ್ರೀಮತಿ ಪುಷ್ಪ ಬಸವರಾಜ ಬಣಕಾರ
ಪ್ರ.: ಶುಭದ ಪ್ರಕಾಶನ, ಜರಗನಹಳ್ಳಿ
ಜೆ.ಪಿ.ನಗರ, ಬೆಂಗಳೂರು
ಪು: 80, ಬೆಲೆ: 80/–

**ವಚನ ವಲ್ಲರಿ (ಆಧುನಿಕ ವಚನಗಳು)**
ಶ್ರೀಮತಿ ಪುಷ್ಪ ಬಸವರಾಜ ಬಣಕಾರ
ಪ್ರ.: ಶುಭದ ಪ್ರಕಾಶನ, ಜರಗನಹಳ್ಳಿ
ಜೆ.ಪಿ.ನಗರ, ಬೆಂಗಳೂರು
ಪು: 102, ಬೆಲೆ: 100/–

**ಎನ್ನೊಳಗಣ (ಬಸವಪ್ರಭು)**
ಶ್ರೀಮತಿ ಪುಷ್ಪ ಬಸವರಾಜ ಬಣಕಾರ
ಪ್ರ.: ಶುಭದ ಪ್ರಕಾಶನ, ಜರಗನಹಳ್ಳಿ
ಜೆ.ಪಿ.ನಗರ, ಬೆಂಗಳೂರು
ಪು: 124, ಬೆಲೆ: 100/–

**ಅನುವರ (ಕಾವ್ಯ)**
ಶ್ರೀಮತಿ ಪುಷ್ಪ ಬಸವರಾಜ ಬಣಕಾರ
ಪ್ರ.: ಶುಭದ ಪ್ರಕಾಶನ, ಜರಗನಹಳ್ಳಿ
ಜೆ.ಪಿ.ನಗರ, ಬೆಂಗಳೂರು
ಪು: 80, ಬೆಲೆ: 100/–

**ನಾ ಕಂಡ ನಮ್ಮವರು (ವ್ಯಕ್ತಿ ಚಿತ್ರಗಳು)**
ಶ್ರೀಮತಿ ಭಾರ್ಗವಿ ನಾರಾಯಣ್
ಪ್ರ.: ಅಂಕಿತ ಪುಸ್ತಕ
ಬಸವನಗುಡಿ, ಬೆಂಗಳೂರು
ಪು: 152, ಬೆಲೆ: 130/–

**ಲಿಂಗನಿಷ್ಠ ಧರ್ಮ ಲಿಂಗಾಯತ ಧರ್ಮ**
ಗುಂಬೀಶಂ (ಗುಂಡಕನಾಳ)
ಪ್ರ.: ಸಹಕಾರ ಪ್ರಕಾಶನ
ಚಿಕ್ಕತೊಟ್ಲು ಕೆರೆ
ತುಮಕೂರು ತಾ. ಮತ್ತು ಜಿಲ್ಲೆ
ಪು: 284, ಬೆಲೆ: 101/–

# ಲೇಖಕರ ವಿಳಾಸ

**ಡಾ. ಎಂ.ಎನ್. ನಂದೀಶ್ ಹಂಚೆ**
# 217, 6ನೇ ಕ್ರಾಸ್, ಲಲಿತಮಹಲ್ ನಗರ
ಮೈಸೂರು 570028
ಮೊ: 9008815888

**ಡಾ. ಎಸ್.ಜಿ. ರಾಮದಾಸ ರೆಡ್ಡಿ**
ಪ್ರಾಧ್ಯಾಪಕರು, ಮುಖ್ಯಸ್ಥರು
ಇತಿಹಾಸ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು 570023
ಮೊ: 9845309081

**ಪ್ರೊ. ಮೊರಬದ ಮಲ್ಲಿಕಾರ್ಜುನ**
#3/1288, 12ನೇ ಮೇನ್
ವಿಜಯನಗರ 4ನೇ ಹಂತ
ಮೈಸೂರು 570017
ಮೊ: 9986137389

**ಕೆ.ಬಿ. ಹೇಮಲತ**
ಸಂಶೋಧಕರು, ಜೆಎಸ್ಎಸ್ ಕಲಾ, ವಾಣಿಜ್ಯ
ಮತ್ತು ವಿಜ್ಞಾನ ಕಾಲೇಜು, ಮೈಸೂರು
ಮೊ: 9964586169

**ಡಾ. ಎನ್. ಎಂ. ಗಿರಿಜಾಪತಿ**
ಸಹಾಯಕ ಪ್ರಾಧ್ಯಾಪಕರು
ಜೆಎಸ್ಎಸ್ ಕಲಾ ಮತ್ತು
ವಾಣಿಜ್ಯ ಕಾಲೇಜು
ಗುಂಡ್ಲುಪೇಟೆ 571111
ಮೊ: 9844582238

**ಡಾ. ಎ.ವಿ. ನರಸಿಂಹಮೂರ್ತಿ**
ದೇವಗಿರಿ, 7ಎ/2
ಜಯಲಕ್ಷ್ಮೀಪುರಂ
ಮೈಸೂರು 570012
ಮೊ: 9916224816

**ಡಾ. ಬಿ. ನಂಜುಂಡಸ್ವಾಮಿ**
ಪಂಡಿತ ತಾರಾನಾಥ್
ಆಯುರ್ವೇದ ಚಿಕಿತ್ಸಾಲಯ
ತುಮಕೂರು ಷಾಪಿಂಗ್ ಕಾಂಪ್ಲೆಕ್ಸ್
ಬಿ.ಹೆಚ್. ರಸ್ತೆ
ತುಮಕೂರು 572102
ಮೊ : 9880996196

ಹಿಂಬದಿ ಪುಟದ ಚಿತ್ರ

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1064ನೆಯ ಜಯಂತಿ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿವಿಧ ಪ್ರಶಸ್ತಿಗಳ ಪುರಸ್ಕೃತರುಗಳನ್ನು ಸನ್ಮಾನಿಸಲಾಯಿತು. ಡಾ. ಕೆ.ಬಿ. ಗಣಪತಿ, ಶ್ರೀ ಅರವಿಂದ ಜತ್ತಿ, ಶ್ರೀ ನಿಜಗುಣಪ್ರಭು ತೋಂಟದಾರ್ಯ ಸ್ವಾಮಿಗಳು, ಶ್ರೀ ವೂಡೇ ಪಿ. ಕೃಷ್ಣ ಹಾಗೂ ಶ್ರೀ ಎಸ್. ಷಡಕ್ಷರಿ ಹಾಗೂ ಶ್ರೀ ಜವರಪ್ಪ, ಶ್ರೀ ಮಹದೇವು, ಶ್ರೀ ನಾಗರಾಜು, ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, ಶ್ರೀ ಕೆ.ಟಿ. ಚಂದು, ಡಾ. ಸಿ. ರಾಮಚಂದ್ರ, ಡಾ. ಸಿ. ಸೋಮಶೇಖರ್, ಪ್ರೊ. ಸಿ. ನಾಗಣ್ಣ, ಶ್ರೀ ಗೌರಯ್ಯ, ಶ್ರೀ ಪಿ. ಗಂಗಾಧರಸ್ವಾಮಿ, ಕು. ನೇತ್ರಾ ಕೆ. ಪರ್ಲ್‌ಸನ್‌ರವರುಗಳಿದ್ದಾರೆ (10 ಜನವರಿ 2024)



ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ಗುರುನಮನ ಕಾರ್ಯಕ್ರಮವನ್ನು ಸುತ್ತೂರು, ಮತ್ತು ಸಿರಿಗೆರೆ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಉದ್ಘಾಟಿಸಿದರು. ಶ್ರೀ ಶಿವಾನಂದ ಪಾಟೀಲ್, ಶ್ರೀ ಬಸಲಿಂಗ ಸ್ವಾಮಿಗಳು, ಭಾಲ್ಕಿ ಶ್ರೀಗಳು, ಶ್ರೀ ಎಂ.ಬಿ. ಪಾಟೀಲ್ ಮತ್ತು ಶ್ರೀ ಹೆಚ್.ಕೆ. ಪಾಟೀಲ್‌ರವರುಗಳಿದ್ದಾರೆ (2 ಜನವರಿ 2024)




ಧಾರವಾಡ ಶ್ರೀ ಮುರುಘಾಮಠದ ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಪ್ರಸಾದ ನಿಲಯದ ಹಿರಿಯ ವಿದ್ಯಾರ್ಥಿಗಳ ಸಂಘದ ರಜತ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರು ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿರುವುದು. ಶ್ರೀ ಮಲ್ಲನಗೌಡ ಎಸ್. ಪಾಟೀಲ್, ಡಾ. ಎಸ್.ಆರ್. ಗುಂಜಾಳ, ಶ್ರೀಮತಿ ಶಿವಲೀಲಾ ವಿನಯ್ ಕುಲಕರ್ಣಿ, ಪ್ರೊ. ಟಿ.ಸಿ. ತಾರಾನಾಥ್, ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಹಾಗೂ ಸೇಡಂನ ಶ್ರೀ ಸದಾಶಿವ ಸ್ವಾಮಿಗಳಿದ್ದಾರೆ (4 ಜನವರಿ 2024)



ಬೆಳಗಾವಿ ಜಿಲ್ಲೆ ಮೂಡಲಗಿ ತಾಲ್ಲೂಕು ಪಿ.ಜಿ. ಹುಣಶ್ಯಾಳದ ಶ್ರೀ ಸಿದ್ಧಲಿಂಗ ಕೈವಲ್ಯಾಶ್ರಮದಲ್ಲಿ ಆಯೋಜಿಸಿದ್ದ ಶ್ರೀ ನಿಜಗುಣ ದೇವರ ಷಷ್ಠ್ಯಬ್ದಿ ಸಮಾರಂಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಶ್ರೀ ನಿಜಗುಣ ದೇವರನ್ನು ಸನ್ಮಾನಿಸಿ ಅಭಿನಂದಿಸಿದರು. ಹುಕ್ಕೇರಿಯ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಮಹಾಲಿಂಗಪುರದ ಶ್ರೀ ಸಹಜಾನಂದ ಸ್ವಾಮಿಗಳು ಮೊದಲಾದವರುಗಳಿದ್ದಾರೆ (3 ಜನವರಿ 2023)



ಮೈಸೂರು ಶ್ರೀ ಕುಂದೂರು ಮಠದ ಡಾ. ಇಮ್ಮಡಿ ಶಿವಬಸವ ಸ್ವಾಮಿಗಳವರ 85ನೇ ಜಯಂತಿ ಸಂಸ್ಮರಣೋತ್ಸವದಲ್ಲಿ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳವರನ್ನು ಪಟ್ಟಾಧಿಕಾರ ರಜತ ಮಹೋತ್ಸವದ ಅಂಗವಾಗಿ ಸುತ್ತೂರು ಮತ್ತು ಗದಗ ಜಗದ್ಗುರುಗಳವರು ಹಾಗೂ ಸಿದ್ಧಗಂಗಾ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಸನ್ಮಾನಿಸಲಾಯಿತು. ಕನಕಪುರ ಮತ್ತು ಸಾಲೂರು ಮಠಗಳ ಶ್ರೀಗಳು ಹಾಗೂ ಇತರರಿದ್ದಾರೆ (7 ಜನವರಿ 2024)



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀಮತಿ ಸುಧಾಮೂರ್ತಿಯವರು ವಸತಿ ಶಾಲೆಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು (10 ಜನವರಿ 2024)



ಮೈಸೂರು ಶ್ರೀ ರಾಜೇಂದ್ರ ಭವನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಜಿ.ಎ. ಶಿವಲಿಂಗಯ್ಯ ಹಾಗೂ ಡಾ. ಎಸ್.ಎಸ್. ವಿಜಯರವರುಗಳಿಗೆ 2023ರ ಶಕುಂತಲ ಜಯದೇವ ಶರಣ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶ್ರೀ ಮ.ಗು. ಸದಾನಂದಯ್ಯ, ಶ್ರೀಮತಿ ಶಕುಂತಲ ಜಯದೇವ, ಪ್ರೊ. ಎನ್.ಕೆ. ಲೋಕನಾಥ್, ಡಾ. ಸಿ. ಸೋಮಶೇಖರ್, ಶ್ರೀಮತಿ ಚಂಚಲದೇವಿ, ಶ್ರೀಮತಿ ಜಯಾಗೌಡ ಹಾಗೂ ಶ್ರೀ ಟಿ.ಎಸ್. ಕುಮಾರಸ್ವಾಮಿಯವರುಗಳಿದ್ದಾರೆ (7 ಜನವರಿ 2024)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಸಿರಿಯಾಕ್ ಆರ್ಥೋಡಾಕ್ಸ್ ಚರ್ಚ್‌ನ ಮುಖ್ಯಸ್ಥರಾದ ಶ್ರೀ ಮೊರನ್ ಮೊರ್ ಇಗ್ನೇಷಿಯಸ್ ಅಫೆರೆಮ್–2ರವರ ನೇತೃತ್ವದ ಧರ್ಮಗುರುಗಳ ನಿಯೋಗವು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಅಭಿನಂದಿಸುತ್ತಿರುವುದು. ನಿಯೋಗದ ಸದಸ್ಯರು ಇದ್ದಾರೆ (28 ಜನವರಿ 2024)



ಮುಡುಕುತೊರೆಯ ಶ್ರೀ ತೋಪಿನ ಮಠದಲ್ಲಿ ನಡೆದ ಶ್ರೀ ಮಹಾಲಿಂಗ ಸ್ವಾಮಿಗಳವರ 3ನೇ ವರ್ಷದ ಪುಣ್ಯಸ್ಮರಣೋತ್ಸವ ಹಾಗೂ ಧಾರ್ಮಿಕ ಸಮಾರಂಭವನ್ನು ಸುತ್ತೂರು ಹಾಗೂ ಶ್ರೀಶೈಲ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಹೊನ್ನಲಗೆರೆ, ಮರಳೇಗವಿ ಮಠ ಹಾಗೂ ತೋಪಿನ ಮಠಗಳ ಶ್ರೀಗಳು, ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸ ಮೊದಲಾದವರುಗಳಿದ್ದಾರೆ (12 ಜನವರಿ 2023)




ಸವದತ್ತಿಯಲ್ಲಿ ಶ್ರೀ ಮಹಾಂತೇಶ ಕವಟಗಿಮಠರವರ 58ನೇ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ ಹಾಗೂ ಮಹಾಂತೇಶ ಕವಟಗಿಮಠ ಫೌಂಡೇಷನ್‌ನ್ನು ಪರಮಪೂಜ್ಯ ಜಗದ್ಗುರುಗಳು, ಸಿದ್ಧಗಂಗಾ ಶ್ರೀಗಳು, ಗದಗ ಜಗದ್ಗುರುಗಳು, ಇಂಚಲದ ಶ್ರೀಗಳು ಸೇರಿದಂತೆ ನಾಡಿನ ವಿವಿಧ ಮಠಾಧೀಶರುಗಳ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಮಹಾಂತೇಶ ಕವಟಗಿಮಠ, ಶ್ರೀ ಪ್ರಭಾಕರ್ ಕೋರೆ, ಶ್ರೀ ಪ್ರಲ್ಹಾದ್ ಜೋಷಿ, ಶ್ರೀ ಬಿ.ಎಸ್. ಯಡಿಯೂರಪ್ಪನವರು ಮೊದಲಾದವರುಗಳಿದ್ದಾರೆ (16 ಜನವರಿ 2024)



ಮೈಸೂರು ಸರಸ್ವತಿಪುರಂ ಜೆಎಸ್ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಜಿಲ್ಲಾ ಮತ್ತು ನಗರ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶ್ರೀಮತಿ ಬಿ. ಜಯಶ್ರೀರವರಿಗೆ ಕದಳಿಶ್ರೀ ಪ್ರಶಸ್ತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಪ್ರದಾನ ಮಾಡಲಾಯಿತು. ಶ್ರೀಮತಿ ವಾಗ್ದೇವಿ, ಶ್ರೀಮತಿ ಸುಧಾ ಮೃತ್ಯುಂಜಯಪ್ಪ, ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಕು. ರಿಷಿ ಶಿವಪ್ರಸನ್ನ, ಶ್ರೀ ಕೆ. ಆನಂದರಾಜು, ಡಾ. ಸಿ. ಸೋಮಶೇಖರ್, ಡಾ. ಗೊ.ರು. ಚನ್ನಬಸಪ್ಪ, ಶ್ರೀ ಅರವಿಂದ ಜತ್ತಿ, ಶ್ರೀ ಮ.ಗು. ಸದಾನಂದಯ್ಯ ಹಾಗೂ ಶ್ರೀ ಹೆಳವರಹುಂಡಿ ಸಿದ್ದಪ್ಪನವರುಗಳಿದ್ದಾರೆ (26 ಜನವರಿ 2024)



ಅಮೆರಿಕದಲ್ಲಿ ನೆಲೆಸಿರುವ ಮಂಡ್ಯದ ಡಾ. ಎಚ್.ಎನ್ ಲಕ್ಷ್ಮಿನರಸಿಂಹಮೂರ್ತಿಯವರು ಶ್ರೀ ಸುತ್ತೂರು ಕ್ಷೇತ್ರಕ್ಕೆ ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜೆಎಸ್ಎಸ್ ವಸತಿ ಶಾಲೆಯ ಸಹಸ್ರಾರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು (17 ಜನವರಿ 2024)




ಕೊಪ್ಪಳ ಶ್ರೀ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವದಲ್ಲಿ ಮಹಾರಥೋತ್ಸವಕ್ಕೆ ಚಾಲನೆ ನೀಡಿ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡುತ್ತಿರುವುದು. ಶ್ರೀ ಪಿ. ವೀರಮುತ್ತುವೇಲ್, ಶ್ರೀ ಚಿರಂಜೀವಿ ಸಿಂಗ್, ಹಿರೇಸಿಂದೋಗಿ ಮತ್ತು ತಿಕೋಟಾ ಮಠಗಳ ಶ್ರೀಗಳು ಹಾಗೂ ಜಗದ್ಗುರು ಶ್ರೀ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮಿಗಳು ಮೊದಲಾದವರಿದ್ದಾರೆ (27 ಜನವರಿ 2024)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಅಯೋಧ್ಯೆಯ ಶ್ರೀರಾಮಲಲ್ಲಾ ಮೂರ್ತಿಯ ಶಿಲ್ಪಿಗಳು ಹಾಗೂ ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳಾದ ಶ್ರೀ ಅರುಣ್ ಯೋಗಿರಾಜ್‌ರವರು ಕುಟುಂಬ ಸಮೇತ ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು (26 ಜನವರಿ 2024)

Registered with the Registrar of Newspapers in India Under No. 50622 / 1986
'Prasada' Monthly, Vol. 39 Issue No. 1, January 2024



ISSN 2583-7648
9 772583 764006

ಬಿಡಿ ಪ್ರತಿ : ರೂ.10/-

e-mail: prasadamagazine@gmail.com * www.jssonline.org